रेलवे भर्ती बोर्ड / RAILWAY RECRUITMENT BOARD
सी०ई०एन० ०९ /२०२५ -7 वें सीपीसी वेतन मैट्रिक्स के लेवल १ में विभिन्न पदों हेतु
CEN 09/2025 - Various Posts in Level 1 of 7th CPC Pay Matrix

# RRB Group D 2025

## Level-1 · CEN 09/2025 · General Science · Question Paper Compilation

**Kannada**

All 48 Shifts (Sets) · General Science Section · Official Answer Key

## About this Compilation

This booklet compiles all **48 shift papers** of the **RRB Group D (Level-1) 2025** examination (CEN 09/2025) in **Kannada** (**General Science** section only), with the correct option marked as per the official answer key.

✓ Correct option (highlighted green)

**2 of these 1200 questions are shown in English.** RRB did not release them in Kannada to any candidate whose response sheet we could reach, so the official English version is printed instead and marked with an ENGLISH chip. Nothing here is machine translated.

### How to use

- Use the **Index** page to jump directly to any set (clickable).
- Questions are grouped by subtopic within each section, so similar questions sit together.
- Diagram and wide-table questions appear at the end of their section at full width.
- The correct answer is highlighted in green with a tick.

### More from QMaths


Check your marks, normalized score and zone-wise rank free at **rank.qmaths.in**. Master English vocabulary with the **Blackbook** app.




***Toppers' Choice, Blackbook of English Vocabulary, Now available in App format : DOWNLOAD NOW***

## Index — All Sets (click to open)


Set 1 03 Aug 2026 9:00 AM - 10:30 AM
Set 2 03 Aug 2026 12:45 PM - 2:15 PM
Set 3 03 Aug 2026 4:30 PM - 6:00 PM
Set 4 04 Aug 2026 9:00 AM - 10:30 AM
Set 5 04 Aug 2026 12:45 PM - 2:15 PM
Set 6 04 Aug 2026 4:30 PM - 6:00 PM
Set 7 05 Aug 2026 9:00 AM - 10:30 AM
Set 8 05 Aug 2026 12:45 PM - 2:15 PM
Set 9 05 Aug 2026 4:30 PM - 6:00 PM
Set 10 06 Aug 2026 9:00 AM - 10:30 AM
Set 11 06 Aug 2026 12:45 PM - 2:15 PM
Set 12 06 Aug 2026 4:30 PM - 6:00 PM
Set 13 09 Aug 2026 9:00 AM - 10:30 AM
Set 14 09 Aug 2026 12:45 PM - 2:15 PM
Set 15 09 Aug 2026 4:30 PM - 6:00 PM
Set 16 10 Aug 2026 9:00 AM - 10:30 AM
Set 17 10 Aug 2026 12:45 PM - 2:15 PM
Set 18 10 Aug 2026 4:30 PM - 6:00 PM
Set 19 11 Aug 2026 9:00 AM - 10:30 AM
Set 20 11 Aug 2026 12:45 PM - 2:15 PM
Set 21 11 Aug 2026 4:30 PM - 6:00 PM
Set 22 12 Aug 2026 9:00 AM - 10:30 AM
Set 23 12 Aug 2026 12:45 PM - 2:15 PM
Set 24 12 Aug 2026 4:30 PM - 6:00 PM
Set 25 13 Aug 2026 9:00 AM - 10:30 AM
Set 26 13 Aug 2026 12:45 PM - 2:15 PM
Set 27 13 Aug 2026 4:30 PM - 6:00 PM
Set 28 14 Aug 2026 9:00 AM - 10:30 AM
Set 29 14 Aug 2026 12:45 PM - 2:15 PM
Set 30 14 Aug 2026 4:30 PM - 6:00 PM
Set 31 17 Aug 2026 9:00 AM - 10:30 AM
Set 32 17 Aug 2026 12:45 PM - 2:15 PM
Set 33 17 Aug 2026 4:30 PM - 6:00 PM
Set 34 18 Aug 2026 9:00 AM - 10:30 AM

**Set 35** 18 Aug 2026
12:45 PM - 2:15 PM

**Set 36** 18 Aug 2026
4:30 PM - 6:00 PM

**Set 37** 19 Aug 2026
9:00 AM - 10:30 AM

**Set 38** 19 Aug 2026
12:45 PM - 2:15 PM

**Set 39** 19 Aug 2026
4:30 PM - 6:00 PM

**Set 40** 20 Aug 2026
9:00 AM - 10:30 AM

**Set 41** 20 Aug 2026
12:45 PM - 2:15 PM

**Set 42** 20 Aug 2026
4:30 PM - 6:00 PM

**Set 43** 21 Aug 2026
9:00 AM - 10:30 AM

**Set 44** 21 Aug 2026
12:45 PM - 2:15 PM

**Set 45** 21 Aug 2026
4:30 PM - 6:00 PM

**Set 46** 25 Aug 2026
9:00 AM - 10:30 AM

**Set 47** 25 Aug 2026
12:45 PM - 2:15 PM

**Set 48** 25 Aug 2026
4:30 PM - 6:00 PM

## General Science

25 Questions • Answer Key

**Q1** Atomic Structure & Models

ಸಮಸ್ಥಾನಿಗಳ (isotopes) ಯಾವ ಗುಣವು ಬದಲಾಗದೆ ಉಳಿಯುತ್ತದೆ?

A. ಭೌತಿಕ ಗುಣಲಕ್ಷಣಗಳು

B. ನ್ಯೂಕ್ಲಿಯರ್ ಸ್ಥಿರತೆ

C. ರಾಸಾಯನಿಕ ಗುಣಲಕ್ಷಣಗಳು ✓

D. ಪರಮಾಣು ದ್ರವ್ಯರಾಶಿ

**Q2** Atoms & Molecules

Zn = 65 u, Na = 23 u, ಮತ್ತು O = 16 u ಪರಮಾಣು ದ್ರವ್ಯರಾಶಿಗಳನ್ನು ಹೊಂದಿದ್ದರೆ, ZnO, $Na_2O$ ನ ಘಟಕ ಸೂತ್ರ ದ್ರವ್ಯರಾಶಿಗಳನ್ನು ಲೆಕ್ಕಹಾಕಿ.

A. ZnO = 48u ಮತ್ತು $Na_2O$ = 62 u.

B. ZnO = 81u ಮತ್ತು $Na_2O$ = 62 u. ✓

C. ZnO = 81u ಮತ್ತು $Na_2O$ = 39 u.

D. ZnO = 18u ಮತ್ತು $Na_2O$ = 62 u.

**Q3** Basic Organic Chemistry

ಎಥೆನಾಲ್‌ನ ಯಾವ ಗುಣಲಕ್ಷಣವು ಅದನ್ನು ಔಷಧಿಗಳಲ್ಲಿ ಒಂದು ದ್ರಾವಕವಾಗಿ ಬಳಸಲು ಸೂಕ್ತವನ್ನಾಗಿಸಿದೆ?

A. ಇದು ಹೆಚ್ಚು ದಹನಶೀಲವಾಗಿದೆ

B. ಇದು ಎಸ್ಟರ್‌ಗಳನ್ನು ರೂಪಿಸುತ್ತದೆ

C. ಇದು ಆಮ್ಲೀಯ ಗುಣವನ್ನು ಹೊಂದಿದೆ

D. ವಿಲೀನತೆ ✓

**Q4** Basic Organic Chemistry

ಎಥೆನಾಲ್‌ನ ವಿಲೀನತೆಯನ್ನು ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿ ವಿವರಿಸುತ್ತದೆ?

A. ನೀರಿನೊಂದಿಗೆ ಸಂಪೂರ್ಣವಾಗಿ ಬೆರಸಬಹುದಾಗಿದೆ ✓

B. ಆಮ್ಲಗಳಲ್ಲಿ ಮಾತ್ರ ವಿಲೀನವಾಗುತ್ತದೆ

C. ನೀರಿನಲ್ಲಿ ಸ್ವಲ್ಪ ವಿಲೀನವಾಗುತ್ತದೆ

D. ನೀರಿನಲ್ಲಿ ವಿಲೀನವಾಗುವುದಿಲ್ಲ

**Q5** Biology

ಒಬ್ಬ ಸಸ್ಯಶಾಸ್ತ್ರಜ್ಞರು ಯಾವುದೇ ಗೋಚರ ಬೆಳವಣಿಗೆ ಅಥವಾ ಚಲನೆಯಿಲ್ಲದೆ ಸುಪ್ತವಾಗಿರುವ ಒಂದು ಬೀಜವನ್ನು ಗಮನಿಸುತ್ತಾರೆ. ಹಾಗಾದರೆ ಆ ಬೀಜವು ಜೀವಂತವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸಸ್ಯಶಾಸ್ತ್ರಜ್ಞರು ಹೇಗೆ ನಿರ್ಧರಿಸಬಹುದು?

A. ಅದು ಯಾವುದೇ ಚಲನೆಯನ್ನು ತೋರಿಸದಿದ್ದರೆ ಅದು ಜೀವಂತವಾಗಿಲ್ಲ ಎಂದು ತೀರ್ಮಾನಿಸುವುದು

B. ಬೀಜವು ಸ್ವತಂತ್ರವಾಗಿ ಚಲಿಸಲು ಸಾಧ್ಯವೇ ಎಂದು ಪರೀಕ್ಷಿಸುವುದು

C. ನಿರ್ಧರಿಸುವ ಮೊದಲು ಕೇವಲ ಗೋಚರ ಬೆಳವಣಿಗೆಗಾಗಿ ಕಾಯುವುದು

D. ಅದರ ಆಂತರಿಕ ಚಯಾಪಚಯ ಚಟುವಟಿಕೆಯ ಮೇಲೆ ನಿಗಾ ಇರಿಸುವುದು ✓

**Q6** Current Electricity (Ohm's Law, Circuits)

ಒಂದು ಬಲ್ಬ್ ಅನ್ನು 60 W ಎಂದು ಪ್ರಮಾಣೀಕರಿಸಲಾಗಿದ್ದು, 120 V ನಲ್ಲಿ ಕಾರ್ಯನಿರ್ವಹಿಸಿದರೆ, ಬಲ್ಬ್‌ನ ಮೂಲಕ ಹರಿಯುವ ವಿದ್ಯುತ್ ಪ್ರವಾಹ ಎಷ್ಟು?

A. 1.2 A

B. 0.5 A ✓

C. 2.0 A

D. 0.25 A

**Q7** Current Electricity (Ohm's Law, Circuits)

ಟೋಸ್ಟರ್‌ಗಳಂತಹ ಸಾಧನಗಳಲ್ಲಿ ತಾಪನ ಅಂಶಗಳಿಗಾಗಿ ಮಿಶ್ರಲೋಹಗಳಿಗೆ ಏಕೆ ಆದ್ಯತೆ ನೀಡಲಾಗುತ್ತದೆ?

A. ಅವು ವಿದ್ಯುತ್ ನಿರೋಧಕಗಳು

B. ಅವು ಕಡಿಮೆ ಕರಗುವ ಬಿಂದುವನ್ನು ಹೊಂದಿರುತ್ತವೆ

C. ಅವು ಕಡಿಮೆ ರೋಧವನ್ನು ಹೊಂದಿರುವ ಉತ್ತಮ ವಿದ್ಯುತ್ ವಾಹಕಗಳಾಗಿವೆ

D. ಅವು ಹೆಚ್ಚಿನ ರೋಧವನ್ನು ಹೊಂದಿರುತ್ತವೆ ಮತ್ತು ಹೆಚ್ಚಿನ ತಾಪಮಾನದಲ್ಲಿ ಸುಲಭವಾಗಿ ಉತ್ಕರ್ಷಣಗೊಳ್ಳುವುದಿಲ್ಲ ✓

Blackbook Vocabulary — Now in the App! ▶ Download Now on Google Play

**Q8** Ecosystem & Food Chain

ಯಾವ ರೀತಿಯ ಜೀವಿಗಳು ಯಾವಾಗಲೂ ಆಹಾರ ಸರಪಳಿಯ ಆರಂಭದಲ್ಲಿ ಕಂಡುಬರುತ್ತವೆ?

- A. ಮಾಂಸಾಹಾರಿ
- B. ಉತ್ಪಾದಕ ✓
- C. ಸಸ್ಯಾಹಾರಿ
- D. ವಿಘಟಕ ಜೀವಿ

**Q9** Ecosystem & Food Chain

ಜೈವಿಕವಾಗಿ ವಿಘಟನೀಯವಲ್ಲದ ಪದಾರ್ಥಗಳು ಏಕೆ ಜೈವಿಕ ವರ್ಧನೆಯನ್ನು ತೋರಿಸುತ್ತವೆ?

- A. ಅವು ಜೀವಿಗಳಿಗೆ ಶಕ್ತಿಯನ್ನು ಒದಗಿಸುತ್ತವೆ
- B. ಅವುಗಳನ್ನು ಜೀವಿಗಳು ತ್ವರಿತವಾಗಿ ವಿಘಟಿಸುತ್ತವೆ
- C. ಅವುಗಳನ್ನು ಜೀವಿಗಳು ತೆಗೆದುಕೊಳ್ಳುವುದಿಲ್ಲ
- D. ಅವು ಜೀವಿಗಳಲ್ಲಿ ಉಳಿಯುತ್ತವೆ ✓

**Q10** Electromagnetic Spectrum

ಒಂದು ನೀರಿನ ಶುದ್ಧೀಕರಣ ಯಂತ್ರವು ಬ್ಯಾಕ್ಟೀರಿಯಾವನ್ನು ಕೊಲ್ಲಲು ವಿದ್ಯುತ್ಕಾಂತೀಯ ಶಕ್ತಿಯನ್ನು ಬಳಸುತ್ತದೆ. ಈ ಕಾರ್ಯಕ್ಕಾಗಿ ರೋಹಿತದ ಯಾವ ಪ್ರದೇಶವನ್ನು ಬಳಸಿಕೊಳ್ಳುತ್ತದೆ?

- A. ರೋಹಿತದ ಅತಿಗೆಂಪು ಭಾಗ
- B. ರೋಹಿತದ ನೇರಳಾತೀತ ಭಾಗ ✓
- C. ರೋಹಿತದ ಗಾಮಾ ಭಾಗ
- D. ರೋಹಿತದ ಗೋಚರ ಭಾಗ

**Q11** Extraction & Metallurgy

ಒಬ್ಬ ಖನಿಜಶಾಸ್ತ್ರಜ್ಞರು ಭೂಮಿಯ ಹೊರಪದರದಲ್ಲಿ ಹೊಸ ಲೋಹದ ಅದಿರನ್ನು ಕಂಡುಹಿಡಿದರು. ಅದಿರು ಪ್ರಾಥಮಿಕವಾಗಿ ಸಲ್ಫೈಡ್ ಆಗಿದ್ದರೆ, ಲೋಹವು ಹೆಚ್ಚಾಗಿ ಯಾವ ಭಾಗದಲ್ಲಿ ಇರುತ್ತದೆ?

- A. ಅದಿರುಗಳನ್ನು ರೂಪಿಸದ ರಾಜ ಅನಿಲಗಳು
- B. ಕ್ರಿಯಾಶೀಲ ಸರಣಿಯ ಮಧ್ಯಭಾಗ ✓
- C. ಕ್ರಿಯಾಶೀಲ ಸರಣಿಯ ಮೇಲಿನ ಭಾಗ
- D. ಕ್ರಿಯಾಶೀಲ ಸರಣಿದ ಕೆಳಭಾಗ

**Q12** Global Warming & Climate Change

ಅಸಾಧಾರಣವಾಗಿ ಹೆಚ್ಚಿನ ಜಾಗತಿಕ ತಾಪಮಾನದ ನಂತರ ಕರಾವಳಿ ಪ್ರದೇಶವು ನೀರುಪಾಚಿಗಳ ಹೆಚ್ಚಳ ಮತ್ತು ಹವಳಗಳ ವರ್ಣನಾಶನವನ್ನು ಅನುಭವಿಸುತ್ತದೆ. ಭೂಮಿಯ ಗೋಳಗಳ ನಡುವಿನ ಯಾವ ಪರಸ್ಪರ ಕ್ರಿಯೆಯು ಈ ಪರಿಣಾಮವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಭೂ ಸಸ್ಯಗಳ ಬೆಳವಣಿಗೆಯು ಸಮುದ್ರ ಪರಿಸರ ವ್ಯವಸ್ಥೆಯ ನಷ್ಟವನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ
- B. ಸಾಗರ ತಾಪಮಾನ ಏರಿಕೆಯು $CO_2$ಹೀರಿಕೊಳ್ಳುವಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ಸಮುದ್ರ ಜೀವಿಗಳ ಮೇಲೆ ಒತ್ತಡವನ್ನು ಉಂಟುಮಾಡುತ್ತದೆ ✓
- C. ಹೆಚ್ಚಿದ ನದಿ ಹರಿವು ಒಟ್ಟಾರೆ ಹವಳದ ದಿಬ್ಬದ ಬೆಳವಣಿಗೆಯನ್ನು ಸುಧಾರಿಸುತ್ತದೆ
- D. ಕಡಿಮೆಯಾದ ಸೂರ್ಯನ ಬೆಳಕು ಸಾಗರಗಳಲ್ಲಿ ದ್ಯುತಿಸಂಶ್ಲೇಷಣೆ ದರವನ್ನು ಹೆಚ್ಚಿಸುತ್ತದೆ

**Q13** Light & Optics

ಹಗಲಿನಲ್ಲಿ ನೋಡಿದಾಗ ಮಾನವರಿಗೆ ಆಕಾಶವು ಏಕೆ ನೀಲಿ ಬಣ್ಣದಲ್ಲಿ ಕಾಣುತ್ತದೆ?

- A. ನೀಲಿ ಬಣ್ಣದ ಬೆಳಕು ಕಡಿಮೆ ತರಂಗದೂರವನ್ನು ಹೊಂದಿರುವುದರಿಂದ ಕೆಂಪು ಬಣ್ಣದ ಬೆಳಕಿಗಿಂತ ಹೆಚ್ಚು ಚದುರುತ್ತದೆ ✓
- B. ಎಲ್ಲಾ ತರಂಗದೂರಗಳು ವಾತಾವರಣದಲ್ಲಿ ಸಮಾನವಾಗಿ ಚದುರುತ್ತವೆ
- C. ವಾತಾವರಣದ ಕಣಗಳಿಂದ ನೀಲಿ ಬಣ್ಣದ ಬೆಳಕು ಹೀರಲ್ಪಡುತ್ತದೆ ಮತ್ತು ಪುನಃ ಹೊರಸೂಸಲ್ಪಡುತ್ತದೆ
- D. ಕೆಂಪು ಬಣ್ಣದ ಬೆಳಕು ತನ್ನ ತರಂಗದೂರವು ಹೆಚ್ಚಾಗಿರುವುದರಿಂದ ನೀಲಿ ಬಣ್ಣದ ಬೆಳಕಿಗಿಂತ ಹೆಚ್ಚು ಚದುರುತ್ತದೆ

**Q14** Mechanics

ಕಾಲದ ಅಕ್ಷಕ್ಕೆ ಸಮಾನಾಂತರವಾಗಿರುವ ಸರಳ ರೇಖೆಯನ್ನು ಹೊಂದಿರುವ ಸ್ಥಾನ-ಕಾಲದ ನಕ್ಷೆಯು, ವಸ್ತುವಿನ ಚಲನೆಯ ಸಂದರ್ಭದಲ್ಲಿ ಏನನ್ನು ಪ್ರತಿನಿಧಿಸುತ್ತದೆ?

- A. ವಸ್ತುವು ವಿಭಿನ್ನ ಜವದಲ್ಲಿ ಚಲಿಸುತ್ತದೆ
- B. ವಸ್ತುವು ಕಾಲ ಕಳೆದಂತೆ ವೇಗೋತ್ಕರ್ಷವನ್ನು ಪಡೆಯುತ್ತದೆ
- C. ವಸ್ತುವು ವಿಶ್ರಾಂತ ಸ್ಥಿತಿಯಲ್ಲಿದ್ದು, ಕಾಲ ಕಳೆದಂತೆ ಯಾವುದೇ ದೂರವನ್ನು ಕ್ರಮಿಸುವುದಿಲ್ಲ ✓
- D. ವಸ್ತುವು ಕಾಲ ಕಳೆದು ಏಕರೂಪದ ಜವದಲ್ಲಿ ಚಲಿಸುತ್ತದೆ

Blackbook Vocabulary — Now in the App! ► Download Now on Google Play

generated by rank.qmaths.in

**Q15** Mixtures, Solutions, Colloids

ಒಂದು ದ್ರಾವಣವು 80 ಗ್ರಾಂ ನೀರಿನಲ್ಲಿ ಕರಗಿದ 20 ಗ್ರಾಂ ಉಪ್ಪನ್ನು ಹೊಂದಿದೆ. ದ್ರವ್ಯರಾಶಿಯ ಶೇಕಡಾವಾರು ದ್ರವ್ಯರಾಶಿಯನುಸಾರ (mass by mass percentage) ದ್ರಾವಣದ ಸಾರತೆ ಎಷ್ಟು?

A. 25%

B. 30%

C. 20% ✓

D. 45%

**Q16** Nervous System & Brain

ಒಂದು ನರಕೋಶದಲ್ಲಿ, ಇತರ ನರಕೋಶಗಳಿಂದ ಆವೇಗಗಳನ್ನು ಸ್ವೀಕರಿಸುವ ಸಣ್ಣ, ಕವಲೊಡೆದ ತಂತುಗಳನ್ನು ಏನೆಂದು ಕರೆಯಲಾಗುತ್ತದೆ?

A. ಸ್ನಾಯು ತಂತುಗಳು

B. ಆಕ್ಸಾನ್‌ಗಳು

C. ಮೃದ್ವಸ್ಥಿ ತಟ್ಟೆಗಳು

D. ಡೆಂಡ್ರೈಟ್‌ಗಳು ✓

**Q17** Newton's Laws of Motion

ಒಂದು ಕಾಯದ ಮೇಲೆ ನಿವ್ವಳ ಬಲವು ವರ್ತಿಸಿದಾಗ, ನ್ಯೂಟನ್‌ನ ಎರಡನೇ ನಿಯಮವು ಆ ಕಾಯದ ಮೇಲೆ ಏನಾಗುತ್ತದೆ ಎಂದು ಊಹಿಸುತ್ತದೆ?

A. ಕಾಯವು ಸ್ಥಿರ ವೇಗದಲ್ಲಿ ಚಲಿಸುತ್ತದೆ

B. ಕಾಯವು ಸ್ಥಿರವಾಗಿಯೇ ಉಳಿಯುತ್ತದೆ

C. ಕಾಯವು ಬಲದ ದಿಕ್ಕಿನಲ್ಲಿ ವೇಗೋತ್ಕರ್ಷಗೊಳ್ಳುತ್ತದೆ ✓

D. ಕಾಯವು ಯಾವಾಗಲೂ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ

**Q18** Plant Biology

ಸಸ್ಯಗಳಲ್ಲಿ ಗ್ಲೂಕೋಸ್ ವಿಭಜನೆಯಾಗಿ ಶಕ್ತಿಯನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಏನೆಂದು ಕರೆಯಲಾಗುತ್ತದೆ?

A. ಬಾಷ್ಪವಿಸರ್ಜನೆ

B. ದ್ಯುತಿಸಂಶ್ಲೇಷಣೆ

C. ವಿಸರ್ಜನೆ

D. ಉಸಿರಾಟ ✓

**Q19** Plant Tissues & Transport

ಪ್ಯಾರೆಂಕೈಮಾ ಅಂಗಾಂಶವು ಮುಖ್ಯವಾಗಿ ಆಹಾರ ಮತ್ತು ಇತರ ವಸ್ತುಗಳನ್ನು ಸಂಗ್ರಹಿಸುವುದರಿಂದ, ಅದರ ಜೀವಕೋಶಗಳಿಗೆ ಸಾಕಷ್ಟು ಆಂತರಿಕ ಸ್ಥಳಾವಕಾಶ ಬೇಕಾಗುತ್ತದೆ. ಆದ್ದರಿಂದ, ಪ್ಯಾರೆಂಕೈಮಾ ಜೀವಕೋಶಗಳು ಸಾಮಾನ್ಯವಾಗಿ _______ ಆಗಿರುತ್ತವೆ.

A. ಮೃತ ಮತ್ತು ಟೊಳ್ಳಾದ

B. ಖನಿಜಾಂಶಗಳಿಂದ ಗಟ್ಟಿಯಾಗಿರುತ್ತವೆ

C. ಖಾಲಿ ಜಾಗಗಳಿಲ್ಲದೆ ಬಿಗಿಯಾಗಿ ತುಂಬಿರುತ್ತವೆ

D. ಅಂತರಕೋಶೀಯ ಸ್ಥಳಗಳಿಂದ ಸಡಿಲವಾಗಿ ತುಂಬಿರುತ್ತವೆ ✓

**Q20** Properties & Tests

ಸೋಡಿಯಂ ಹೈಡ್ರಾಕ್ಸೈಡ್‌ನೊಂದಿಗೆ ಹೈಡ್ರೋಕ್ಲೋರಿಕ್ ಆಮ್ಲವು ವರ್ತಿಸಿದಾಗ, ತಟಸ್ಥೀಕರಣ ಕ್ರಿಯೆಯ ಪರಿಣಾಮವಾಗಿ ಏನು ರೂಪುಗೊಳ್ಳುತ್ತದೆ?

A. ಕೇವಲ ಆಮ್ಲ

B. ಕೇವಲ ಪ್ರತ್ಯಾಮ್ಲ

C. ಲವಣ ಮತ್ತು ನೀರು ✓

D. ಕೇವಲ ಅನಿಲ

**Q21** Reflection & Refraction

ಒಂದು ಬೆಳಕಿನ ಕಿರಣದ ವೇಗವು ಗಾಳಿಯಲ್ಲಿ $3 \times 10^8$ m/s ನಿಂದ ಪಾರದರ್ಶಕ ಘನವಸ್ತುವಿನಲ್ಲಿ $2 \times 10^8$ m/s ಗೆ ಬದಲಾಗುತ್ತದೆ. ಗಾಳಿಗೆ ಸಂಬಂಧಿಸಿದಂತೆ ಘನವಸ್ತುವಿನ ವಕ್ರೀಭವನ ಸೂಚ್ಯಂಕ ಎಷ್ಟು? (ಗಾಳಿಯ ವಕ್ರೀಭವನ ಸೂಚ್ಯಂಕವನ್ನು 1 ಎಂದು ತೆಗೆದುಕೊಳ್ಳಿ.)

A. 1.4

B. 1.5 ✓

C. 1.7

D. 1.2

Blackbook Vocabulary — Now in the App! ► Download Now on Google Play

**Q22** Types (Combination, Decomposition, etc.)

ಈ ಕೆಳಗಿನ ಕ್ರಿಯೆಗಳನ್ನು ಪರಿಗಣಿಸಿ:

(I) $CaCO_3(s)$ —Heat→ $CaO(s) + CO_2(g)$
(II) $2AgCl(s)$ —Sunlight→ $2Ag(s) + Cl_2(g)$
(III) $2H_2O(l)$ —Electric current→ $2H_2(g) + O_2(g)$
(IV) $Fe(s) + CuSO_4(aq) \rightarrow FeSO_4(aq) + Cu(s)$

ಮೇಲಿನ ಯಾವ ಕ್ರಿಯೆಗಳು ವಿಭಜನ ಕ್ರಿಯೆಗಳನ್ನು ಸರಿಯಾಗಿ ಪ್ರತಿನಿಧಿಸುತ್ತವೆ?

A. ಕೇವಲ I ಮತ್ತು II ಕ್ರಿಯೆಗಳು
B. ಕೇವಲ II ಮತ್ತು III ಕ್ರಿಯೆಗಳು
C. ಕೇವಲ I, II ಮತ್ತು III ಕ್ರಿಯೆಗಳು ✓
D. ಕೇವಲ III ಮತ್ತು IV ಕ್ರಿಯೆಗಳು

**Q23** Ultrasound & Applications

ನಾಜೂಕಾದ ಎಲೆಕ್ಟ್ರಾನಿಕ್ ಘಟಕಗಳನ್ನು ಸ್ವಚ್ಛಗೊಳಿಸಲು ಅಲ್ಟ್ರಾಸೌಂಡ್ ಅನ್ನು ಬಳಸುವುದಕ್ಕೆ ಪ್ರಮುಖ ಕಾರಣವೇನು?

A. ಇದು ಸ್ವಚ್ಛಗೊಳಿಸುವುದಕ್ಕಾಗಿ ವಸ್ತುವನ್ನು ರಾಸಾಯನಿಕವಾಗಿ ಬದಲಾಯಿಸುತ್ತದೆ
B. ಇದು ಭೌತಿಕ ಹಾನಿಯನ್ನು ಉಂಟುಮಾಡದೆ ಕೊಳೆಯನ್ನು ತೆಗೆದುಹಾಕುತ್ತದೆ ✓
C. ಇದು ಕಸವನ್ನು ತೆಗೆದುಹಾಕಲು ಮೇಲ್ಮೈಯನ್ನು ಗೀರುತ್ತದೆ
D. ಉತ್ತಮವಾಗಿ ಸ್ವಚ್ಛಗೊಳಿಸಲು ಇದು ಘಟಕಗಳನ್ನು ಕರಗಿಸುತ್ತದೆ

**Q24** Work, Energy & Power

ಈ ಕೆಳಗಿನವುಗಳಲ್ಲಿ ಯಾವುದು ಚಲನ ಶಕ್ತಿಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ರಾಸಾಯನಿಕ ಬಂಧಗಳಲ್ಲಿ ಇರುವ ಶಕ್ತಿ
B. ತಾಪಮಾನದ ಬದಲಾವಣೆಗಳಿಗೆ ಸಂಬಂಧಿಸಿದ ಶಕ್ತಿ
C. ಒಂದು ವಸ್ತುವು ತನ್ನ ಸ್ಥಾನದಲ್ಲಿ ಸಂಗ್ರಹಿಸುವ ಶಕ್ತಿ
D. ಒಂದು ವಸ್ತುವಿನ ಚಲನೆಯಿಂದಾಗಿ ಹೊಂದಿರುವ ಶಕ್ತಿ ✓

**Q25** Work, Energy & Power

ಒಂದು ಕಾಯದ ಚಲನ ಶಕ್ತಿಯು 40 J ಯಿಂದ 140 J ಗೆ ಹೆಚ್ಚಾಗುತ್ತದೆ. ಹಾಗಾದರೆ ಕಾಯದ ಮೇಲೆ ನಡೆದ ನಿವ್ವಳ ಕೆಲಸ ಎಷ್ಟು?

A. 200 J
B. 50 J
C. 100 J ✓
D. 150 J

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Atomic Structure & Models

ಒಂದು ಧಾತುವಿನ ಪರಮಾಣು ಸಂಖ್ಯೆ 17 ಆಗಿದೆ. ಅದರ ಪರಮಾಣುವಿನಲ್ಲಿರುವ ವಿದ್ಯುದಾವೇಶ ಹೊಂದಿರುವ ಕಣಗಳ ಜೋಡಣೆಯ ಆಧಾರದ ಮೇಲೆ, ಈ ಕೆಳಗಿನ ಯಾವ ಹೇಳಿಕೆಯು ಅದರ ತಟಸ್ಥ ಸ್ಥಿತಿಯಲ್ಲಿರುವ ಎಲೆಕ್ಟ್ರಾನ್‌ಗಳ ಸಂಖ್ಯೆಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

- **A.** ಇರುವ 17 ಪ್ರೋಟಾನ್‌ಗಳನ್ನು ಸರಿದೂಗಿಸಲು ಇದು 17 ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತದೆ ✓
- **B.** ಇದರ ಪರಮಾಣು ದ್ರವ್ಯರಾಶಿಯಿಂದಾಗಿ ಇದು ಪ್ರೋಟಾನ್‌ಗಳಿಗಿಂತ ಹೆಚ್ಚು ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತದೆ
- **C.** ಇದು ಅತ್ಯಂತ ಒಳಗಿನ ಕವಚವೊಂದರಲ್ಲೇ 8 ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತದೆ
- **D.** ಇರುವ 17 ನ್ಯೂಟ್ರಾನ್ ಗಳನ್ನು ಸರಿಹೊಂದಿಸಲು ಇದು 17 ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತದೆ

**Q2** Basic Organic Chemistry

ಒಬ್ಬ ವಿದ್ಯಾರ್ಥಿಯು ಗಾಳಿಯಲ್ಲಿ ಎಥೆನಾಲ್ ಅನ್ನು ಸುಡುತ್ತಾನೆ ಮತ್ತು ನೀಲಿ ಜ್ವಾಲೆಯನ್ನು ಗಮನಿಸುತ್ತಾನೆ. ಈ ವೀಕ್ಷಣೆಯನ್ನು ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

- **A.** ಸಂಪೂರ್ಣ ದಹನವು ಸಾಕಷ್ಟು ಆಮ್ಲಜನಕದ ಪೂರೈಕೆಯಿಂದಾಗಿ ನೀಲಿ ಜ್ವಾಲೆಯನ್ನು ಉಂಟುಮಾಡುತ್ತದೆ ✓
- **B.** ಎಥೆನಾಲ್ ಅನ್ನು ಗಾಳಿಯಲ್ಲಿ ಉರಿಸಿದಾಗ ಅದು ಕೆಂಪು ಜ್ವಾಲೆಯನ್ನು ಉಂಟುಮಾಡುತ್ತದೆ
- **C.** ಎಥೆನಾಲ್‌ನಲ್ಲಿರುವ ಕಲ್ಮಶಗಳು ಜ್ವಾಲೆಯ ನೀಲಿ ಬಣ್ಣಕ್ಕೆ ಕಾರಣವಾಗಿವೆ
- **D.** ಅಪೂರ್ಣ ದಹನವು ಕಡಿಮೆ ಆಮ್ಲಜನಕದ ಕಾರಣದಿಂದಾಗಿ ನೀಲಿ ಜ್ವಾಲೆಗೆ ಕಾರಣವಾಗುತ್ತದೆ

**Q3** Biology

ಏಕಕೋಶೀಯ ಜೀವಿಗಳಿಗಿಂತ ಭಿನ್ನವಾಗಿ, ಬಹುಕೋಶೀಯ ಜೀವಿಗಳಿಗೆ ಶಕ್ತಿಯ ಸೇವನೆ ಮತ್ತು ವಸ್ತುಗಳ ವಿನಿಮಯಕ್ಕಾಗಿ ವಿಶೇಷ ವ್ಯವಸ್ಥೆಗಳು ಏಕೆ ಬೇಕಾಗುತ್ತವೆ?

- **A.** ಏಕಕೋಶೀಯ ಜೀವಿಗಳಿಗೆ ಬದುಕಲು ಜೀವಕೋಶದ ಶಕ್ತಿಯ ಅಗತ್ಯವಿರುವುದಿಲ್ಲ
- **B.** ಅವು ಏಕಕೋಶೀಯ ಜೀವಿಗಳಿಗಿಂತ ಹೆಚ್ಚು ಭಾರವಾಗಿರುತ್ತವೆ
- **C.** ಹೆಚ್ಚಿನ ಆಂತರಿಕ ಕೋಶಗಳು ಬಾಹ್ಯ ಪರಿಸರದೊಂದಿಗೆ ನೇರ ಸಂಪರ್ಕವನ್ನು ಹೊಂದಿರುವುದಿಲ್ಲ ✓
- **D.** ಅವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸಲು ಸಂಪೂರ್ಣವಾಗಿ ಅಸಮರ್ಥವಾಗಿರುತ್ತವೆ

**Q4** Chemical Reactions

ಒಂದು ಗಾಜಿನ ಪಾತ್ರೆಯು ಯಾವುದೇ ಅನಿಲವು ತಪ್ಪಿಸಿಕೊಳ್ಳದಂತೆ ಅಥವಾ ಪ್ರವೇಶಿಸದಂತೆ ಇರುವ ಒಂದು ರಾಸಾಯನಿಕ ಕ್ರಿಯೆಯನ್ನು ಒಳಗೊಂಡಿದೆ. ರಾಶಿ ಸಂರಕ್ಷಣಾ ನಿಯಮದ ಪ್ರಕಾರ, ಈ ಕೆಳಗಿನ ಯಾವ ಪರಿಸ್ಥಿತಿಯು ಹೆಚ್ಚು ನಿಖರವಾಗಿದೆ?

- **A.** ರಾಸಾಯನಿಕ ಕ್ರಿಯೆಯ ನಂತರ ಒಟ್ಟು ದ್ರವ್ಯರಾಶಿಯು ಕಡಿಮೆಯಾಗುತ್ತದೆ
- **B.** ರಾಸಾಯನಿಕ ಕ್ರಿಯೆಯ ಮೊದಲು ಒಟ್ಟು ದ್ರವ್ಯರಾಶಿಯು ರಾಸಾಯನಿಕ ಕ್ರಿಯೆಯ ನಂತರದ ದ್ರವ್ಯರಾಶಿಗಿಂತ ಕಡಿಮೆ ಇರುತ್ತದೆ
- **C.** ರಾಸಾಯನಿಕ ಕ್ರಿಯೆಯ ನಂತರ ಒಟ್ಟು ದ್ರವ್ಯರಾಶಿಯು ಹೆಚ್ಚಾಗುತ್ತದೆ
- **D.** ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಟ್ಟು ದ್ರವ್ಯರಾಶಿಯು ಬದಲಾಗದೆ ಹಾಗೆಯೇ ಉಳಿಯುತ್ತದೆ ✓

**Q5** Circulatory System (Heart, Blood)

ಹೃದಯದ ಹೃತ್ಕುಕ್ಷಿಗಳು, ಹೃತ್ಕರ್ಣಕ್ಕೆ ಹೋಲಿಸಿದರೆ ದಪ್ಪವಾದ ಸ್ನಾಯು ಭಿತ್ತಿಗಳನ್ನು ಏಕೆ ಹೊಂದಿರುತ್ತವೆ?

- **A.** ಅವು ಆಮ್ಲಜನಕಯುಕ್ತ ಮತ್ತು ಆಮ್ಲಜನಕ ರಹಿತ ರಕ್ತವನ್ನು ಪ್ರತ್ಯೇಕಿಸುತ್ತವೆ
- **B.** ಅವುಗಳಿಗೆ ನರಗಳ ನಿಯಂತ್ರಣಕ್ಕಾಗಿ ಹೆಚ್ಚು ನರಗಳ ಅಗತ್ಯವಿರುತ್ತದೆ
- **C.** ಅವು ಪ್ರತಿ ಸಂಕೋಚನಕ್ಕೂ ಮೊದಲು ಹೆಚ್ಚು ರಕ್ತವನ್ನು ಸಂಗ್ರಹಿಸುತ್ತವೆ
- **D.** ಅವು ದೇಹದಾದ್ಯಂತ ಅಂಗಗಳಿಗೆ ರಕ್ತವನ್ನು ಪಂಪ್ ಮಾಡುತ್ತವೆ ✓

**Q6** Current Electricity (Ohm's Law, Circuits)

ಒಂದು ವೋಲ್ಟೇಜ್ ಮೂಲಕ್ಕೆ ಒಂದು ರೋಧಕವನ್ನು ಸಂಪರ್ಕಿಸಿದಾಗ ಮತ್ತು ವೋಲ್ಟೇಜ್ ಸ್ಥಿರವಾಗಿರುವಾಗ ರೋಧವನ್ನು ಅರ್ಧದಷ್ಟು ಮಾಡಿದರೆ, ನಿಗದಿತ ಸಮಯದಲ್ಲಿ ಉತ್ಪತ್ತಿಯಾಗುವ ಶಾಖಕ್ಕೆ ಏನಾಗುತ್ತದೆ?

- **A.** ಉತ್ಪತ್ತಿಯಾಗುವ ಶಾಖವು ಅದರ ಹಿಂದಿನ ಮೌಲ್ಯದ ಎರಡು ಪಟ್ಟು ಆಗುತ್ತದೆ ✓
- **B.** ಉತ್ಪತ್ತಿಯಾಗುವ ಶಾಖವು ಬದಲಾಗದೆ ಹಾಗೆಯೇ ಉಳಿಯುತ್ತದೆ
- **C.** ಉತ್ಪತ್ತಿಯಾಗುವ ಶಾಖವು ಅದರ ಹಿಂದಿನ ಮೌಲ್ಯದ ಅರ್ಧದಷ್ಟು ಆಗುತ್ತದೆ
- **D.** ಉತ್ಪತ್ತಿಯಾಗುವ ಶಾಖವು ಅದರ ಹಿಂದಿನ ಮೌಲ್ಯದ ನಾಲ್ಕು ಪಟ್ಟು ಆಗುತ್ತದೆ

Blackbook Vocabulary — Now in the App! ▶ Download Now on Google Play

**Q7** Ecology & Environment

ಜಲಚಕ್ರದ ಕೆಳಗಿನ ಹಂತಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ:
1. ಘನೀಕರಣ
2. ಆವಿಯಾಗುವಿಕೆ
3. ಪ್ರಕ್ಷೇಪಣ
4. ಜಲಮೂಲಗಳಲ್ಲಿ ಸಂಗ್ರಹಣೆ

A. 2 → 1 → 3 → 4 ✓
B. 2 → 3 → 1 → 4
C. 1 → 2 → 3 → 4
D. 3 → 2 → 1 → 4

**Q8** Five Kingdom Classification

ಹೊಸ ಸೂಕ್ಷ್ಮಜೀವಿಯೊಂದು ಕಂಡುಬಂದಿದ್ದು ಅದು ಏಕಕೋಶೀಯ ಮತ್ತು ಪೂರ್ವಕೇಂದ್ರೀಯ ಆಗಿದೆ. ಆದರೆ ಅದು ಪೊರೆಯಿಂದ ಆವರಿಸಿದ ನ್ಯೂಕ್ಲಿಯಸ್ ಅನ್ನು ಹೊಂದಿಲ್ಲ. ಜತೆಗೆ ಇದು ದ್ಯುತಿಸಂಶ್ಲೇಷಣೆ ಮಾಡಬಲ್ಲದು. ಐದು ಸಾಮ್ರಾಜ್ಯ ವರ್ಗೀಕರಣಗಳ ಪ್ರಕಾರ, ಅದನ್ನು ಯಾವ ಸಾಮ್ರಾಜ್ಯದಲ್ಲಿ ಇರಿಸಲಾಗಿದೆ?

A. ಶಿಲೀಂಧ್ರ
B. ಪ್ಲ್ಯಾಂಟೆ
C. ಮೊನೆರಾ ✓
D. ಪ್ರೊಟಿಸ್ಟಾ

**Q9** Hydrocarbons (Methane, Ethane, etc.)

ಸಾವಯವ ಸಂಯುಕ್ತಗಳ ಈ ಕೆಳಗಿನ ಯಾವ ಅಣು ಸೂತ್ರವು ಉಂಗುರ ರಚನೆಯನ್ನು ಪ್ರತಿನಿಧಿಸುವುದಿಲ್ಲ?

A. C6H8
B. C6H6
C. C6H14 ✓
D. C6H10

**Q10** Magnetic Effects of Current

ಕಾಂತೀಯ ಕ್ಷೇತ್ರದ ಬಲ ರೇಖೆಗಳ ಹೆಚ್ಚಿನ ದಟ್ಟಣೆಯು ಏನನ್ನು ಸೂಚಿಸುತ್ತದೆ?

A. ವಿದ್ಯುತ್ ಕ್ಷೇತ್ರದ ಇರುವಿಕೆ
B. ಆ ಪ್ರದೇಶದಲ್ಲಿ ಕಾಂತ ಕ್ಷೇತ್ರದ ಬಲವು ಹೆಚ್ಚಾಗಿರುತ್ತದೆ ✓
C. ಕಾಂತೀಯ ಬಲ ರೇಖೆಗಳು ಛೇದಿಸುವುದರಲ್ಲಿವೆ
D. ಆ ಪ್ರದೇಶದಲ್ಲಿ ಕಾಂತ ಕ್ಷೇತ್ರದ ಬಲವು ಕಡಿಮೆಯಾಗಿರುತ್ತದೆ

**Q11** Mechanics

ದೂರ - ಕಾಲ ನಕ್ಷೆಯಿಂದ, ಒಂದು ವಸ್ತುವಿನ ಏಕರೂಪದ ಜವವನ್ನು ಹೇಗೆ ಲೆಕ್ಕ ಹಾಕಬಹುದು?

A. ಒಟ್ಟು ಸಮಯವನ್ನು ಅಳೆಯುವ ಮೂಲಕ ಮಾತ್ರ
B. ನಕ್ಷೆಯ ಅಡಿಯಲ್ಲಿರುವ ಪ್ರದೇಶವನ್ನು ಅಳೆಯುವ ಮೂಲಕ
C. ಒಟ್ಟು ದೂರವನ್ನು ಅಳೆಯುವ ಮೂಲಕ ಮಾತ್ರ
D. ನಕ್ಷೆಯ ಇಳಿಜಾರನ್ನು ಅಳೆಯುವ ಮೂಲಕ ✓

**Q12** Mechanics

ಒಂದು ಬಾಟಲ್ ಓಪನರ್ ಅನ್ನು ಬಳಸಿಕೊಂಡು ಒಂದು ಬಾಟಲ್‌ನ ಮುಚ್ಚಳವನ್ನು ತೆರೆಯುವಾಗ, ಮುಚ್ಚಳವು ನೀಡುವ ಪ್ರತಿರೋಧವು ______ ಆಗಿ ವರ್ತಿಸುತ್ತದೆ.

A. ಹೊರೆ ✓
B. ಯಂತ್ರ
C. ಯತ್ನ
D. ಶಕ್ತಿಯ ಮೂಲ

**Q13** Mirrors & Lenses

ಒಬ್ಬ ವಿದ್ಯಾರ್ಥಿಯು ಒಂದು ಮೇಣದಬತ್ತಿಯನ್ನು ಒಂದು ಪೀನ ಮಸೂರದ ಸಂಗಮ ದೂರದ ಎರಡು ಪಟ್ಟಿಗಿಂತ ಹೆಚ್ಚು ದೂರದಲ್ಲಿ ಇಡುತ್ತಾಳೆ. ಪರದೆಯ ಮೇಲೆ ರೂಪುಗೊಂಡ ಚಿತ್ರವನ್ನು ಆಕೆ ಗಮನಿಸುತ್ತಾಳೆ. ಈ ಕೆಳಗಿನವುಗಳಲ್ಲಿ ಯಾವುದು ಚಿತ್ರದ ಸ್ವರೂಪ, ಸ್ಥಾನ ಮತ್ತು ಗಾತ್ರವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಆ ಬಿಂಬವು ಮಿಥ್ಯ, ನೇರ ಆಗಿದ್ದು, ವಸ್ತುವಿನ ಒಂದೇ ಬದಿಯಲ್ಲಿ ರೂಪುಗೊಂಡಿರುತ್ತದೆ ಮತ್ತು ವಸ್ತುವಿಗಿಂತ ದೊಡ್ಡದಾಗಿರುತ್ತದೆ
B. ಆ ಬಿಂಬವು ನೈಜ, ನೇರ ಆಗಿದ್ದು, ಸಂಗಮದೂರದ ಎರಡು ಪಟ್ಟು ದೂರದಲ್ಲಿ ರೂಪುಗೊಳ್ಳುತ್ತದೆ ಮತ್ತು ವಸ್ತುವಿನ ಗಾತ್ರಕ್ಕೆ ಸಮಾನವಾಗಿರುತ್ತದೆ
C. ಬಿಂಬವು ನೈಜ, ತಲೆಕೆಳಗಾಗಿದ್ದು, ಸಂಗಮ ಬಿಂದು ಮತ್ತು ಎರಡು ಪಟ್ಟು ಸಂಗಮ ದೂರದ ನಡುವೆ ರೂಪುಗೊಂಡಿರುತ್ತದೆ ಮತ್ತು ವಸ್ತುವಿಗಿಂತ ಚಿಕ್ಕದಾಗಿರುತ್ತದೆ ✓
D. ಬಿಂಬವು ಮಿಥ್ಯ ಮತ್ತು ತಲೆಕೆಳಗಾಗಿದ್ದು, ಸಂಗಮ ಬಿಂದುವಿನಲ್ಲಿ ರೂಪುಗೊಂಡು, ಮತ್ತು ವಸ್ತುವಿನ ಗಾತ್ರಕ್ಕೆ ಸಮನಾಗಿರುತ್ತದೆ

**Q14** Mirrors & Lenses

ಒಬ್ಬ ವಿದ್ಯಾರ್ಥಿಯು 12 cm ಸಂಗಮ ದೂರವಿರುವ ಅಭಿಸರಣ ಮಸೂರದಿಂದ 18 cm ದೂರದಲ್ಲಿ ವಸ್ತುವೊಂದನ್ನು ಇಡುತ್ತಾನೆ. ರೂಪುಗೊಂಡ ಬಿಂಬವು ನೈಜವಾಗಿದೆ. ಹಾಗಾದರೆ ಮಸೂರದಿಂದ ಉಂಟಾಗುವ ವರ್ಧನೆ ಎಷ್ಟು?

A. - 1.5
B. + 1.5
C. + 2
D. - 2 ✓

Blackbook Vocabulary — Now in the App! ► Download Now on Google Play

generated by rank.qmaths.in

**Q15** Mixtures, Solutions, Colloids

ಈ ಕೆಳಗಿನ ಯಾವ ಮಿಶ್ರಣವು ಸ್ಥೂಲ ದೃಷ್ಟಿಗೋಚರ ಮಟ್ಟದಲ್ಲಿ ವಿಜಾತೀಯ ಮಿಶ್ರಣವನ್ನು ಉತ್ತಮವಾಗಿ ಪ್ರದರ್ಶಿಸುತ್ತದೆ?

A. ಸಾರಜನಕ ಮತ್ತು ಆಮ್ಲಜನಕ

B. ಲವಣ ಮತ್ತು ನೀರು

C. ಮರಳು ಮತ್ತು ನೀರು ✓

D. ಸಕ್ಕರೆ ಮತ್ತು ನೀರು

**Q16** Nervous System & Brain

ಮಾನವನ ಮೆದುಳಿನ ಯಾವ ಭಾಗವು ದೇಹದ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಪ್ರಮುಖವಾಗಿ ಕೆಲಸಮಾಡುತ್ತದೆ?

A. ಸೆರೆಬ್ರಮ್

B. ಪಾನ್ಸ್

C. ಮೆಡುಲಾ

D. ಸೆರೆಬೆಲ್ಲಮ್ ✓

**Q17** Newton's Laws of Motion

ಒಂದು ವಸ್ತುವಿನ ಮೇಲೆ ಪ್ರಯೋಗಿಸಲಾದ ಬಲವು ಸ್ಥಿರವಾಗಿದ್ದು, ಅದರ ದ್ರವ್ಯರಾಶಿಯು ದ್ವಿಗುಣಗೊಂಡರೆ, ಬಲ ಸೂತ್ರದ ಪ್ರಕಾರ ಅದರ ವೇಗೋತ್ಕರ್ಷಕ್ಕೆ ಏನಾಗುತ್ತದೆ?

A. ವೇಗೋತ್ಕರ್ಷವು ದ್ವಿಗುಣಗೊಳ್ಳುತ್ತದೆ

B. ವೇಗೋತ್ಕರ್ಷವು ಅರ್ಧ ಆಗುತ್ತದೆ ✓

C. ವೇಗೋತ್ಕರ್ಷವು ಬದಲಾಗದೆ ಹಾಗೆಯೇ ಉಳಿಯುತ್ತದೆ

D. ವೇಗೋತ್ಕರ್ಷವು ಶೂನ್ಯವಾಗುತ್ತದೆ

**Q18** Physical & Chemical Properties

ಒಂದು ಹೊಳೆಯುವ ಕಬ್ಬಿಣದ ಮೊಳೆಯನ್ನು ನಾಲ್ಕು ವಿಭಿನ್ನ ಪರಿಸ್ಥಿತಿಗಳಲ್ಲಿ ಹಲವಾರು ದಿನಗಳವರೆಗೆ ಬಿಡಲಾಯಿತು.
I. ಮುಚ್ಚಿದ ಪಾತ್ರೆಯಲ್ಲಿ ಶುಷ್ಕ ಗಾಳಿಯೊಂದಿಗೆ
II. ಕರಗಿದ ಆಮ್ಲಜನಕವನ್ನು ಹೊಂದಿರುವ ನೀರು
III. ಮೊದಲು ಕುದಿಸಿ ನಂತರ ಎಣ್ಣೆಯಿಂದ ಮುಚ್ಚಲ್ಪಟ್ಟಿರುವ ನೀರು
IV. ತೇವಾಂಶವುಳ್ಳ ಗಾಳಿ

ಮೇಲಿನ ಯಾವ ಸ್ಥಿತಿಯಲ್ಲಿ ಕಬ್ಬಿಣವು ತುಕ್ಕು ಹಿಡಿಯುವ ಸಾಧ್ಯತೆ ಹೆಚ್ಚು?

A. II, III ಮತ್ತು IV

B. I ಮತ್ತು III ಮಾತ್ರ

C. I, II ಮತ್ತು IV

D. II ಮತ್ತು IV ಮಾತ್ರ ✓

**Q19** Physical & Chemical Properties

ಶುದ್ಧ ರೂಪದಲ್ಲಿರುವ ಅಲೋಹಗಳ ವಿದ್ಯುತ್ ವಾಹಕತೆಯನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಅಲೋಹಗಳು ವಿದ್ಯುಚ್ಛಕ್ತಿಯನ್ನು ಸಾಗಿಸುವುದಿಲ್ಲ ✓

B. ಲೋಹಗಳಂತೆಯೇ ಅಲೋಹಗಳು ವಿದ್ಯುಚ್ಛಕ್ತಿಯನ್ನು ಸಾಗಿಸುತ್ತವೆ

C. ಅಲೋಹಗಳು ಹೆಚ್ಚಿನ ವಿದ್ಯುತ್ ವಾಹಕತೆಯನ್ನು ಹೊಂದಿರುತ್ತವೆ

D. ಅಲೋಹಗಳು ವಿದ್ಯುಚ್ಛಕ್ತಿಯನ್ನು ಹೆಚ್ಚು ದಕ್ಷತೆಯಿಂದ ಸಾಗಿಸುತ್ತವೆ

**Q20** Plant Biology

ಮುಟ್ಟಿದರೆ ಮುನಿ ಸಸ್ಯದ ಸ್ಪರ್ಶ ಪ್ರತಿಕ್ರಿಯೆಯಲ್ಲಿ ಯಾವ ಅಂಗಾಂಶ **ಇರುವುದಿಲ್ಲ**?

A. ಆಧಾರಕ ಅಂಗಾಂಶ

B. ನಾಳೀಯ ಅಂಗಾಂಶ

C. ಅನುಲೇಪಕ ಅಂಗಾಂಶ

D. ನರ ಅಂಗಾಂಶ ✓

**Q21** Plant Tissues & Transport

ಸಸ್ಯಗಳಲ್ಲಿ ಅಂತಃಕ್ಷಿಪ್ತ ವರ್ಧನವು ಸಾಮಾನ್ಯವಾಗಿ ಎಲ್ಲಿ ಕಂಡುಬರುತ್ತದೆ?

A. ಕಾಂಡದ ಪಾರ್ಶ್ವ ಬದಿಗಳಲ್ಲಿ

B. ಬೇರುಗಳು ಮತ್ತು ಪ್ರಕಾಂಡಗಳ ತುದಿಯಲ್ಲಿ

C. ಎಲೆಗಳ ಬುಡದಲ್ಲಿ ಅಥವಾ ಅಂತರ್ ಗಿಣ್ಣು ✓

D. ಎಲೆಗಳ ಅಂಚಿನಲ್ಲಿ

**Q22** Reproductive System

ಗರ್ಭಿಣಿಯೊಬ್ಬಳು ಒಂಬತ್ತನೇ ವಾರದಲ್ಲಿ ತಪಾಸಣೆಗಾಗಿ ಒಂದು ಕ್ಲಿನಿಕ್ ಗೆ ಭೇಟಿ ನೀಡುತ್ತಾಳೆ. ಬೆಳೆಯುತ್ತಿರುವ ಮಗುವನ್ನು ಈಗ ಭ್ರೂಣ ಎಂದು ಕರೆಯಲಾಗುತ್ತದೆ ಮತ್ತು ಅದು ಅಂಗಾಂಗಗಳ ಬೆಳವಣಿಗೆಯನ್ನು ಮುಂದುವರಿಸುತ್ತದೆ ಎಂದು ವೈದ್ಯರು ವಿವರಿಸುತ್ತಾರೆ. ಆಕೆ ಪ್ರಸ್ತುತ ಯಾವ ತ್ರೈಮಾಸಿಕದಲ್ಲಿ ಇದ್ದಾಳೆ?

A. ನಂತರದ ಹಂತ

B. ಎರಡನೇ ತ್ರೈಮಾಸಿಕ

C. ಮೊದಲ ತ್ರೈಮಾಸಿಕ ✓

D. ಮೂರನೇ ತ್ರೈಮಾಸಿಕ

Blackbook Vocabulary — Now in the App! ▶ Download Now on Google Play

**Q23** Sound

ನೀವು ರೈಲ್ವೆ ಹಳಿಯ ಮೇಲೆ ಕಿವಿಯನ್ನು ಇಟ್ಟಾಗ ರೈಲು ಸಮೀಪಿಸುತ್ತಿರುವ ಶಬ್ದವು ಏಕೆ ಕೇಳಿಸುತ್ತದೆ?

A. ಕಂಬಿಗಳು ಗಾಳಿಗಿಂತ ಹೆಚ್ಚು ಜೋರಾಗಿ ಕಂಪಿಸುತ್ತವೆ

B. ಶಬ್ದವು ಘನ ಉಕ್ಕಿನ ಕಂಬಿಗಳ ಮೂಲಕ ನಿಮ್ಮ ಕಿವಿಗೆ ಪರಿಣಾಮಕಾರಿಯಾಗಿ ಚಲಿಸುತ್ತದೆ ✓

C. ಶಬ್ದವು ಹಳಿಯ ಮೇಲಿನ ಗಾಳಿಯ ಮೂಲಕ ಚಲಿಸುತ್ತದೆ

D. ಕಂಪನಗಳು ಕಂಬಿಗಳ ಮೇಲ್ಮೈ ಉದ್ದಕ್ಕೂ ಮಾತ್ರ ಚಲಿಸುತ್ತವೆ

**Q24** Work, Energy & Power

ಈ ಕೆಳಗಿನವುಗಳಲ್ಲಿ ಚಲನ ಶಕ್ತಿಗೆ ಉದಾಹರಣೆ ಯಾವುದು?

A. ಮರದಿಂದ ನೇತಾಡುತ್ತಿರುವ ಸೇಬು

B. ನಿಲ್ಲಿಸಲಾದ ಬೈಸಿಕಲ್

C. ಕಪಾಟಿನ ಮೇಲಿನ ಪುಸ್ತಕ

D. ಆಕಾಶದಲ್ಲಿ ಹಾರುವ ಹಕ್ಕಿ ✓

**Q25** pH Scale & Indicators

ಒಂದು ದ್ರಾವಣದಲ್ಲಿ H+ ಅಯಾನುಗಳ ಹೆಚ್ಚಿನ ಸಾರತೆಯು ಈ ಕೆಳಗಿನದಕ್ಕೆ ಅನುಗುಣವಾಗಿರುತ್ತದೆ:

A. ತಟಸ್ಥ pH

B. ಸ್ಥಿರ pH

C. ಕಡಿಮೆ pH ಮೌಲ್ಯ ✓

D. ಹೆಚ್ಚಿನ pH ಮೌಲ್ಯ

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Animal Kingdom (Phyla Overview)

ಎರೆಹುಳು ಮತ್ತು ಏಡಿ ಎರಡೂ ವಿಭಜಿತವಾಗುವ ದೇಹಗಳನ್ನು ಹೊಂದಿವೆ, ಆದರೆ ಒಂದು ಮಾತ್ರ ಗಟ್ಟಿಯಾದ ಹೊರ ಹೊದಿಕೆಯನ್ನು ಹೊಂದಿರುತ್ತದೆ. ಈ ಹೊರ ಹೊದಿಕೆಯು ಭೂಚರ ವಾತಾವರಣದಲ್ಲಿ ಯಾವ ಪ್ರಯೋಜನವನ್ನು ಒದಗಿಸುತ್ತದೆ?

A. ಹೆಚ್ಚು ನಮ್ಯತೆಯ ಚಲನೆಯನ್ನು ಅನುಮತಿಸುತ್ತದೆ

B. ಜೀರ್ಣಕ್ರಿಯೆಗೆ ಒಂದೇ ತೆರೆಯುವಿಕೆಯನ್ನು ಒದಗಿಸುತ್ತದೆ

C. ಬೇಟೆಯನ್ನು ಸೆರೆಹಿಡಿಯಲು ಗ್ರಹಣಾಂಗಗಳನ್ನು ಒದಗಿಸುತ್ತದೆ

D. ನೀರಿನ ನಷ್ಟವನ್ನು ತಡೆಯುತ್ತದೆ ಮತ್ತು ರಕ್ಷಣೆ ನೀಡುತ್ತದೆ ✓

**Q2** Atomic Structure & Models

ನ್ಯೂಟ್ರಾನ್‌ಗಳ ಬಗ್ಗೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

A. ನ್ಯೂಟ್ರಾನ್‌ಗಳು ಬೀಜಕಣಗಳಲ್ಲಿ ಕಂಡುಬರುವ ಧನಾತ್ಮಕ ಆವೇಶದ ಕಣಗಳು

B. ನ್ಯೂಟ್ರಾನ್‌ಗಳು ಋಣಾತ್ಮಕ ಆವೇಶವನ್ನು ಹೊಂದಿರುತ್ತವೆ ಮತ್ತು ಅತ್ಯಂತ ಹೊರಗಿನ ಕವಚದಲ್ಲಿ ಕಂಡುಬರುತ್ತವೆ

C. ನ್ಯೂಟ್ರಾನ್‌ಗಳು ಎಲೆಕ್ಟ್ರಾನ್‌ಗಳಂತೆ ನ್ಯೂಕ್ಲಿಯಸ್‌ನ ಸುತ್ತ ಸುತ್ತುತ್ತವೆ

D. ನ್ಯೂಟ್ರಾನ್‌ಗಳು ಯಾವುದೇ ವಿದ್ಯುದಾವೇಶ ಹೊಂದಿರುವುದಿಲ್ಲ ಮತ್ತು ಪರಮಾಣುವಿನ ನ್ಯೂಕ್ಲಿಯಸ್‌ನಲ್ಲಿ ಕಂಡುಬರುತ್ತವೆ ✓

**Q3** Atoms & Molecules

C = 12 u, O = 16 u ಮತ್ತು H = 1 u ಎಂಬ ಪರಮಾಣು ದ್ರವ್ಯರಾಶಿಗಳನ್ನು ನೀಡಲಾಗಿದೆ ಎಂದಾದರೆ, ಈ ಕೆಳಗಿನ ಯಾವ ಆಯ್ಕೆಯು $CO_2$ ಮತ್ತು $H_2O$ ಗಳ ಅಣುರಾಶಿಯನ್ನು ಸರಿಯಾಗಿ ಪ್ರತಿನಿಧಿಸುತ್ತದೆ?

A. CO2= 44 u ; H2O = 18 u ✓

B. CO2= 46 u ; H2O = 20 u

C. CO2= 44 u ; H2O = 16 u

D. CO2= 32 u ; H2O = 18 u

**Q4** Basic Organic Chemistry

ಕೆಳಗೆ ನೀಡಲಾದ ಎರಡು ಹೇಳಿಕೆಗಳನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

ಹೇಳಿಕೆ A: ಎಥನೋಯಿಕ್ ಆಮ್ಲವು ಪ್ರತ್ಯಾಮ್ಲಗಳೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ರೂಪಿಸುತ್ತದೆ.
ಹೇಳಿಕೆ B: ಈ ಕ್ರಿಯೆಯನ್ನು ಉತ್ಕರ್ಷಣ ಕ್ರಿಯೆ ಎಂದು ವರ್ಗೀಕರಿಸಲಾಗಿದೆ.

A. ಹೇಳಿಕೆ A ತಪ್ಪಾಗಿದೆ ಆದರೆ ಹೇಳಿಕೆ B ಸರಿಯಾಗಿದೆ

B. A ಮತ್ತು B ಎರಡೂ ಹೇಳಿಕೆಗಳು ತಪ್ಪಾಗಿವೆ

C. A ಮತ್ತು B ಎರಡೂ ಹೇಳಿಕೆಗಳು ಸರಿಯಾಗಿವೆ

D. ಹೇಳಿಕೆ A ಸರಿಯಾಗಿದೆ ಆದರೆ ಹೇಳಿಕೆ B ತಪ್ಪಾಗಿದೆ ✓

**Q5** Basic Organic Chemistry

ಎಥನೋಯಿಕ್ ಆಮ್ಲದ ಕುರಿತು ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆ ಸರಿಯಾಗಿದೆ?

A. ಇದು ಸಾಬೂನಿನ ಅನುಭವ ಮತ್ತು ಕಹಿ ರುಚಿಯನ್ನು ಹೊಂದಿರುತ್ತದೆ

B. ಅದು ನೀರಿನಲ್ಲಿ ಕರಗುವುದಿಲ್ಲ

C. ಇದರ ಸಕ್ಕರೆ ಅಂಶದಿಂದಾಗಿ ಆಹಾರವನ್ನು ಸಿಹಿಗೊಳಿಸಲು ಇದನ್ನು ಬಳಸಲಾಗುತ್ತದೆ

D. ಇದು ನೀಲಿ ಲಿಟ್ಮಸ್ ಅನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತದೆ ಮತ್ತು ಕಾರ್ಬೋನೇಟ್‌ಗಳೊಂದಿಗೆ ವರ್ತಿಸಿ $CO_2$ ಅನ್ನು ಉತ್ಪತ್ತಿ ಮಾಡುತ್ತದೆ ✓

**Q6** Circulatory System (Heart, Blood)

ಹೃದಯವು ದೇಹಕ್ಕೆ ಪಂಪ್ ಮಾಡುವ ರಕ್ತದಲ್ಲಿ ಯಾವ ಅನಿಲವು ಅತ್ಯಂತ ಹೇರಳವಾಗಿರುತ್ತದೆ?

A. ಹೀಲಿಯಂ

B. ಜಲಜನಕ

C. ಆಮ್ಲಜನಕ ✓

D. ಇಂಗಾಲದ ಡೈಆಕ್ಸೈಡ್

Blackbook Vocabulary — Now in the App! ► Download Now on Google Play

generated by rank.qmaths.in

**Q7** Current Electricity (Ohm's Law, Circuits)

ಒಂದು ವಿದ್ಯುತ್ ಹೀಟರ್‌ನ ರೇಟಿಂಗ್ 2000 W ಆಗಿದೆ ಮತ್ತು ಅದನ್ನು 2 ಗಂಟೆಗಳ ಕಾಲ ಬಳಸಲಾಗುತ್ತದೆ. ಹಾಗಾದರೆ ಜೌಲ್ಸ್‌ಗಳಲ್ಲಿ ಎಷ್ಟು ಶಕ್ತಿ ಬಳಕೆಯಾಗುತ್ತದೆ?

- **A.** 720,000 ಜೌಲ್ಸ್‌ಗಳು
- **B.** 3,600,000 ಜೌಲ್ಸ್‌ಗಳು
- **C.** 7,200,000 ಜೌಲ್ಸ್‌ಗಳು
- **D.** 14,400,000 ಜೌಲ್ಸ್‌ಗಳು ✓

**Q8** Extraction & Metallurgy

ಕ್ರಿಯಾಶೀಲ ಸರಣಿಯ ಮಧ್ಯದ ಲೋಹವಾದ ಕಬ್ಬಿಣವನ್ನು ಸಾಮಾನ್ಯವಾಗಿ ಈ ಕೆಳಗಿನ ಯಾವ ಪ್ರಕ್ರಿಯೆಯಲ್ಲಿ ಅದರ ಅದಿರಿನಿಂದ ಉದ್ಧರಣೆ ಮಾಡಲಾಗುತ್ತದೆ?

- **A.** ಉಷ್ಣ ವಿಭಜನೆ
- **B.** ಜಲಜನಕದೊಂದಿಗೆ ಅಪಕರ್ಷಣ
- **C.** ಇಂಗಾಲದೊಂದಿಗೆ ಅಪಕರ್ಷಣ (ಕಲ್ಲಿದ್ದಲು ಕಿಟ್ಟ) ✓
- **D.** ವಿದ್ಯುದ್ವಿಭಜನೀಯ ಅಪಕರ್ಷಣ

**Q9** Important Salts & Their Uses

ಅಗ್ನಿಶಾಮಕಗಳಲ್ಲಿ ಸೋಡಿಯಂ ಕಾರ್ಬೋನೇಟ್‌ಗಿಂತ ಅಡಿಗೆ ಸೋಡಾಕ್ಕೆ ಏಕೆ ಹೆಚ್ಚು ಆದ್ಯತೆ ನೀಡಲಾಗುತ್ತದೆ?

- **A.** ಇದು ಆಮ್ಲದೊಂದಿಗೆ ಸುಲಭವಾಗಿ ಇಂಗಾಲದ ಡೈಆಕ್ಸೈಡ್ ಅನ್ನು ಬಿಡುಗಡೆ ಮಾಡುತ್ತದೆ ✓
- **B.** ಇದು ರಭಸವಾಗಿ ವರ್ತಿಸಿ ಶಾಖವನ್ನು ಉತ್ಪಾದಿಸುತ್ತದೆ
- **C.** ಇದು ಕರಗದ ಅವಶೇಷವನ್ನು ರೂಪಿಸುತ್ತದೆ
- **D.** ಇದು ತ್ವರಿತವಾಗಿ ಜಲಜನಕ ಅನಿಲವನ್ನು ಉತ್ಪಾದಿಸುತ್ತದೆ

**Q10** Mechanics

ಒಬ್ಬ ಸೈಕಲ್ ಸವಾರನು1.5 ಗಂಟೆಗಳಲ್ಲಿ 30 ಕಿಲೋಮೀಟರ್ ದೂರವನ್ನು ಕ್ರಮಿಸುತ್ತಾನೆ. ಹಾಗಾದರೆ ಸೈಕಲ್ ಸವಾರನ ಸರಾಸರಿ ವೇಗ ಎಷ್ಟು?

- **A.** ಗಂಟೆಗೆ 45 ಕಿಲೋಮೀಟರ್
- **B.** ಗಂಟೆಗೆ 15 ಕಿಲೋಮೀಟರ್
- **C.** ಗಂಟೆಗೆ 2 ಕಿಲೋಮೀಟರ್
- **D.** ಗಂಟೆಗೆ 20 ಕಿಲೋಮೀಟರ್ ✓

**Q11** Mechanics

ಈ ಕೆಳಗಿನ ಯಾವ ಹೇಳಿಕೆಯು ಏಕರೂಪ ವೃತ್ತೀಯ ಚಲನೆಯನ್ನು ಅತ್ಯುತ್ತಮವಾಗಿ ವ್ಯಾಖ್ಯಾನಿಸುತ್ತದೆ?

- **A.** ಸ್ಥಿರ ವೇಗ ಮತ್ತು ಶೂನ್ಯ ವೇಗೋತ್ಕರ್ಷದೊಂದಿಗೆ ವೃತ್ತಾಕಾರದ ಪಥದಲ್ಲಿನ ಚಲನೆ
- **B.** ಸ್ಥಿರ ಜವ ಮತ್ತು ಬದಲಾಗುತ್ತಿರುವ ವೇಗದ ದಿಕ್ಕಿನೊಂದಿಗೆ ವೃತ್ತಾಕಾರದ ಪಥದಲ್ಲಿನ ಚಲನೆ ✓
- **C.** ಸ್ಥಿರ ಜವ ಮತ್ತು ಸ್ಥಿರ ವೇಗದೊಂದಿಗೆ ನೇರ ಪಥದಲ್ಲಿನ ಚಲನೆ
- **D.** ಬದಲಾಗುತ್ತಿರುವ ಜವ ಆದರೆ ಸ್ಥಿರ ವೇಗದೊಂದಿಗೆ ವೃತ್ತಾಕಾರದ ಪಥದಲ್ಲಿನ ಚಲನೆ

**Q12** Mirrors & Lenses

ವಸ್ತುವು ನಿಮ್ನ ದರ್ಪಣದ ವಕ್ರತಾ ಕೇಂದ್ರದ ಆಚೆಯಿಂದ ಸಂಗಮ ಬಿಂದುವಿನ ಕಡೆಗೆ ಚಲಿಸಿದಾಗ ಬಿಂಬವು ಬದಲಾಗುವುದನ್ನು ಒಬ್ಬ ವಿದ್ಯಾರ್ಥಿಯು ಗಮನಿಸುತ್ತಾನೆ. ಹಾಗಾದರೆ ಯಾವ ಬದಲಾವಣೆಯನ್ನು ಗಮನಿಸಬಹುದು?

- **A.** ಬಿಂಬವು ಚಿಕ್ಕದಾಗುತ್ತದೆ ಮತ್ತು ದರ್ಪಣದಿಂದ ದೂರಕ್ಕೆ ಚಲಿಸುತ್ತದೆ
- **B.** ಬಿಂಬವು ಚಿಕ್ಕದಾಗುತ್ತದೆ ಮತ್ತು ದರ್ಪಣದ ಕಡೆಗೆ ಚಲಿಸುತ್ತದೆ
- **C.** ಬಿಂಬವು ಅದೇ ಗಾತ್ರ ಮತ್ತು ಸ್ಥಾನದಲ್ಲಿ ಉಳಿಯುತ್ತದೆ
- **D.** ಬಿಂಬವು ದೊಡ್ಡದಾಗುತ್ತದೆ ಮತ್ತು ದರ್ಪಣದಿಂದ ದೂರಕ್ಕೆ ಚಲಿಸುತ್ತದೆ ✓

**Q13** Mixtures, Solutions, Colloids

ಒಬ್ಬ ವಿದ್ಯಾರ್ಥಿಯು ಒಂದು ಚಂಚುಪಾತ್ರೆಯಲ್ಲಿ ಎಣ್ಣೆ ಮತ್ತು ನೀರನ್ನು ಬೆರೆಸಿದಾಗ ಎರಡು ಪ್ರತ್ಯೇಕ ಪದರಗಳನ್ನು ಗಮನಿಸುತ್ತಾನೆ. ಈ ವೀಕ್ಷಣೆಗೆ ಈ ಕೆಳಗಿನ ಯಾವ ವಿವರಣೆಯು ಅತ್ಯುತ್ತಮವಾಗಿ ಹೊಂದಿಕೊಳ್ಳುತ್ತದೆ?

- **A.** ಎಣ್ಣೆ ಮತ್ತು ನೀರು ರಾಸಾಯನಿಕವಾಗಿ ವರ್ತಿಸಿ ಹೊಸ ಸಂಯುಕ್ತವನ್ನು ರೂಪಿಸುತ್ತವೆ
- **B.** ಎಣ್ಣೆಯು ನೀರಿನಲ್ಲಿ ಸಂಪೂರ್ಣವಾಗಿ ಕರಗಿ ಏಕರೂಪದ ದ್ರಾವಣವನ್ನು ರೂಪಿಸುತ್ತದೆ
- **C.** ಎಣ್ಣೆ ಮತ್ತು ನೀರು ಅಸಮರೂಪ ಮಿಶ್ರಣವನ್ನು ರೂಪಿಸುತ್ತವೆ ಏಕೆಂದರೆ ಅವುಗಳ ಘಟಕಗಳು ಏಕರೂಪವಾಗಿ ವಿತರಿಸಲ್ಪಟ್ಟಿಲ್ಲ ✓
- **D.** ಎಣ್ಣೆ ಮತ್ತು ನೀರು ಏಕಹಂತದ ಸಮರೂಪದ ಮಿಶ್ರಣವನ್ನು ರೂಪಿಸುತ್ತವೆ

Blackbook Vocabulary — Now in the App! ▶ Download Now on Google Play

**Q14** Oxidation & Reduction (Redox)

ಒಬ್ಬ ವಿದ್ಯಾರ್ಥಿಯು ತಾಮ್ರದ ಪುಡಿಯನ್ನು ಗಾಳಿಯಲ್ಲಿ ಬಿಸಿ ಮಾಡುವಾಗ ಈ ಕೆಳಗಿನ ಕ್ರಿಯೆಯನ್ನು ಗಮನಿಸುತ್ತಾನೆ.

$2Cu + O_2 \rightarrow 2CuO$

ನಂತರ, ಕಪ್ಪು ತಾಮ್ರದ ಆಕ್ಸೈಡ್ ಮೇಲೆ ಜಲಜನಕದ ಅನಿಲವನ್ನು ಹಾಯಿಸಲಾಗುತ್ತದೆ ಮತ್ತು ಕೆಂಪುಮಿಶ್ರಿತ-ಕಂದು ಬಣ್ಣದ ತಾಮ್ರವನ್ನು ಪಡೆಯಲಾಗುತ್ತದೆ.

$CuO + H_2 \rightarrow Cu + H_2O$

ಮೊದಲ ಕ್ರಿಯೆಯಲ್ಲಿ ಯಾವ ಪದಾರ್ಥವು ಉತ್ಕರ್ಷಣೆಗೊಳ್ಳುತ್ತದೆ ಮತ್ತು ಎರಡನೇ ಕ್ರಿಯೆಯಲ್ಲಿ ಯಾವ ಪದಾರ್ಥವು ಅಪಕರ್ಷಣೆಗೊಳ್ಳುತ್ತದೆ?

- A. ಮೊದಲ ಕ್ರಿಯೆಯಲ್ಲಿ ತಾಮ್ರದ ಆಕ್ಸೈಡ್ ಮತ್ತು ಎರಡನೇ ಕ್ರಿಯೆಯಲ್ಲಿ ತಾಮ್ರ
- B. ಮೊದಲ ಕ್ರಿಯೆಯಲ್ಲಿ ತಾಮ್ರ ಮತ್ತು ಎರಡನೇ ಕ್ರಿಯೆಯಲ್ಲಿ ತಾಮ್ರದ ಆಕ್ಸೈಡ್ ✓
- C. ಮೊದಲ ಕ್ರಿಯೆಯಲ್ಲಿ ಜಲಜನಕ ಮತ್ತು ಎರಡನೇ ಕ್ರಿಯೆಯಲ್ಲಿ ತಾಮ್ರದ ಆಕ್ಸೈಡ್
- D. ಮೊದಲ ಕ್ರಿಯೆಯಲ್ಲಿ ಆಮ್ಲಜನಕ ಮತ್ತು ಎರಡನೇ ಕ್ರಿಯೆಯಲ್ಲಿ ತಾಮ್ರದ ಆಕ್ಸೈಡ್

**Q15** Photosynthesis

ದ್ಯುತಿಸಂಶ್ಲೇಷಣೆಯ ಸಮಯದಲ್ಲಿ ನೀರಿನ ಅಣುಗಳು ವಿಭಜನೆಯಾದಾಗ ಏನು ಉತ್ಪತ್ತಿಯಾಗುತ್ತದೆ?

- A. ಸಾರಜನಕ ಮತ್ತು ಇಂಗಾಲ
- B. ಸಾರಜನಕ ಮತ್ತು ಆಮ್ಲಜನಕ
- C. ಆಮ್ಲಜನಕ ಮತ್ತು ಇಂಗಾಲ
- D. ಜಲಜನಕ ಮತ್ತು ಆಮ್ಲಜನಕ ✓

**Q16** Physical & Chemical Properties

ವಿದ್ಯುತ್ ಪ್ರಸರಣ ಮಾರ್ಗಗಳಿಗೆ ಈ ಕೆಳಗಿನ ಯಾವ ವಸ್ತುವು ಉತ್ತಮ ಆಯ್ಕೆಯಾಗಿದೆ?

- A. ಟಂಗ್‌ಸ್ಟನ್
- B. ಅಲ್ಯೂಮಿನಿಯಂ ✓
- C. ರಬ್ಬರ್
- D. ಗಾಜು

**Q17** Plant Tissues & Transport

ಮರದ ಪ್ರಧಾನ ಕಾಂಡದ ಅಗಲ ಅಥವಾ ಸುತ್ತಳತೆಯನ್ನು ಹೆಚ್ಚಿಸಲು, ಜೀವಕೋಶಗಳು ಕಾಂಡದ ಸುತ್ತಲೂ ಉಂಗುರಾಕೃತಿಯಲ್ಲಿ ವಿಭಜನೆಹೊಂದಬೇಕು. ಈ ಕಾರ್ಯವನ್ನು ಯಾವ ಅಂಗಾಂಶವು ನಿರ್ವಹಿಸುತ್ತದೆ?

- A. ಪಾರ್ಶ್ವ ವರ್ಧನ ಅಂಗಾಂಶ ✓
- B. ಸ್ಕ್ಲೀರಂಕೈಮ
- C. ಅಂತಃಕ್ಷಿಪ್ತ ವರ್ಧನಾಂಗಾಂಶ
- D. ಅಗ್ರಸ್ಥ ವರ್ಧನ ಅಂಗಾಂಶ

**Q18** Pollution (Air, Water, Soil, Noise)

ಜೈವಿಕ ವಿಘಟನೀಯವಲ್ಲದ ತ್ಯಾಜ್ಯಕ್ಕೆ ಸಂಬಂಧಿಸಿದ ಪ್ರಮುಖ ಪರಿಸರ ಕಾಳಜಿ ಏನು?

- A. ಇದನ್ನು ಜೀವಿಗಳು ತ್ವರಿತವಾಗಿ ಮರುಬಳಕೆ ಮಾಡುತ್ತವೆ
- B. ಇದು ಪ್ರಕೃತಿಯಲ್ಲಿ ಸುಲಭವಾಗಿ ವಿಘಟನೆಯಾಗುತ್ತದೆ
- C. ಇದು ಸಂಗ್ರಹವಾಗುತ್ತದೆ ಮತ್ತು ಮಾಲಿನ್ಯಕ್ಕೆ ಕಾರಣವಾಗುತ್ತದೆ ✓
- D. ಇದು ಮಣ್ಣಿನ ಫಲವತ್ತತೆಯನ್ನು ಸುಧಾರಿಸುತ್ತದೆ

**Q19** Reflection & Refraction

ಈಜುಕೊಳವೊಂದು ಅದರ ನಿಜವಾದ ಆಳಕ್ಕಿಂತ ಕಡಿಮೆ ಆಳವಿರುವಂತೆ ತೋರುತ್ತದೆ ಎಂದು ವಿದ್ಯಾರ್ಥಿಯೊಬ್ಬ ಗಮನಿಸುತ್ತಾನೆ. ಈ ವಿದ್ಯಮಾನವನ್ನು ಯಾವ ಪರಿಕಲ್ಪನೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ನೀರಿನೊಳಗಿನ ಬೆಳಕಿನ ಆಂತರಿಕ ಪ್ರತಿಫಲನ
- B. ನೀರಿನ ಅಣುಗಳಿಂದ ಬೆಳಕಿನ ಚದುರುವಿಕೆ
- C. ಈಜುಕೊಳದ ತಳದಿಂದ ಬೆಳಕಿನ ಪ್ರತಿಫಲನ
- D. ನೀರಿನ-ಗಾಳಿಯ ಗಡಿಯಲ್ಲಿ ಬೆಳಕಿನ ವಕ್ರೀಭವನ ✓

**Q20** Reflection & Refraction

ನೀರಿನಲ್ಲಿ ಭಾಗಶಃ ಮುಳುಗಿದಾಗ ಒಂದು ಪೆನ್ಸಿಲ್ ಬಾಗಿದಂತೆ ಕಾಣುತ್ತದೆ. ವಕ್ರೀಭವನವನ್ನು ಅರ್ಥಮಾಡಿಕೊಳ್ಳುವುದು ಉತ್ತಮ ಅಕ್ವೇರಿಯಂ ಪ್ರದರ್ಶನಗಳನ್ನು ವಿನ್ಯಾಸಗೊಳಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಯಾವ ಸನ್ನಿವೇಶವು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಅಕ್ವೇರಿಯಂನ ಪ್ರಕಾಶಮಾನತೆಯನ್ನು ಹೆಚ್ಚಿಸಲು ಕನ್ನಡಿಗಳನ್ನು ಬಳಸುವುದು
- B. ಬೆಳಕಿನ ಬಾಗುವಿಕೆಯನ್ನು ಕಡಿಮೆ ಮಾಡಲು ನೀರಿನ ತಾಪಮಾನವನ್ನು ಬದಲಾಯಿಸುವುದು
- C. ವಸ್ತುಗಳನ್ನು ಎದ್ದು ಕಾಣುವಂತೆ ಮಾಡಲು ಬಣ್ಣದ ಹಿನ್ನೆಲೆಗಳನ್ನು ಬಳಸುವುದು
- D. ವಕ್ರೀಭವನವನ್ನು ಗಣನೆಗೆ ತೆಗೆದುಕೊಂಡು ಬೆಳಕಿನ ಸ್ಥಾನವನ್ನು ಹೊಂದಿಸುವುದರಿಂದ ಮೀನುಗಳು ವೀಕ್ಷಕರಿಗೆ ಅವುಗಳ ನೈಜ ಸ್ಥಳಗಳಲ್ಲಿ ಕಾಣಿಸುವಂತೆ ಮಾಡಬಹುದು ✓

**Q21** Reproductive System

_______ ಅನ್ನು ಹೊರತುಪಡಿಸಿ, ಈ ಕೆಳಗಿನ ಎಲ್ಲಾ ರಚನೆಗಳು ಪುರುಷ ಸಂತಾನೋತ್ಪತ್ತಿ ವ್ಯೂಹಕ್ಕೆ ಸೇರಿವೆ.

- A. ವೃಷಣಕೋಶ
- B. ರೇತ್ರನಾಳ
- C. ಫಾಲೋಪಿಯನ್ ನಾಳ ✓
- D. ಶಿಶ್ನ

Blackbook Vocabulary — Now in the App! ► Download Now on Google Play

**Q22** Respiratory System

ಪ್ರಾಣಿ ಜೀವಕೋಶಗಳಲ್ಲಿ ಕೋಶಿಯ ಉಸಿರಾಟದ ಸಮಯದಲ್ಲಿ ಬಿಡುಗಡೆಯಾಗುವ ಶಕ್ತಿಯನ್ನು ಬಳಸಿಕೊಂಡು ಯಾವ ಅಣುವು ತಕ್ಷಣವೇ ಸಂಶ್ಲೇಷಣೆಯಾಗುತ್ತದೆ?

A. ಗ್ವಾನೋಸಿನ್ ಡೈಫಾಸ್ಫೇಟ್ (GDP)

B. ಅಡಿನೋಸಿನ್ ಡೈಫಾಸ್ಫೇಟ್ (ADP)

C. ಅಡಿನೋಸಿನ್ ಟ್ರೈಫಾಸ್ಫೇಟ್ (ATP) ✓

D. ನಿಕೋಟಿನಾಮೈಡ್ ಅಡಿನೀನ್ ಡೈನ್ಯೂಕ್ಲಿಯೋಟೈಡ್ (NAD)

**Q23** Theory of Evolution

ಪರ್ವತ ಪ್ರದೇಶಗಳಲ್ಲಿ ವಾಸಿಸುವ ಪಕ್ಷಿಗಳು ಕಾಡುಗಳಲ್ಲಿ ವಾಸಿಸುವ ಪಕ್ಷಿಗಳಿಗಿಂತ ಹೆಚ್ಚು ಬಲವಾದ ಎದೆಯ ಸ್ನಾಯುಗಳು ಮತ್ತು ದೊಡ್ಡ ರೆಕ್ಕೆಗಳನ್ನು ಹೊಂದಿರುತ್ತವೆ ಎಂದು ಪಕ್ಷಿಶಾಸ್ತ್ರಜ್ಞರು ಗಮನಿಸಿದ್ದಾರೆ. ಯಾವ ರಚನಾತ್ಮಕ ರೂಪಾಂತರವನ್ನು ವಿವರಿಸುತ್ತವೆ?

A. ಮೊಟ್ಟೆಯ ಉತ್ಪಾದನೆಯನ್ನು ಹೆಚ್ಚಿಸುವುದು

B. ಗೂಡು ಕಟ್ಟುವುದನ್ನು ವರ್ಧಿಸುತ್ತವೆ

C. ಛದ್ಮವೇಷವನ್ನು ಸುಧಾರಿಸುವುದು

D. ತೆಳುವಾದ ಗಾಳಿಯಲ್ಲಿ ನಿರಂತರ ಹಾರಾಟವನ್ನು ಸುಲಭಗೊಳಿಸುವುದು ✓

**Q24** Work, Energy & Power

ಒಬ್ಬ ವಿದ್ಯಾರ್ಥಿಯು ಒಂದು ಪೆಟ್ಟಿಗೆಯ ಮೇಲೆ ಸಮತಲಕ್ಕೆ ಒಂದು ನಿರ್ದಿಷ್ಟ ಕೋನದಲ್ಲಿ ಸ್ಥಿರವಾದ ಬಲವನ್ನು ಪ್ರಯೋಗಿಸುತ್ತಾನೆ ಮತ್ತು ಪೆಟ್ಟಿಗೆಯು ಒರಟಾದ ಮೇಲ್ಮೈಯಲ್ಲಿ ನೇರ ಸಮತಲ ರೇಖೆಯಲ್ಲಿ ಚಲಿಸುತ್ತದೆ. ಪೆಟ್ಟಿಗೆಯ ಮೇಲೆ ಪ್ರಯೋಗಿಸಿದ ಬಲದಿಂದ ಮಾಡಿದ ಕೆಲಸವನ್ನು ಈ ಕೆಳಗಿನ ಯಾವ ಹೇಳಿಕೆಯು ಸರಿಯಾಗಿ ವಿವರಿಸುತ್ತದೆ?

A. ಪ್ರಯಾಣಿಸಿದ ಒಟ್ಟು ದೂರದಿಂದ ಗುಣಿಸಿದ ಬಲದ ಸಮತಲ ಮತ್ತು ಲಂಬ ಘಟಕಗಳ ಮೊತ್ತ

B. ಅದೇ ದಿಕ್ಕಿನಲ್ಲಿ ಚಲಿಸಲಾದ ದೂರದಿಂದ ಗುಣಿಸಿದ ಪ್ರಯೋಗಿಸಲಾದ ಬಲದ ಸಮತಲ ಘಟಕ ಮಾತ್ರವೇ ಮಾಡಿದ ಕೆಲಸವನ್ನು ನೀಡುತ್ತದೆ ✓

C. ಸಮತಲ ಮತ್ತು ಲಂಬ ಘಟಕಗಳೆರಡನ್ನೂ ಒಳಗೊಂಡಂತೆ, ಚಲಿಸಲಾದ ದೂರದಿಂದ ಗುಣಿಸಿದ ಒಟ್ಟು ಪ್ರಯೋಗಿಸಲಾದ ಬಲ

D. ಲಂಬವಾಗಿ ಚಲಿಸಲಾದ ದೂರದಿಂದ ಗುಣಿಸಿದ, ಪ್ರಯೋಗಿಸಿದ ಬಲದ ಲಂಬ ಘಟಕ ಮಾತ್ರ

**Q25** Work, Energy & Power

m ದ್ರವ್ಯರಾಶಿಯನ್ನು ಹೊಂದಿರುವ ಒಂದು ವಸ್ತುವನ್ನು ಭೂಮಿಯ ಮೇಲ್ಮೈಗೆ ಲಂಬವಾಗಿ h ಎತ್ತರಕ್ಕೆ ಏರಿಸಲಾಗಿದೆ. ಅದರ ಗುರುತ್ವ ಪ್ರಚ್ಛನ್ನ ಶಕ್ತಿ ಎಷ್ಟು?

A. mh/g

B. mgh ✓

C. hg/m

D. mg/h

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Atomic Structure & Models

ರುದರ್ಫೋರ್ಡ್ ಅವರ ಮಾದರಿಯ ಪ್ರಕಾರ, ಈ ಕೆಳಗಿನ ಯಾವ ಹೇಳಿಕೆಯು ನ್ಯೂಕ್ಲಿಯಸ್ ಅನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ನ್ಯೂಕ್ಲಿಯಸ್ ಟೊಳ್ಳಾಗಿರುತ್ತದೆ ಮತ್ತು ತಟಸ್ಥವಾಗಿರುತ್ತದೆ

B. ನ್ಯೂಕ್ಲಿಯಸ್ ದೊಡ್ಡದಾಗಿರುತ್ತದೆ, ಹಗುರವಾಗಿರುತ್ತದೆ ಮತ್ತು ಋಣ ವಿದ್ಯುದಾವೇಶವನ್ನು ಹೊಂದಿರುತ್ತದೆ

C. ನ್ಯೂಕ್ಲಿಯಸ್ ಹರಡಿಕೊಂಡಿರುತ್ತದೆ ಮತ್ತು ವಿದ್ಯುದಾವೇಶವನ್ನು ಹೊಂದಿರುವುದಿಲ್ಲ

D. ನ್ಯೂಕ್ಲಿಯಸ್ ಚಿಕ್ಕದಾಗಿರುತ್ತದೆ, ಸಾಂದ್ರವಾಗಿರುತ್ತದೆ ಮತ್ತು ಧನ ವಿದ್ಯುದಾವೇಶವನ್ನು ಹೊಂದಿರುತ್ತದೆ ✓

**Q2** Basic Organic Chemistry

ಒಂದು ಮೋಲ್ ನಷ್ಟು ಎಥೆನಾಲ್‌ನ ಸಂಪೂರ್ಣ ಉತ್ಕರ್ಷಣದಿಂದ ಎಷ್ಟು ಮೋಲ್ $CO_2$ ಬಿಡುಗಡೆಯಾಗುತ್ತದೆ?

A. ಮೂರು

B. ಎರಡು ✓

C. ಒಂದು

D. ನಾಲ್ಕು

**Q3** Chemical Bonding (Ionic, Covalent)

ಅಲೋಹವು ಎಲೆಕ್ಟ್ರಾನ್‌ಗಳನ್ನು ಪಡೆದಾಗ, ಅದು ______ ರೂಪಿಸುತ್ತದೆ.

A. ಪ್ರೋಟಾನ್

B. ಋಣ ಅಯಾನು ✓

C. ತಟಸ್ಥ

D. ಧನ ಅಯಾನು

**Q4** Circulatory System (Heart, Blood)

ಶ್ವಾಸಕೋಶದ ಪ್ರಮಾಣವು ಸಹಜಸ್ಥಿತಿಯಲ್ಲಿ ಇದ್ದರೂ ರೋಗಿಯೊಬ್ಬರಿಗೆ ಆಮ್ಲಜನಕದ ಪೂರಣವು ಕಡಿಮೆಯಾಗಿದೆ. ಇದು ಯಾವ ಪರಿಸ್ಥಿತಿಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಉಸಿರಾಟದ ದರ ಹೆಚ್ಚಾಗಿದೆ

B. ಲೋಮನಾಳದ ಸಾಂದ್ರತೆ ಹೆಚ್ಚಾಗಿದೆ

C. ಶ್ವಾಸಕೋಶದ ಸಣ್ಣ ಗಾಳಿಗೂಡುಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ

D. ಹಿಮೋಗ್ಲೋಬಿನ್ ಸಾಂದ್ರತೆ ಕಡಿಮೆಯಾಗಿದೆ ✓

**Q5** Circulatory System (Heart, Blood)

ಈ ಸಾದೃಶ್ಯತೆಯನ್ನು ಪೂರ್ಣಗೊಳಿಸಿ.

ಪ್ಲೇಟ್‌ಲೆಟ್‌ಗಳು: ಹೆಪ್ಪುಗಟ್ಟುವಿಕೆ :: ಬಿಳಿ ರಕ್ತ ಕಣಗಳು : __________.

A. ಆಮ್ಲಜನಕದ ಸಾಗಾಣಿಕೆ

B. ಖನಿಜಾಂಶಗಳನ್ನು ಶೇಖರಿಸಿಡುವುದು

C. ಕೀಲುಗಳನ್ನು ಜೋಡಿಸುವುದು

D. ಉರಿಯೂತದ ವಿರುದ್ಧ ಹೋರಾಡುವಿಕೆ ✓

**Q6** Circulatory System (Heart, Blood)

ಹೃದಯದ ಸಂಕೋಚನದ ಸಮಯದಲ್ಲಿ ರಕ್ತದ ಹಿಮ್ಮುಖ ಹರಿವನ್ನು ಯಾವ ರಚನೆಯು ತಡೆಯುತ್ತದೆ?

A. ಅಪಧಮನಿಗಳು

B. ಕವಾಟಗಳು ✓

C. ಸೆಪ್ಟಾ

D. ಸ್ನಾಯುಗಳು

**Q7** Ecosystem & Food Chain

ಆಹಾರ ಸರಪಳಿಗಳಿಗಿಂತ ಆಹಾರ ಜಾಲಗಳನ್ನು ಏಕೆ ಹೆಚ್ಚು ಸ್ಥಿರ ಎಂದು ಪರಿಗಣಿಸಲಾಗುತ್ತದೆ?

A. ಅವು ಹೆಚ್ಚಿನ ಸಂಖ್ಯೆಯ ಉತ್ಪಾದಕ ಜೀವಿಗಳನ್ನು ಹೊಂದಿವೆ

B. ಅವು ಅನೇಕ ಬಗೆಯ ಆಹಾರ ಸೇವನೆ ಸಾಧ್ಯತೆಗಳನ್ನು ಹೊಂದಿರುತ್ತವೆ ✓

C. ಅವು ಪೋಷಣಾ ಸ್ತರಗಳ ನಡುವೆ ಯಾವುದೇ ಶಕ್ತಿಯ ವರ್ಗಾವಣೆಯನ್ನು ತೋರಿಸುವುದಿಲ್ಲ

D. ಅವು ಯಾವುದೇ ಮಾಂಸಾಹಾರಿಗಳನ್ನು ಹೊಂದಿರುವುದಿಲ್ಲ

**Q8** Electromagnetic Induction

ಒಂದು ವಾಹಕವು ಕಾಂತಕ್ಷೇತ್ರದ ಮೂಲಕ ಚಲಿಸಿದಾಗ ಏನಾಗುತ್ತದೆ?

A. ವಿದ್ಯುತ್ವಾಹಕದಲ್ಲಿ ಬೆಳಕು ಉತ್ಪತ್ತಿಯಾಗುತ್ತದೆ

B. ವಿದ್ಯುತ್ವಾಹಕವು ಬಿಸಿಯಾಗುತ್ತದೆ

C. ಕಾಂತೀಯ ಕ್ಷೇತ್ರದ ಬಲವು ಹೆಚ್ಚಾಗುತ್ತದೆ

D. ವಿಭವಾಂತರವು ಅದರ ತುದಿಗಳಾದ್ಯಂತ ಪ್ರೇರೇಪಿತವಾಗುತ್ತದೆ ✓

Blackbook Vocabulary — Now in the App! ▶ Download Now on Google Play

**Q9** Global Warming & Climate Change

ವಾತಾವರಣದ ಅತಿಯಾದ $CO_2$ ಸಮುದ್ರದ ನೀರಿನಲ್ಲಿ ಅದರ ವಿಲೀನತೆಯನ್ನು ಹೆಚ್ಚಿಸುತ್ತದೆ. ಇದು ಸಮುದ್ರದ ನೀರನ್ನು ಹೆಚ್ಚು ________ ಆಗಿಸುತ್ತದೆ.

- A. ಆಮ್ಲೀಯ ✓
- B. ತಟಸ್ಥ
- C. ಪ್ರತ್ಯಾಮ್ಲೀಯ
- D. ಆಮ್ಲಜನಕಯುಕ್ತ

**Q10** Hydrocarbons (Methane, Ethane, etc.)

ಸಮರ್ಥನೆ (A) ಮತ್ತು ಕಾರಣ (R) ಎಂಬ ಕೆಳಗಿನ ಎರಡು ಹೇಳಿಕೆಗಳಿಗೆ ಸಂಬಂಧಿಸಿದಂತೆ ಸರಿಯಾದ ಆಯ್ಕೆಯನ್ನು ಆರಿಸಿರಿ.

ಸಮರ್ಥನೆ(A): ಅಪರ್ಯಾಪ್ತ ಹೈಡ್ರೋಕಾರ್ಬನ್‌ಗಳು ಕಪ್ಪು ಬಣ್ಣದ ಹೊಗೆಯೊಂದಿಗೆ ಹಳದಿ ಜ್ವಾಲೆಯನ್ನು ಉಂಟುಮಾಡುತ್ತವೆ.
ಕಾರಣ (R): ಆಮ್ಲಜನಕವು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೆ ಇದ್ದಾಗ ಅವು ಸಂಪೂರ್ಣವಾಗಿ ಉರಿಯುತ್ತವೆ.

- A. A ಸರಿಯಾಗಿದೆ, ಆದರೆ R ತಪ್ಪಾಗಿದೆ ✓
- B. A ಮತ್ತು R ಎರಡೂ ಸರಿಯಾಗಿವೆ, ಮತ್ತು R ಎಂಬುದು A ಗೆ ಸರಿಯಾದ ವಿವರಣೆಯಾಗಿದೆ
- C. A ಮತ್ತು R ಎರಡೂ ಸರಿಯಾಗಿವೆ, ಮತ್ತು R ಎಂಬುದು A ಗೆ ಸರಿಯಾದ ವಿವರಣೆಯಲ್ಲ
- D. A ತಪ್ಪಾಗಿದೆ, ಆದರೆ R ಸರಿಯಾಗಿದೆ

**Q11** Light & Optics

ಮೊದಲನೆಯ ಪಟ್ಟಕದ ನಂತರ ಅದೇ ರೀತಿಯ ಎರಡನೇ ಪಟ್ಟಕವನ್ನು ತಲೆಕೆಳಗಾದ ಸ್ಥಿತಿಯಲ್ಲಿ ಇರಿಸಿದರೆ ವರ್ಣಪಟಲದಲ್ಲಿ ಬಣ್ಣಗಳ ಹರಡುವಿಕೆಗೆ ಏನಾಗುತ್ತದೆ?

- A. ಬಣ್ಣಗಳ ಹರಡುವಿಕೆಯು ಮರುಸಂಯೋಗಗೊಂಡು ಬಿಳಿ ಬೆಳಕನ್ನು ಉಂಟುಮಾಡುತ್ತದೆ ✓
- B. ಬಣ್ಣಗಳು ಮತ್ತಷ್ಟು ದೂರಕ್ಕೆ ಹರಡುತ್ತವೆ
- C. ವರ್ಣಪಟಲವು ಒಂದು ಬದಿಗೆ ಬದಲಾಗುತ್ತದೆ
- D. ಕೆಂಪು ಮತ್ತು ನೇರಳೆ ಬಣ್ಣಗಳು ಮಾತ್ರವೇ ವಿಲೀನಗೊಳ್ಳುತ್ತವೆ

**Q12** Magnetic Effects of Current

ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯಾಗಿ ಪರಿವರ್ತಿಸಲು ಒಂದು ಸಾಧನವು ವಿದ್ಯುತ್ ಪ್ರವಹಿಸುವ ವಾಹಕದ ಸುತ್ತಲಿನ ಕಾಂತೀಯ ಕ್ಷೇತ್ರಗಳ ತತ್ವವನ್ನು ಬಳಸುತ್ತದೆ. ಈ ತತ್ವದ ಮೇಲೆ ಯಾವ ಸಾಧನವು ಕಾರ್ಯನಿರ್ವಹಿಸುತ್ತದೆ?

- A. ಸೌರ ಕೋಶ
- B. ವಿದ್ಯುತ್ ಮೋಟಾರ್ ✓
- C. ಪರಿವರ್ತಕ
- D. ಗ್ಯಾಲ್ವನೋಮೀಟರ್

**Q13** Mechanics

ಚಲಿಸುತ್ತಿರುವ ಒಂದು ಕಾಯದ ಸ್ಥಾನಪಲ್ಲಟವನ್ನು ಸಂಪೂರ್ಣವಾಗಿ ವಿವರಿಸಲು ಈ ಕೆಳಗಿನ ಯಾವುದರ ಅಗತ್ಯವಿದೆ?

- A. ಮೂಲಬಿಂದುನಲ್ಲಿನ ಸ್ಥಾನ
- B. ಪರಿಮಾಣ ಮತ್ತು ದಿಕ್ಕು ಎರಡೂ ಸಹ ✓
- C. ಪರಿಮಾಣ ಮಾತ್ರ
- D. ದಿಕ್ಕು ಮಾತ್ರ

**Q14** Mirrors & Lenses

ಒಬ್ಬ ವಿದ್ಯಾರ್ಥಿಯು 15 cm ಸಂಗಮದೂರವಿರುವ ಒಂದು ಪೀನ ಮಸೂರದಿಂದ 25 cm ದೂರದಲ್ಲಿ ಒಂದು ಮೇಣದಬತ್ತಿಯನ್ನು ಇರಿಸಿ ನೈಜ ಬಿಂಬವನ್ನು ಪಡೆಯುತ್ತಾನೆ. ರೂಪುಗೊಂಡ ಬಿಂಬದ ವರ್ಧನೆ ಎಷ್ಟು?

- A. 1.67
- B. 0.4
- C. - 1.5 ✓
- D. -2.5

**Q15** Mixtures, Solutions, Colloids

ಒಬ್ಬ ಶಿಕ್ಷಕರು ಮೂರು ಮಿಶ್ರಣಗಳನ್ನು ತಯಾರಿಸುತ್ತಾರೆ.

1. ನೀರಿನಲ್ಲಿ ಕರಗಿರುವ ಸಕ್ಕರೆ
2. ನೀರಿನಲ್ಲಿ ಕರಗಿರುವ ಲವಣ
3. ನೀರಿನಲ್ಲಿ ಕದಡಲ್ಪಟ್ಟ ಮರಳು

ಈ ಕೆಳಗಿನವುಗಳಲ್ಲಿ ಯಾವುದು ನಿಲಂಬನವಾಗಿದೆ?

- A. ಮರಳು ಮತ್ತು ನೀರಿನ ಮಿಶ್ರಣ ಮಾತ್ರ ✓
- B. ಲವಣ ಮತ್ತು ನೀರಿನ ಮಿಶ್ರಣ
- C. ಸಕ್ಕರೆ ಮತ್ತು ನೀರಿನ ಮಿಶ್ರಣ ಮಾತ್ರ
- D. ಸಕ್ಕರೆ-ನೀರಿನ ಮಿಶ್ರಣ ಮತ್ತು ಮರಳು-ನೀರಿನ ಮಿಶ್ರಣ ಎರಡೂ ಸಹ

**Q16** Nervous System & Brain

ನರಕೋಶದ ಯಾವ ಭಾಗವು ಜೀವಕೋಶದ ಕಾಯದಿಂದ (cell body) ನರ ಪ್ರಚೋದನೆಗಳನ್ನು ಒಯ್ಯುತ್ತದೆ?

- A. ಕಶಾಂಗ
- B. ಬೇರುಕೂದಲು (Root hair)
- C. ಸಿಲಿಯಾ
- D. ನರತಂತು (Axon) ✓

Blackbook Vocabulary — Now in the App! ▶ Download Now on Google Play
generated by rank.qmaths.in

**Q17** Newton's Laws of Motion

ಇಬ್ಬರು ಐಸ್ ಸ್ಕೇಟರ್ ಗಳು ಘರ್ಷಣೆಯಿಲ್ಲದ ಮೇಲ್ಮೈಯಲ್ಲಿ ಪರಸ್ಪರ ತಳ್ಳುತ್ತಾರೆ. ಅವರ ಚಲನೆಗೆ ಸಂಬಂಧಿಸಿದಂತೆ ಏನನ್ನು ಗಮನಿಸಬಹುದು?

A. ಒಬ್ಬ ಸ್ಕೇಟರ್ ಚಲಿಸುತ್ತಾನೆ ಮತ್ತು ಇನ್ನೊಬ್ಬ ಅಲ್ಲೇ ಇರುತ್ತಾನೆ.

B. ಇಬ್ಬರೂ ಸ್ಕೇಟರ್ ಗಳು ಒಂದೇ ದಿಕ್ಕಿನಲ್ಲಿ ಒಟ್ಟಿಗೆ ಚಲಿಸುತ್ತಾರೆ.

C. ಎರಡೂ ಸ್ಕೇಟರ್ ಗಳು ಸಮಾನ ಮತ್ತು ವಿರುದ್ಧ ಬಲಗಳೊಂದಿಗೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಚಲಿಸುತ್ತಾರೆ. ✓

D. ಇಬ್ಬರು ಸ್ಕೇಟರ್ ಗಳು ಪರಸ್ಪರ ಸುತ್ತಲೂ ವೃತ್ತಾಕಾರದಲ್ಲಿ ಚಲಿಸುತ್ತಾರೆ.

**Q18** Physical & Chemical Properties

ಈ ಕೆಳಗಿನ ಯಾವ ವಿಧಾನವು ಇನ್ನೊಂದು ಲೋಹವನ್ನು ತ್ಯಾಗ ಮಾಡುವ ಮೂಲಕ ಸಂಕ್ಷಾರಣವನ್ನು ತಡೆಯುತ್ತದೆ?

A. ಗ್ಯಾಲ್ವನೀಕರಣ ✓

B. ಮಿಶ್ರಲೋಹ ಮಾಡುವುದು

C. ಲೇಪನ ಮಾಡುವುದು

D. ಆನೋಡೀಕರಣ

**Q19** Pollution (Air, Water, Soil, Noise)

ಈ ಕೆಳಗಿನ ಯಾವ ರಾಸಾಯನಿಕ ಸಂಯುಕ್ತವು ಮೇಲ್ಭಾಗದ ವಾಯುಮಂಡಲದಲ್ಲಿ (upper atmosphere) ಓಝೋನ್ ಸವಕಳಿಗೆ ಪ್ರಮುಖ ಕಾರಣವಾಗಿದೆ?

A. ಮೀಥೇನ್

B. ಸಾರಜನಕದ ಆಕ್ಸೈಡ್‌ಗಳು

C. ಸಲ್ಫರ್ ಡೈಆಕ್ಸೈಡ್

D. ಕ್ಲೋರೋಫ್ಲೋರೋಕಾರ್ಬನ್‌ಗಳು ✓

**Q20** Properties & Tests

ದುರ್ಬಲಗೊಳಿಸಿದ ಆಮ್ಲವು ಲೋಹದ ಕಾರ್ಬೋನೇಟ್‌ನೊಂದಿಗೆ ಪ್ರತಿಕ್ರಿಯಿಸಿದಾಗ ಯಾವ ಅನಿಲ ಬಿಡುಗಡೆಯಾಗುತ್ತದೆ?

A. ಇಂಗಾಲದ ಡೈಆಕ್ಸೈಡ್ ಅನಿಲ ಬಿಡುಗಡೆಯಾಗುತ್ತದೆ ✓

B. ಸಾರಜನಕ ಅನಿಲ ಬಿಡುಗಡೆಯಾಗುತ್ತದೆ

C. ಜಲಜನಕ ಅನಿಲ ಬಿಡುಗಡೆಯಾಗುತ್ತದೆ

D. ಆಮ್ಲಜನಕ ಅನಿಲ ಬಿಡುಗಡೆಯಾಗುತ್ತದೆ

**Q21** Skeletal & Muscular System

ಒಂದು ಮಗುವಿಗೆ ಜನ್ಮಜಾತವಾಗಿ ಬೆನ್ನು ಹುರಿ ಇರುವುದಿಲ್ಲ. ದೇಹದ ಯಾವ ಪ್ರಮುಖ ವ್ಯವಸ್ಥೆಯು ಮುಖ್ಯವಾಗಿ ಅಪಾಯಕ್ಕೆ ತುತ್ತಾಗುತ್ತದೆ?

A. ಬಾಹ್ಯ ಜೀರ್ಣಕ್ರಿಯೆ

B. ಕೇಂದ್ರ ನರವ್ಯೂಹ ವ್ಯವಸ್ಥೆಯ ರಕ್ಷಣೆ ✓

C. ಚರ್ಮದ ಉಸಿರಾಟ

D. ಉಸಿರಾಟದ ಅನಿಲದ ವಿನಿಮಯ

**Q22** Sound

ಶಬ್ದ ಪ್ರಸರಣದಲ್ಲಿ ಮಾಧ್ಯಮದ ಪಾತ್ರವೇನು?

A. ಎರಡು ಸ್ಥಳಗಳ ನಡುವೆ ಶಬ್ದವು ಚಲಿಸುವುದನ್ನು ಮಾಧ್ಯಮವು ತಡೆಯುತ್ತದೆ

B. ಮಾಧ್ಯಮವು ಶಬ್ದ ಕಂಪನಗಳನ್ನು ಸಾಗಿಸುವ ಕಣಗಳನ್ನು ಒದಗಿಸುತ್ತದೆ ✓

C. ಮಾಧ್ಯಮವು ಶಬ್ದ ಪ್ರಸಾರದ ಸಲುವಾಗಿ ಶಬ್ದವನ್ನು ಬೆಳಕಿನ ಶಕ್ತಿಯಾಗಿ ಬದಲಾಯಿಸುತ್ತದೆ

D. ಶಬ್ದವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸಲು ಮಾಧ್ಯಮದ ಅಗತ್ಯವಿರುವುದಿಲ್ಲ

**Q23** Types (Combination, Decomposition, etc.)

ಎರಡು ಜಲೀಯ ಲವಣ ದ್ರಾವಣಗಳನ್ನು ಬೆರೆಸಿದಾಗ ಒಂದು ಕ್ರಿಯೆ ಸಂಭವಿಸುತ್ತದೆ ಮತ್ತು ಉಳಿದಿರುವ ಅಯಾನುಗಳು ದ್ರಾವಣದಲ್ಲಿ ಕರಗಿರುವಾಗ ವಿಲೀನವಾಗದ ಘನವಸ್ತು ರೂಪುಗೊಳ್ಳುತ್ತದೆ. ಇದು ಯಾವ ರೀತಿಯ ಕ್ರಿಯೆಯನ್ನು ಪ್ರತಿನಿಧಿಸುತ್ತದೆ?

A. ಲೋಹದ ವಿನಿಮಯವನ್ನು ಒಳಗೊಂಡ ದ್ವಿಸ್ಥಾನಪಲ್ಲಟ ಕ್ರಿಯೆ

B. ದ್ವಿಸ್ಥಾನಪಲ್ಲಟ ಪ್ರಕ್ಷೇಪನ ಕ್ರಿಯೆ ✓

C. ಒಂದೇ ಉತ್ಪನ್ನವನ್ನು ರೂಪಿಸುವ ಸಂಯೋಗ ಕ್ರಿಯೆ

D. ಶಕ್ತಿಯ ನೀಡಬೇಕಾದ ಅಗತ್ಯವಿರುವ ವಿಭಜನೆ ಕ್ರಿಯೆ

**Q24** Work, Energy & Power

ಕೆಲಸವು ನಡೆಯಬೇಕಾದರೆ ಈ ಕೆಳಗಿನವುಗಳಲ್ಲಿ ಯಾವುದರ **ಅಗತ್ಯವಿಲ್ಲ**?

A. ಶಕ್ತಿಯು ಸಂಗ್ರಹಿಸಲ್ಪಟ್ಟಿರಬೇಕು ✓

B. ಸ್ಥಾನಪಲ್ಲಟವು ಆಗಿರಬೇಕು

C. ಬಲವು ಪ್ರಯೋಗಿಸಲ್ಪಟ್ಟಿರಬೇಕು

D. ಬಲ ಮತ್ತು ಸ್ಥಾನಪಲ್ಲಟ ಎರಡೂ ಆಗಿರಬೇಕು

Blackbook Vocabulary — Now in the App! ▶ Download Now on Google Play

generated by rank.qmaths.in

**Q25** Work, Energy & Power

500 kg ದ್ರವ್ಯರಾಶಿಯನ್ನು ಹೊಂದಿರುವ ಒಂದು ನೀರಿನ ತೊಟ್ಟಿಯನ್ನು ನೆಲದಿಂದ 20 m ಎತ್ತರದಲ್ಲಿರುವ ಒಂದು ಕಟ್ಟಡದ ಛಾವಣಿಯ ಮೇಲೆ ಇರಿಸಲಾಗುತ್ತದೆ. ಗುರುತ್ವದಿಂದ ಉಂಟಾಗುವ ವೇಗೋತ್ಕರ್ಷವು g = $10 m/s^2$ ಆಗಿದೆ. ಒಂದು ವೇಳೆ ತೊಟ್ಟಿಯನ್ನು ಮೊದಲ ಕಟ್ಟಡದ ಎರಡು ಪಟ್ಟು ಎತ್ತರವಿರುವ ಮತ್ತೊಂದು ಕಟ್ಟಡದ ಛಾವಣಿಗೆ ಸ್ಥಳಾಂತರಿಸಿದರೆ, ಅದರ ದ್ರವ್ಯರಾಶಿಯು ಬದಲಾಗದೆ ಹಾಗೆಯೇ ಉಳಿದರೆ, ಅದರ ಹೊಸ ಗುರುತ್ವ ಪ್ರಚ್ಛನ್ನ ಶಕ್ತಿ ಎಷ್ಟು?

A. 50,000 J

B. 200,000 J ✓

C. 400,000 J

D. 100,000 J

Blackbook Vocabulary — Now in the App! ► Download Now on Google Play

generated by rank.qmaths.in

## General Science

25 Questions • Answer Key

**Q1** Atomic Structure & Models

X ಎಂಬ ಧಾತುವು $X^{2+}$ ಅಯಾನನ್ನು ರೂಪಿಸುತ್ತದೆ. ಒಂದುವೇಳೆ X ನ ತಟಸ್ಥ ಪರಮಾಣುವು 20 ಎಲೆಕ್ಟ್ರಾನ್‌ಗಳನ್ನು ಹೊಂದಿದ್ದರೆ, ಅಯಾನಿನಲ್ಲಿ ಎಷ್ಟು ಎಲೆಕ್ಟ್ರಾನ್‌ಗಳಿರುತ್ತವೆ?

A. 22
B. 24
C. 20
D. 18 ✓

**Q2** Atomic Structure & Models

ಒಂದು ಧಾತುವಿನ ವೇಲೆನ್ಸಿಯು ಏನನ್ನು ಸೂಚಿಸುತ್ತದೆ?

A. ನ್ಯೂಕ್ಲಿಯಸ್‌ನಲ್ಲಿರುವ ನ್ಯೂಟ್ರಾನ್‌ಗಳ ಒಟ್ಟು ಸಂಖ್ಯೆ
B. ಪರಮಾಣು ರಾಶಿ ಏಕಮಾನದಲ್ಲಿ ಅಳೆಯಲಾಗುವ ಪರಮಾಣುವಿನ ದ್ರವ್ಯರಾಶಿ
C. ಒಂದು ಪರಮಾಣುವಿನಲ್ಲಿರುವ ಎಲೆಕ್ಟ್ರಾನ್ ಕವಚಗಳ ಒಟ್ಟು ಸಂಖ್ಯೆ
D. ರಾಸಾಯನಿಕ ಕ್ರಿಯೆಗಳಲ್ಲಿ ಪರಮಾಣುವಿನ ಸಂಯೋಗ ಸಾಮರ್ಥ್ಯ ✓

**Q3** Balancing Chemical Equations

ಒಬ್ಬ ವಿದ್ಯಾರ್ಥಿಯು ಸತುವು ಮತ್ತು ನೈಟ್ರಿಕ್ ಆಮ್ಲದ ಕ್ರಿಯೆಗೆ ಕಂಕಾಲ ಸಮೀಕರಣವನ್ನು (skeletal equation) ಬರೆಯುತ್ತಾನೆ.

$Zn + HNO_3 \rightarrow Zn(NO_3)_2 + H_2$

ಸಮೀಕರಣವನ್ನು **ಅತಿ ಚಿಕ್ಕ ಪೂರ್ಣ ಸಂಖ್ಯೆಯ ಗುಣಾಂಕಗಳೊಂದಿಗೆ** ಸರಿದೂಗಿಸಿದ ನಂತರ, ಸಮತೋಲಿತ ಸಮೀಕರಣದಲ್ಲಿನ **ಎಲ್ಲಾ ಗುಣಾಂಕಗಳ ಮೊತ್ತ** ಎಷ್ಟು?

A. 5 ✓
B. 6
C. 7
D. 8

**Q4** Classification of Organisms

ಒಂದು ಬುಡಕಟ್ಟು ಸಮುದಾಯವು ಆಹಾರ ಮತ್ತು ಔಷಧಕ್ಕಾಗಿ ಕಾಡಿನ ಅಣಬೆಗಳನ್ನು ಗುರುತಿಸುತ್ತದೆ. ಅವುಗಳ ಪೋಷಕಾಂಶ ಮತ್ತು ಔಷಧೀಯ ಮೌಲ್ಯಕ್ಕೆ ಯಾವ ಗುಣವು ಹೆಚ್ಚು ಪ್ರಸ್ತುತವಾಗಿದೆ?

A. ವರ್ಣರಂಜಿತ ಟೊಪ್ಪಿಯ ಮಾದರಿಯ ಇರುವಿಕೆ
B. ತ್ವರಿತವಾದ ಬೀಜಕ ಉತ್ಪಾದನಾ ಸಾಮರ್ಥ್ಯ
C. ಜೈವಿಕವಾಗಿ ಸಕ್ರಿಯವಾಗಿರುವ ಸಂಯುಕ್ತಗಳ ಹೆಚ್ಚಿನ ಅಂಶ ✓
D. ಸಸ್ಯಗಳೊಂದಿಗೆ ರಚನಾತ್ಮಕ ಹೋಲಿಕೆ

**Q5** Classification of Organisms

ಪ್ರಯೋಗಾಲಯದಲ್ಲಿ ಶಿಲೀಂಧ್ರ ಮಾದರಿಯನ್ನು ಬೆಚ್ಚಗಿನ ಮತ್ತು ತೇವಾಂಶವುಳ್ಳ ಇನ್ಕ್ಯುಬೇಟರ್‌ನಲ್ಲಿ ಇರಿಸಿದಾಗ ಉತ್ತಮವಾಗಿ ಬೆಳೆಯುತ್ತದೆ ಎಂದು ಗಮನಿಸಲಾಗಿದೆ. ಅದರ ಜೀವಶಾಸ್ತ್ರದ ಯಾವ ಅಂಶವು ಈ ಪರಿಸ್ಥಿತಿಗಳಿಂದ ನೇರವಾಗಿ ಪ್ರಭಾವಿತವಾಗಿರುತ್ತದೆ?

A. ಸೂಕ್ತ ಬೀಜಕ ಮೊಳಕೆಯೊಡೆಯುವಿಕೆ ಮತ್ತು ಬೆಳವಣಿಗೆ ✓
B. ಸೂಕ್ಷ್ಮಕುಹರಗಳಲ್ಲಿ ಹೆಚ್ಚಿನ ಶಕ್ತಿಯ ಸಂಗ್ರಹಣೆ
C. ಹೆಚ್ಚಿದ ವರ್ಣದ್ರವ್ಯ ಉತ್ಪಾದನೆ
D. ಗರಿಷ್ಠ ಜೀವಕೋಶ ವಿಭಜನೆಯ ದರ

**Q6** Current Electricity (Ohm's Law, Circuits)

ಲೋಹದ ಫಿಲಮೆಂಟ್ ಬಲ್ಬ್ ಮೂಲಕ ವಿದ್ಯುತ್ ಪ್ರವಾಹವು ಹಾದುಹೋದಾಗ ಅದು ಏಕೆ ಪ್ರಕಾಶಿಸುತ್ತದೆ?

A. ಫಿಲಮೆಂಟ್‌ನಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯು ಬೆಳಕನ್ನು ಉತ್ಪಾದಿಸುತ್ತದೆ
B. ಫಿಲಮೆಂಟ್ ಶೂನ್ಯ ರೋಧದೊಂದಿಗೆ ವಿದ್ಯುತ್ ಪ್ರವಾಹವನ್ನು ಸಾಗಿಸುತ್ತದೆ
C. ಫಿಲಮೆಂಟ್ ವಿದ್ಯುತ್ ಪ್ರವಾಹದಿಂದ ಕಾಂತೀಕರಿಸಲ್ಪಡುತ್ತದೆ
D. ಫಿಲಮೆಂಟ್ ರೋಧವನ್ನು ನೀಡುತ್ತದೆ, ವಿದ್ಯುತ್ ಶಕ್ತಿಯನ್ನು ಶಾಖ ಮತ್ತು ಬೆಳಕಾಗಿ ಪರಿವರ್ತಿಸುತ್ತದೆ ✓

**Q7** Current Electricity (Ohm's Law, Circuits)

ಒಂದು ವೈಜ್ಞಾನಿಕ ಪ್ರಯೋಗಕ್ಕೆ ಒಂದು ವಿದ್ಯುನ್ಮಂಡಲದಲ್ಲಿನ ವಿದ್ಯುತ್ ಪ್ರವಾಹವನ್ನು ಸರಿಹೊಂದಿಸಲು ವೇರಿಯೇಬಲ್ ರೆಸಿಸ್ಟರ್ ನ ಅಗತ್ಯವಿರುತ್ತದೆ. ಸ್ಥೂಲ ರೇಖಾಚಿತ್ರದಲ್ಲಿ (schematic diagram) ಇದನ್ನು ಪ್ರತಿನಿಧಿಸಲು ಯಾವ ಸಂಕೇತವನ್ನು ಬಳಸಬೇಕು?

A. ಸರಳ ಜಿಗ್ ಜಾಗ್ ರೇಖೆ
B. ಅಂತರ ಮತ್ತು ಬ್ರಿಜ್ ಹೊಂದಿರುವ ಸರಳ ರೇಖೆ
C. ಉದ್ದ ಮತ್ತು ಚಿಕ್ಕ ಸಮಾನಾಂತರ ರೇಖೆಗಳು
D. ಜಿಗ್ ಜಾಗ್ ರೇಖೆಯ ಮೇಲೆ ಅಡ್ಡ ಬಾಣ ✓

Blackbook Vocabulary — Now in the App! ► Download Now on Google Play

**Q8** Digestive System

ಜಠರದ ಗ್ರಂಥಿಗಳಿಂದ ಬಿಡುಗಡೆಯಾಗುವ ಯಾವ ಕಿಣ್ವವು ಜಠರದಲ್ಲಿ ಪ್ರೋಟೀನ್‌ಗಳನ್ನು ಜೀರ್ಣಿಸಿಕೊಳ್ಳಲು ಸಹಾಯ ಮಾಡುತ್ತದೆ?

A. ಮಾಲ್ಟೇಸ್
B. ಅಮೈಲೇಸ್
C. ಪೆಪ್ಸಿನ್ ✓
D. ಲಿಪೇಸ್

**Q9** Digestive System

ಮಾನವನ ಹೊಟ್ಟೆಯಲ್ಲಿ ಜೀರ್ಣಕಾರಿ ಕಿಣ್ವಗಳಿಗೆ ನಿರ್ದಿಷ್ಟ pH ಅನ್ನು ಕಾಪಾಡಿಕೊಳ್ಳುವುದು ಏಕೆ ಅಗತ್ಯ?

A. ಹಾನಿಕಾರಕ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ತಡೆಯಲು
B. ಪೆಪ್ಸಿನ್ ನಂತಹ ಕಿಣ್ವಗಳ ಸರಿಯಾದ ಆಕಾರ ಮತ್ತು ಚಟುವಟಿಕೆಯನ್ನು ಖಚಿತಪಡಿಸಿಕೊಳ್ಳಲು ✓
C. ಹೆಚ್ಚುವರಿ ಜಠರಾಮ್ಲವನ್ನು ತಟಸ್ಥಗೊಳಿಸಲು
D. ನೀರನ್ನು ಹೆಚ್ಚು ಪರಿಣಾಮಕಾರಿಯಾಗಿ ಹೀರಿಕೊಳ್ಳಲು

**Q10** Ecosystem & Food Chain

ಒಂದು ವೇಳೆ ಜೈವಿಕವಾಗಿ ವಿಘಟನೀಯವಲ್ಲದ ರಾಸಾಯನಿಕವು ನೀರಿನಲ್ಲಿ 0.02 ppm ಸಾಂದ್ರತೆಯಲ್ಲಿ ಆಹಾರ ಸರಪಳಿಯನ್ನು ಪ್ರವೇಶಿಸಿದರೆ, ಕಾಲಕ್ರಮೇಣ ಏನಾಗುತ್ತದೆ?

A. ಅದು ಉತ್ಪಾದಕ ಜೀವಿಗಳ ಒಳಗೆ ಮಾತ್ರ ಉಳಿಯುತ್ತದೆ
B. ಅದು ಉನ್ನತ ಪೋಷಣಾ ಸ್ತರದಲ್ಲಿ ಗರಿಷ್ಠವಾಗಿ ಸಂಚಯವಾಗುತ್ತದೆ ✓
C. ಅದರ ಸಾಂದ್ರತೆಯು ಉನ್ನತ ಪೋಷಕ ಸ್ತರಗಳಲ್ಲಿ ಕಡಿಮೆಯಾಗುತ್ತದೆ
D. ಅದು ಪರಿಸರ ವ್ಯವಸ್ಥೆಯಿಂದ ಸಂಪೂರ್ಣವಾಗಿ ಕಣ್ಮರೆಯಾಗುತ್ತದೆ

**Q11** Hydrocarbons (Methane, Ethane, etc.)

ಈ ಕೆಳಗಿನ ಯಾವ ಪರಿಸ್ಥಿತಿಗಳ ಸಂಯೋಜನೆಯು, ಸಮುದ್ರದ ಸಂಚಯಗಳಿಂದ ಪೆಟ್ರೋಲಿಯಂ ರೂಪಗೊಳ್ಳಲು ಕಾರಣವಾಗುವ ಹೆಚ್ಚಿನ ಸಾಧ್ಯತೆಯನ್ನು ತೋರ್ಪಡಿಸುತ್ತದೆ?

A. ಕಡಿಮೆ ತಾಪಮಾನ, ಕಡಿಮೆ ಒತ್ತಡ, ವಾಯುವಿಕ ಪರಿಸ್ಥಿತಿಗಳು
B. ಅಧಿಕ ಒತ್ತಡ, ಅಧಿಕ ತಾಪಮಾನ, ಅವಾಯುವಿಕ ಪರಿಸ್ಥಿತಿಗಳು ✓
C. ಕಡಿಮೆ ಒತ್ತಡ, ಅಧಿಕ ತಾಪಮಾನ, ವಾಯುವಿಕ ಪರಿಸ್ಥಿತಿಗಳು
D. ಅಧಿಕ ತಾಪಮಾನ, ಕಡಿಮೆ ಒತ್ತಡ, ವಾಯುವಿಕ ಪರಿಸ್ಥಿತಿಗಳು

**Q12** Matter & Its Properties

ರಾಸಾಯನಿಕ ಬದಲಾವಣೆಯು ಭೌತಿಕ ಬದಲಾವಣೆಯಿಂದ ಭಿನ್ನವಾಗಿರುತ್ತದೆ ಎಂದು ಕೆಳಗಿನ ಯಾವ ಹೇಳಿಕೆಯು ಸ್ಪಷ್ಟವಾಗಿ ವಿವರಿಸುತ್ತದೆ?

A. ರಾಸಾಯನಿಕ ಬದಲಾವಣೆ ಕೇವಲ ಗಾತ್ರ ಮತ್ತು ಆಕಾರದ ಮೇಲೆ ಮಾತ್ರ ಪರಿಣಾಮ ಬೀರುತ್ತದೆ, ಭೌತಿಕ ಬದಲಾವಣೆಯು ಸಂಯೋಜನೆಯ ಮೇಲೆ ಪರಿಣಾಮ ಬೀರುತ್ತದೆ
B. ರಾಸಾಯನಿಕ ಬದಲಾವಣೆಯು ಹೊಸ ವಸ್ತುವನ್ನು ರಚಿಸುತ್ತದೆ, ಆದರೆ ಭೌತಿಕ ಬದಲಾವಣೆಯು ಹೊಸ ವಸ್ತುವನ್ನು ರಚಿಸುವುದಿಲ್ಲ ✓
C. ರಾಸಾಯನಿಕ ಬದಲಾವಣೆಯು ಕೇವಲ ನೋಟವನ್ನು ಮಾತ್ರ ಬದಲಾಯಿಸುತ್ತದೆ, ಆದರೆ ಭೌತಿಕ ಬದಲಾವಣೆಯು ಹೊಸ ವಸ್ತುಗಳನ್ನು ರೂಪಿಸುತ್ತದೆ
D. ರಾಸಾಯನಿಕ ಬದಲಾವಣೆಯು ಯಾವಾಗಲೂ ಹಿಮ್ಮುಖವಾಗಬಲ್ಲದು (reversible), ಆದರೆ ಭೌತಿಕ ಬದಲಾವಣೆಯು ಎಂದಿಗೂ ಹಿಮ್ಮುಖವಾಗಲು ಸಾಧ್ಯವಿಲ್ಲ

**Q13** Mechanics

ಏಕ ಆಯಾಮದ ಚಲನೆಯಲ್ಲಿ ಯಾವ ಪ್ರಮಾಣವು ಎಂದಿಗೂ ಋಣಾತ್ಮಕವಾಗಿರಲು ಸಾಧ್ಯವಿಲ್ಲ?

A. ವೇಗ
B. ಪಥದ ಉದ್ದ ✓
C. ಸ್ಥಾನದಲ್ಲಿನ ಬದಲಾವಣೆ
D. ಸ್ಥಾನಪಲ್ಲಟ

**Q14** Mechanics

_______ ಇದ್ದಾಗ ಒಂದು ಲಿವರ್, 1 ಕ್ಕಿಂತ ಹೆಚ್ಚು ಯಾಂತ್ರಿಕ ಲಾಭವನ್ನು ಒದಗಿಸುತ್ತದೆ.

A. ಭಾರದ ಭುಜವು ಯತ್ನದ ಭುಜಕ್ಕಿಂತ ಉದ್ದವಾದಾಗ
B. ಎರಡೂ ಭುಜಗಳು ಸಮವಾಗಿರುವಾಗ
C. ಯತ್ನದ ಭುಜವು ಭಾರದ ಭುಜಕ್ಕಿಂತ ಉದ್ದವಾದಾಗ ✓
D. ಆನಿಕೆಯು ಇಲ್ಲದೆ ಇರುವಾಗ

**Q15** Mirrors & Lenses

ಭೌತಶಾಸ್ತ್ರದ ಶಿಕ್ಷಕರೊಬ್ಬರು ವಿದ್ಯಾರ್ಥಿಗಳನ್ನು ಮುಖದ ದೊಡ್ಡದಾದ, ನೇರವಾದ ಬಿಂಬವನ್ನು ಪಡೆಯಲು ಶೇವಿಂಗ್‌ಗೆ ಒಂದು ನಿಮ್ನ ದರ್ಪಣವನ್ನು ಬಳಸುವ ಸನ್ನಿವೇಶವನ್ನು ಸೃಷ್ಟಿಸಲು ಕೇಳಿಕೊಳ್ಳುತ್ತಾರೆ. ಈ ಫಲಿತಾಂಶಕ್ಕಾಗಿ ದರ್ಪಣಕ್ಕೆ ಹೋಲಿಸಿದರೆ ಮುಖವನ್ನು ಯಾವ ಸ್ಥಾನದಲ್ಲಿ ಇರಿಸಬೇಕು?

A. ದರ್ಪಣದ ಸಂಗಮಬಿಂದುವಿನಲ್ಲಿ
B. ದರ್ಪಣದ ಧ್ರುವ ಮತ್ತು ಸಂಗಮ ಬಿಂದುವಿನ ನಡುವೆ ✓
C. ದರ್ಪಣದ ವಕ್ರತಾ ಕೇಂದ್ರದಲ್ಲಿ
D. ದರ್ಪಣದ ವಕ್ರತಾ ಕೇಂದ್ರದಿಂದ ದೂರದಲ್ಲಿ

Blackbook Vocabulary — Now in the App! ► Download Now on Google Play

**Q16** Newton's Laws of Motion

ನ್ಯೂಟನ್ನನ ಮೂರನೇ ನಿಯಮದ ಪ್ರಕಾರ ಕ್ರಿಯೆ-ಪ್ರತಿಕ್ರಿಯೆ ಜೋಡಿಯನ್ನು ಯಾವ ಸನ್ನಿವೇಶವು ಸರಿಯಾಗಿ **ಪ್ರತಿನಿಧಿಸುವುದಿಲ್ಲ?**

A. ಚೆಂಡನ್ನು ಹೊಡೆಯುವ ಬ್ಯಾಟು ಮತ್ತು ಬ್ಯಾಟ್ ನಲ್ಲಿ ಹಿಂದಕ್ಕೆ ತಳ್ಳಲ್ಪಡುವ ಚೆಂಡು

B. ಮೇಜಿನಲ್ಲಿ ಕೆಳಗೆ ಒತ್ತುವ ಪುಸ್ತಕ ಮತ್ತು ಪುಸ್ತಕವನ್ನು ಕೆಳಗೆ ಎಳೆಯುವ ಗುರುತ್ವ ✓

C. ನಡೆಯುವಾಗ ಪಾದವು ನೆಲವನ್ನು ತಳ್ಳುವುದು ಮತ್ತು ನೆಲವು ಹಿಂದಕ್ಕೆ ತಳ್ಳುವುದು

D. ರಾಕೆಟ್ ನಿಷ್ಕಾಸ ಅನಿಲಗಳು ಹಿಂದಕ್ಕೆ ತಳ್ಳುವುದು ಮತ್ತು ಗಾಳಿಯು ರಾಕೆಟ್ ಅನ್ನು ಮುಂದಕ್ಕೆ ತಳ್ಳುವುದು

**Q17** Plant Biology

ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆಯಾಗಿ ಬೆಳವಣಿಗೆಯಿಂದ ಯಾವ ರೀತಿಯ ಸಸ್ಯ ಚಲನೆ ಉಂಟಾಗುತ್ತದೆ?

A. ದಿಕ್ಕಿಗೆ ಸಂಬಂಧಿಸಿದ ಬೆಳವಣಿಗೆ ✓

B. ವೃತ್ತಾಕಾರದ ಬೆಳವಣಿಗೆ

C. ಯಾದೃಚ್ಛಿಕ ಬೆಳವಣಿಗೆ

D. ಕ್ಷಿಪ್ರ ಸಂಕೋಚನ

**Q18** Plant Tissues & Transport

ಸಸ್ಯಗಳಲ್ಲಿ __________ ಎಂದೂ ಕರೆಯಲ್ಪಡುವ ವಿಭಜಿಸುವ ಅಂಗಾಂಶಗಳ ಇರುವಿಕೆಯಿಂದಾಗಿ ಬೆಳವಣಿಗೆಯು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ.

A. ಆಧಾರ ಅಂಗಾಂಶಗಳು

B. ವರ್ಧನ ಅಂಗಾಂಶಗಳು ✓

C. ನಾಳೀಯ ಅಂಗಾಂಶಗಳು

D. ಶಾಶ್ವತ ಅಂಗಾಂಶಗಳು

**Q19** Reactivity Series

ಕಬ್ಬಿಣದ (II) ಸಲ್ಫೇಟ್ ದ್ರಾವಣದಲ್ಲಿ ಸತುವಿನ ಪಟ್ಟಿಯನ್ನು ಮುಳುಗಿಸಿದಾಗ ಏನಾಗುತ್ತದೆ?

A. ಸತುವಿನ ಮೇಲೆ ಕಬ್ಬಿಣದ ಆಕ್ಸೈಡ್ ಲೇಪನಗೊಳ್ಳುತ್ತದೆ

B. ಯಾವುದೇ ಕ್ರಿಯೆ ಸಂಭವಿಸುವುದಿಲ್ಲ

C. ಸತುವಿನ ಮೇಲೆ ಕಬ್ಬಿಣದ ನಿಕ್ಷೇಪಗೊಳ್ಳುತ್ತದೆ, ಮತ್ತು ಜಲಜನಕದ ಅನಿಲವು ಬಿಡುಗಡೆಯಾಗುತ್ತದೆ

D. ಸತುವು ದ್ರಾವಣದಿಂದ ಕಬ್ಬಿಣವನ್ನು ಸ್ಥಾನಪಲ್ಲಟಗೊಳಿಸುತ್ತದೆ ✓

**Q20** Reflection & Refraction

ಒಂದು ಬೆಳಕಿನ ಕಿರಣವು ತ್ರಿಕೋನಾಕಾರದ ಗಾಜಿನ ಪಟ್ಟಕದ ಮೂಲಕ ಹಾದುಹೋದಾಗ, ನಿರ್ಗಮನ ಕಿರಣವು ಸಾಮಾನ್ಯವಾಗಿ ಆಪಾತ ಕಿರಣಕ್ಕೆ ಸಮಾನಾಂತರವಾಗಿರುವುದಿಲ್ಲ. ಈ ವೀಕ್ಷಣೆಯನ್ನು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಪಟ್ಟಕದ ಎರಡು ವಕ್ರೀಭವನ ಮುಖಗಳು ಪರಸ್ಪರ ಬಾಗಿರುತ್ತವೆ, ಇದರಿಂದಾಗಿ ಬೆಳಕಿನ ಕಿರಣವು ಒಟ್ಟಾರೆ ವಿಚಲನಗೊಳ್ಳುತ್ತದೆ ✓

B. ಬೆಳಕು ಕಿರಣವು ದಿಕ್ಕಿನಲ್ಲಿ ಯಾವುದೇ ಬದಲಾವಣೆಯಿಲ್ಲದೆ ಏಕರೂಪವಾಗಿ ಪಟ್ಟಕದ ಮೂಲಕ ಹಾದುಹೋಗುತ್ತದೆ

C. ಪಟ್ಟಕದ ಸಮಾನಾಂತರ ಮುಖಗಳು ಪರಸ್ಪರ ರದ್ದುಗೊಳಿಸುವ ಸಮಾನ ವಕ್ರೀಭವನವನ್ನು ಉಂಟುಮಾಡುತ್ತವೆ

D. ಬೆಳಕಿನ ಕಿರಣವು ಪಟ್ಟಕದ ಎರಡೂ ಮುಖಗಳಲ್ಲಿ ಸಂಪೂರ್ಣ ಪ್ರತಿಫಲನಕ್ಕೆ ಒಳಗಾಗುತ್ತದೆ

**Q21** Reproductive System

ಒಬ್ಬ ಮಹಿಳೆಯು ತೀವ್ರವಾದ ಮತ್ತು ದೀರ್ಘಕಾಲದ ಋತುಚಕ್ರದ ರಕ್ತಸ್ರಾವವನ್ನು ಅನುಭವಿಸುತ್ತಾರೆ. ಆಕೆಯ ವೈದ್ಯರು ಗರ್ಭಕೋಶದ ಒಳಪೊರೆಗೆ ಸಂಬಂಧಿಸಿದ ಸಮಸ್ಯೆ ಇರಬಹುದೆಂದು ಶಂಕಿಸುತ್ತಾರೆ. ಈ ರೋಗಲಕ್ಷಣವನ್ನು ಉಂಟುಮಾಡಲು ಶರೀರ ವಿಜ್ಞಾನದ ಯಾವ ಪ್ರಕ್ರಿಯೆಯು ಹೆಚ್ಚು ನೇರವಾಗಿ ಪರಿಣಾಮ ಬೀರುತ್ತದೆ?

A. ಅಂಡಾಣು ಬಿಡುಗಡೆಯ ವಿಳಂಬವಾಗುವಿಕೆ

B. ಅಂಡಾಶಯದ ಹಾರ್ಮೋನ್ ಉತ್ಪಾದನೆ ಕಡಿಮೆಯಾಗುವಿಕೆ

C. ರಕ್ತನಾಳಗಳ ರಚನೆಯು ಕಡಿಮೆಯಾಗುವಿಕೆ

D. ಗರ್ಭಕೋಶದ ಒಳಪೊರೆಯ ಅಂಗಾಂಶದ ಅತಿಯಾದ ಉದುರುವಿಕೆ ✓

**Q22** Respiratory System

ಪ್ರಾಣಿಗಳಲ್ಲಿ, ಆಮ್ಲಜನಕರಹಿತ ಉಸಿರಾಟವು ಪ್ರಾಥಮಿಕವಾಗಿ _____ ರಚನೆಗೆ ಕಾರಣವಾಗುತ್ತದೆ.

A. ನೀರು

B. ಲ್ಯಾಕ್ಟಿಕ್ ಆಮ್ಲ ✓

C. ಗ್ಲೂಕೋಸ್

D. ಇಂಗಾಲದ ಡೈಆಕ್ಸೈಡ್

Blackbook Vocabulary — Now in the App! ► Download Now on Google Play

generated by rank.qmaths.in

**Q23** Soaps & Detergents

ಬಟ್ಟೆಗಳಿಂದ ಎಣ್ಣೆಯುಕ್ತ ಕೊಳೆಯನ್ನು ಸಾಬೂನು ತೆಗೆದುಹಾಕುವುದರ ಹಿಂದಿನ ಪ್ರಮುಖ ಕಾರ್ಯವಿಧಾನ ಯಾವುದು?

- **A.** ಸಾಬೂನಿನ ಅಣುಗಳು ಮೇಲ್ಮೈ ಕರ್ಷಣವನ್ನು ಕಡಿಮೆ ಮಾಡಿ ಕೊಳೆಯನ್ನು ಹಿಡಿದಿಟ್ಟುಕೊಳ್ಳುವ ಮಿಸೆಲ್‌ಗಳೆಂಬ ರಚನೆಗಳನ್ನುಂಟುಮಾಡುತ್ತವೆ ✓
- **B.** ಸಾಬೂನು ಸ್ನಿಗ್ಧತೆಯನ್ನು ಹೆಚ್ಚಿಸುತ್ತದೆ ಮತ್ತು ಕಲ್ಮಶಗಳನ್ನು ನೇರವಾಗಿ ನೀರಿನಲ್ಲಿ ವಿಲೀನಗೊಳಿಸುತ್ತದೆ
- **C.** ಸಾಬೂನು ನೀರಿನ ಅಂಶವನ್ನು ಆವಿಯಾಗಿಸಿ, ಉತ್ಪತನದ ಮೂಲಕ ಕೊಳೆಯನ್ನು ಬೇರ್ಪಡಿಸುತ್ತದೆ
- **D.** ಸಾಬೂನು ರಾಸಾಯನಿಕವಾಗಿ ಎಣ್ಣೆಯೊಂದಿಗೆ ವರ್ತಿಸಿ ಅದನ್ನು ವಿಲೀನವಾಗಬಲ್ಲ ಆಲ್ಕೋಹಾಲ್ ಆಗಿ ಪರಿವರ್ತಿಸುತ್ತದೆ

**Q24** Ultrasound & Applications

ಲೋಹದ ಬ್ಲಾಕ್ ನಲ್ಲಿ ದೋಷಗಳನ್ನು ಪತ್ತೆಹಚ್ಚಲು ಅಲ್ಟ್ರಾಸೌಂಡ್ ಅನ್ನು ಹೇಗೆ ಬಳಸಬಹುದು?

- **A.** ಒಳಗಿನ ಬಿರುಕುಗಳಲ್ಲಿ ಅಲೆಗಳ ಪ್ರತಿಫಲನವನ್ನು ಅಳೆಯುವ ಮೂಲಕ ✓
- **B.** ಅಲ್ಟ್ರಾಸೌಂಡ್ ಬಳಸಿ ಬ್ಲಾಕ್ ಅನ್ನು ಬಿಸಿ ಮಾಡುವ ಮೂಲಕ
- **C.** ಬ್ಲಾಕ್ ಒಳಗಿನ ಗೋಚರ ಚಲನೆಯನ್ನು ಗಮನಿಸುವ ಮೂಲಕ
- **D.** ಲೋಹದ ಬಣ್ಣವನ್ನು ಅಳೆಯುವ ಮೂಲಕ

**Q25** Work, Energy & Power

ಮಗುವೊಂದು ಉಯ್ಯಾಲೆಯ ಮೇಲೆ ತೂಗಾಡುತ್ತಿದೆ. ಶಕ್ತಿಯ ಸಂರಕ್ಷಣಾ ನಿಯಮದ ಪ್ರಕಾರ, ಮಗುವಿನ ಚಲನ ಶಕ್ತಿಯು ಯಾವ ಬಿಂದುವಿನಲ್ಲಿ ಅತ್ಯಧಿಕವಾಗಿರುತ್ತದೆ?

- **A.** ಉಯ್ಯಾಲೆಯ ಅತ್ಯಂತ ಕೆಳಗಿನ ಬಿಂದುವಿನಲ್ಲಿ ✓
- **B.** ಉಯ್ಯಾಲೆಯ ಅತಿ ಎತ್ತರದ ಬಿಂದುವಿನಲ್ಲಿ
- **C.** ಚಲನ ಶಕ್ತಿಯು ಎಲ್ಲಾ ಬಿಂದುಗಳಲ್ಲಿ ಸಮನಾಗಿರುತ್ತದೆ
- **D.** ಉಯ್ಯಾಲೆಯ ಅತ್ಯಂತ ಎತ್ತರ ಮತ್ತು ಅತ್ಯಂತ ಕೆಳಗಿನ ಬಿಂದುಗಳ ಮಧ್ಯದಲ್ಲಿ

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Animal Kingdom (Phyla Overview)

ಎರಡು ಜಲಚರ ಪ್ರಾಣಿಗಳು: ಒಂದು ನೀರಿನ ಹರಿವಿಗೆ ಸೂಕ್ಷ್ಮರಂಧ್ರಗಳನ್ನು ಹೊಂದಿದ್ದರೆ, ಇನ್ನೊಂದು ಬೇಟೆಯನ್ನು ಸೆರೆಹಿಡಿಯಲು ಗ್ರಹಣಾಂಗಗಳನ್ನು ಬಳಸುತ್ತದೆ. ಅವುಗಳ ಆಹಾರ ಸೇವಿಸುವಿಕೆ ವಿಧಾನಗಳನ್ನು ವಿವರಿಸುವ ಪ್ರಮುಖ ರಚನಾತ್ಮಕ ವ್ಯತ್ಯಾಸ ಯಾವುದು?

- A. ಗ್ರಹಣಾಂಗವಿರುವ ಪ್ರಾಣಿಯಲ್ಲಿ ಅಂಗಾಂಶಗಳ ಇರುವಿಕೆ ✓
- B. ಗ್ರಹಣಾಂಗವಿರುವ ಪ್ರಾಣಿಯಲ್ಲಿ ಗಟ್ಟಿಯಾದ ಅಸ್ಥಿಪಂಜರದ ಇರುವಿಕೆ
- C. ಎರಡೂ ಪ್ರಾಣಿಗಳಲ್ಲಿ ವಿಭಾಗೀಕರಣ
- D. ರಂಧ್ರಗಳನ್ನು ಹೊಂದಿರುವ ಪ್ರಾಣಿಯಲ್ಲಿ ದ್ವಿಪಾರ್ಶ್ವ ಸಮರೂಪತೆ

**Q2** Atoms & Molecules

ಈ ಕೆಳಗಿನವುಗಳಲ್ಲಿ ಯಾವುದು ಒಂದು ಸಂಯುಕ್ತವಸ್ತುವಿನ ಅಣುವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಒಂದೇ ಧಾತುವಿನ ಪರಮಾಣುಗಳ ಗುಂಪು
- B. ಪರಮಾಣುಗಳ ಭೌತಿಕ ಮಿಶ್ರಣ
- C. ಯಾವುದೇ ಬದಲಾಗುವ ಅನುಪಾತದಲ್ಲಿ ಪರಮಾಣುಗಳಿಂದ ರೂಪುಗೊಂಡ ಒಂದು ಅಣುವಾಗಿದೆ
- D. ಸ್ಥಿರ ಅನುಪಾತದಲ್ಲಿ ವಿಭಿನ್ನ ಧಾತುಗಳ ರಾಸಾಯನಿಕ ಸಂಯೋಜನೆಯಿಂದ ರೂಪುಗೊಂಡ ಒಂದು ಅಣುವಾಗಿದೆ ✓

**Q3** Atoms & Molecules

ಈ ಕೆಳಗಿನ ಕೋಷ್ಟಕದಲ್ಲಿನ ಸಂಯುಕ್ತಗಳನ್ನು ಅವುಗಳ ಧಾತು ರಾಶಿ ಅನುಪಾತಕ್ಕೆ ಹೊಂದಿಸಿ

| ಸಂಯುಕ್ತ | ಧಾತುಗಳ ರಾಶಿ ಅನುಪಾತ |
|---|---|
| 1. ನೀರು ($H_2O$) | A. 1:8 |
| 2. ಇಂಗಾಲದ ಡೈಆಕ್ಸೈಡ್ ($CO_2$) | B. 14:3 |
| 3. ಅಮೋನಿಯಾ ($NH_3$) | C. 3:8 |
| 4. ಸಲ್ಫರ್ ಡೈಆಕ್ಸೈಡ್ ($SO_2$) | D. 1:1 |

- A. 1 → C, 2 → A, 3 → B, 4 → D
- B. 1 → A, 2 → C, 3 → B, 4 → D ✓
- C. 1 → A, 2 → C, 3 → D, 4 → B
- D. 1 → A, 2 → D, 3 → B, 4 → C

**Q4** Carbon & Its Compounds

ಈ ಕೆಳಗಿನವುಗಳಲ್ಲಿ ಚತುರ್ಮುಖೀಯ (ಟೆಟ್ರಾಹೆಡ್ರಲ್ ) ರಚನೆಯನ್ನು ಹೊಂದಿರುವ ಇಂಗಾಲದ ಭಿನ್ನರೂಪ (ಅಲೋಟ್ರೋಪ್) ಯಾವುದು?

- A. ಗ್ರಾಫೀನ್
- B. ಗ್ರಾಫೈಟ್
- C. ವಜ್ರ ✓
- D. ಫುಲರೀನ್

**Q5** Circulatory System (Heart, Blood)

ಮಾನವರಲ್ಲಿ, ಆಮ್ಲಜನಕವನ್ನು ಸಾಗಿಸುವ ಉಸಿರಾಟದ ವರ್ಣದ್ರವ್ಯ ಯಾವುದು?

- A. ಹಿಮೋಗ್ಲೋಬಿನ್ ✓
- B. ಇನ್ಸುಲಿನ್
- C. ಮಯೋಸಿನ್
- D. ಕ್ಲೋರೊಫಿಲ್

**Q6** Extraction & Metallurgy

ಈ ಕೆಳಗಿನವುಗಳಲ್ಲಿ ಕಬ್ಬಿಣದ ಅತ್ಯಂತ ಶುದ್ಧ ರೂಪ ಯಾವುದು?

- A. ಮೆತು ಕಬ್ಬಿಣ (Wrought iron) ✓
- B. ಲಿಮೊನೈಟ್
- C. ತುಕ್ಕು ಹಿಡಿಯದ ಉಕ್ಕು
- D. ಗಡಸು ಉಕ್ಕು (Hard steel)

**Q7** Food Preservation (Chemical)

ಈ ಕೆಳಗಿನ ಯಾವುದನ್ನು ಉಪ್ಪಿನಕಾಯಿಯಲ್ಲಿ ಸಂರಕ್ಷಕವಾಗಿ ಬಳಸಲಾಗುತ್ತದೆ?

- A. ನೀರಿನಲ್ಲಿ ಸಿನ್ನಾಮಿಕ್ ನ 5-8% ದ್ರಾವಣ
- B. ನೀರಿನಲ್ಲಿ ಅಸಿಟಿಕ್ ಆಮ್ಲದ 5-8% ದ್ರಾವಣ ✓
- C. ನೀರಿನಲ್ಲಿ ಎಥೆನಾಲ್ ನ 5-8% ದ್ರಾವಣ
- D. ನೀರಿನಲ್ಲಿ ಅಸಿಟಿಕ್ ಅನ್‌ಹೈಡ್ರೈಡ್‌ನ 5-8% ದ್ರಾವಣ

Blackbook Vocabulary — Now in the App! ► Download Now on Google Play

generated by rank.qmaths.in

**Q8** Food Preservation (Chemical)

ಖಾದ್ಯ ತೈಲಗಳು ಮತ್ತು ಕೊಬ್ಬುಗಳಲ್ಲಿ ಯಾವ ಶೇಖರಣಾ ಸ್ಥಿತಿಯು ಕಮಟುವಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿಧಾನಗೊಳಿಸುತ್ತದೆ?

- A. ಗಾಳಿಯಾಡದ ಧಾರಕಗಳಲ್ಲಿ ಸಂಗ್ರಹಿಸುವುದು ✓
- B. ಸೂರ್ಯನ ಬೆಳಕಿನಲ್ಲಿ ಇಡುವುದು
- C. ಆಹಾರವನ್ನು ನೀರಿನೊಂದಿಗೆ ಬೆರೆಸುವುದು
- D. ಆಹಾರವನ್ನು ಪದೇ ಪದೇ ಬಿಸಿ ಮಾಡುವುದು

**Q9** Household Wiring & Safety

ಫ್ಯೂಸ್ ತಂತಿಯನ್ನು ಆವರಿಸಿರುವ ಕಾರ್ಟ್ರಿಡ್ಜ್‌ನ (ಉದಾಹರಣೆಗೆ ಪಿಂಗಾಣಿ) ಕಾರ್ಯವೇನು?

- A. ಫ್ಯೂಸ್‌ಗೆ ಶಾಖದ ಸಿಂಕ್ ಆಗಿ ಕಾರ್ಯನಿರ್ವಹಿಸಲು
- B. ಫ್ಯೂಸ್‌ನ ವಿದ್ಯುತ್ ವಹನವನ್ನು ಸುಧಾರಿಸಲು
- C. ಕರಗಿದ ಫ್ಯೂಸ್ ತಂತಿಯನ್ನು ಸುರಕ್ಷಿತವಾಗಿ ಹಿಡಿದಿಡಲು ಮತ್ತು ಅಪಾಯಗಳನ್ನು ತಡೆಗಟ್ಟಲು ✓
- D. ಫ್ಯೂಸ್ ಮೂಲಕ ವಿದ್ಯುತ್ ಪ್ರವಾಹವನ್ನು ಹೆಚ್ಚಿಸಲು

**Q10** Human Eye & Defects

ಕಣ್ಣಿನ ಮಸೂರವು ಕಡಿಮೆ ಸ್ಥಿತಿಸ್ಥಾಪಕ ಶಕ್ತಿಯಿಂದಾಗಿ ಹತ್ತಿರದ ವಸ್ತುಗಳ ಮೇಲೆ ಕೇಂದ್ರೀಕರಿಸುವ ಸಾಮರ್ಥ್ಯವನ್ನು ಕಳೆದುಕೊಂಡಾಗ ಈ ಕೆಳಗಿನ ಯಾವ ದೋಷವು ಉಂಟಾಗುತ್ತದೆ?

- A. ಮಸೂರದ ಸ್ಥಿತಿಸ್ಥಾಪಕ ಶಕ್ತಿ ಕಡಿಮೆಯಾಗುವುದರಿಂದ ದೂರದೃಷ್ಟಿ ದೋಷ ಉಂಟಾಗುತ್ತದೆ
- B. ಮಸೂರದ ಸ್ಥಿತಿಸ್ಥಾಪಕ ಶಕ್ತಿ ಕಡಿಮೆಯಾಗುವುದರಿಂದ ಪ್ರಿಸ್ಬಯೋಪಿಯಾ ಉಂಟಾಗುತ್ತದೆ ✓
- C. ಮಸೂರದ ಸ್ಥಿತಿಸ್ಥಾಪಕ ಶಕ್ತಿ ಕಡಿಮೆಯಾಗುವುದರಿಂದ ಅಸಮದೃಷ್ಟಿ ದೋಷ ಉಂಟಾಗುತ್ತದೆ
- D. ಮಸೂರದ ಸ್ಥಿತಿಸ್ಥಾಪಕ ಶಕ್ತಿ ಕಡಿಮೆಯಾಗುವುದರಿಂದ ಮಯೋಪಿಯ ಉಂಟಾಗುತ್ತದೆ

**Q11** Light & Optics

ಒಂದು ಗಾಜಿನ ಪಟ್ಟಕದ ಮೂಲಕ ಬಿಳಿ ಬಣ್ಣದ ಬೆಳಕು ಹಾದುಹೋದಾಗ ಏನಾಗುತ್ತದೆ?

- A. ಅದು ಅದೃಶ್ಯವಾಗುತ್ತದೆ
- B. ಅದು ಒಂದೇ ಬಣ್ಣವಾಗಿ ಬದಲಾಗುತ್ತದೆ
- C. ಅದು ಏಳು ಬಣ್ಣಗಳ ಪಟ್ಟಿಯಾಗಿ ವಿಭಜನೆಯಾಗುತ್ತದೆ ✓
- D. ಅದು ಬಿಳಿ ಬಣ್ಣದ ಬೆಳಕಾಗಿ ಮರುಸಂಯೋಗಗೊಳ್ಳುತ್ತದೆ

**Q12** Mechanics

ಚಲನೆ ಮತ್ತು ಬಲಕ್ಕೆ ಸಂಬಂಧಿಸಿದಂತೆ ಏಕರೂಪದ ವೃತ್ತೀಯ ಚಲನೆಯನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಒಂದು ವಸ್ತುವು ವೃತ್ತಾಕಾರದಲ್ಲಿ ಬದಲಾಗುತ್ತಿರುವ ಜವ ಮತ್ತು ಸ್ಥಿರ ದಿಕ್ಕಿನೊಂದಿಗೆ ಚಲಿಸುತ್ತದೆ
- B. ಒಂದು ವಸ್ತುವು ವೃತ್ತಾಕಾರದಲ್ಲಿ ಸ್ಥಿರ ಜವದಲ್ಲಿ ಚಲಿಸುತ್ತದೆ ಆದರೆ ದಿಕ್ಕಿನಲ್ಲಿನ ಬದಲಾವಣೆಯಿಂದಾಗಿ ಅದರ ವೇಗವು ಬದಲಾಗುತ್ತದೆ ✓
- C. ಒಂದು ವಸ್ತುವು ವೃತ್ತಾಕಾರದಲ್ಲಿ ಸ್ಥಿರ ಜವ ಮತ್ತು ಸ್ಥಿರ ದಿಕ್ಕಿನೊಂದಿಗೆ ಚಲಿಸುತ್ತದೆ
- D. ಒಂದು ವಸ್ತುವು ಬದಲಾಗುತ್ತಿರುವ ಜವದಲ್ಲಿ ಸರಳ ರೇಖೆಯಲ್ಲಿ ಚಲಿಸುತ್ತದೆ

**Q13** Mechanics

ಒಂದು ವಸ್ತುವು ತನ್ನ ವೇಗವನ್ನು ಬದಲಾಯಿಸುವ ದರವನ್ನು ಈ ಕೆಳಗಿನ ಯಾವುದು ವಿವರಿಸುತ್ತದೆ?

- A. ಜವ
- B. ಸ್ಥಾನಪಲ್ಲಟ
- C. ದೂರ
- D. ವೇಗೋತ್ಕರ್ಷ ✓

**Q14** Mixtures, Solutions, Colloids

ಒಂದು ವೇಳೆ 175 g ನೀರಿನಲ್ಲಿ 25 g ಲವಣವನ್ನು ಕರಗಿಸಿದರೆ, ದ್ರವ್ಯರಾಶಿಯ ಶೇಕಡಾವಾರುವಿನಲ್ಲಿ ದ್ರಾವಣದ ಸಾರತೆ ಎಷ್ಟು?

- A. 18%
- B. 10%
- C. 12.5% ✓
- D. 15%

**Q15** Photosynthesis

ಸಸ್ಯಗಳು ಸೂರ್ಯನ ಬೆಳಕನ್ನು ಬಳಸಿಕೊಂಡು ತಮ್ಮದೇ ಆದ ಆಹಾರವನ್ನು ತಯಾರಿಸಿಕೊಳ್ಳುವುದರಿಂದ, ಅವುಗಳಿಗೆ ಹೊಟ್ಟೆಯಂತಹ ಜೀರ್ಣಕಾರಿ ಅಂಗದ ಅಗತ್ಯವಿಲ್ಲ. ಬದಲಾಗಿ, ಅವು ____ ಗೆ ವಿಶೇಷವಾದ ಅಂಗಾಂಶವನ್ನು ಹೊಂದಿರುತ್ತವೆ.

- A. ದ್ಯುತಿಸಂಶ್ಲೇಷಣೆ ✓
- B. ಜೀರ್ಣಕ್ರಿಯೆ
- C. ಯೋಚಿಸುವುದು
- D. ಓಡುವುದು

Blackbook Vocabulary — Now in the App! ▶ Download Now on Google Play

generated by rank.qmaths.in

**Q16** Plant Kingdom (Divisions)

ಇತ್ತೀಚೆಗೆ ಬರಗಾಲದಿಂದ ಬಾಧಿತವಾಗಿರುವ ಒಂದು ಆವಾಸಸ್ಥಾನದಲ್ಲಿ, ಇತರ ಸಸ್ಯಗಳು ವಿಫಲವಾದಾಗ ಅನಾವೃತ ಬೀಜಸಸ್ಯಗಳ ಯಾವ ಲಕ್ಷಣವು ಅವುಗಳನ್ನು ಹೆಚ್ಚಾಗಿ ಬದುಕುಳಿಯುವಂತೆ ಮಾಡುತ್ತದೆ?

A. ಹೂವುಗಳು ವೈವಿಧ್ಯಮಯ ಪರಾಗಸ್ಪರ್ಶಕಗಳನ್ನು ಆಕರ್ಷಿಸುತ್ತವೆ

B. ಸೂಜಿಯಂತಹ ಎಲೆಗಳು ನೀರಿನ ನಷ್ಟವನ್ನು ತಡೆಯುತ್ತವೆ ✓

C. ಹಣ್ಣುಗಳು ನೀರಿನಲ್ಲಿ ಬೀಜ ಪ್ರಸರಣವನ್ನು ಸುಧಾರಿಸುತ್ತವೆ

D. ಜಲಚರಗಳ ಫಲೀಕರಣವು ಬದುಕುಳಿಯುವಿಕೆಯನ್ನು ಖಚಿತಪಡಿಸುತ್ತದೆ

**Q17** Plant Tissues & Transport

ಸಾದೃಶ್ಯವನ್ನು ಪೂರ್ಣಗೊಳಿಸಿ.

ಕ್ಸೈಲಂ : ನೀರಿನ ಸಾಗಾಣಿಕೆ :: ಫ್ಲೋಯೆಂ : _______.

A. ಆಹಾರ ಸಾಗಣೆ ✓

B. ಯಾಂತ್ರಿಕ ಶಕ್ತಿ

C. ಸೂಕ್ಷ್ಮಜೀವಿಗಳಿಂದ ರಕ್ಷಣೆ

D. ಅನಿಲ ವಿನಿಮಯ

**Q18** Pollution (Air, Water, Soil, Noise)

ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯವು ಜೈವಿಕವಾಗಿ ವಿಘಟನೆಯಾಗುವ ತ್ಯಾಜ್ಯಕ್ಕಿಂತ ಹೆಚ್ಚು ಅಪಾಯಕಾರಿ ಎಂದು ಏಕೆ ಪರಿಗಣಿಸಲಾಗುತ್ತದೆ?

A. ಅವು ಸೂಕ್ಷ್ಮಜೀವಿಗಳ ಚಟುವಟಿಕೆಯನ್ನು ಹೆಚ್ಚಿಸುತ್ತವೆ

B. ಅವು ಆಮ್ಲಜನಕವನ್ನು ಬಿಡುಗಡೆ ಮಾಡುತ್ತವೆ

C. ಅವು ವೇಗವಾಗಿ ವಿಘಟನೆಯಾಗುತ್ತವೆ

D. ಅವು ಪರಿಸರದಲ್ಲಿಯೇ ಉಳಿದುಬಿಡುತ್ತವೆ ✓

**Q19** Properties & Tests

ಸೋಡಿಯಂ ಹೈಡ್ರಾಕ್ಸೈಡ್ (NaOH) ನೊಂದಿಗೆ ಹೈಡ್ರೋಕ್ಲೋರಿಕ್ ಆಮ್ಲ (HCl) ವರ್ತಿಸಿದರೆ, ಪ್ರತಿ ಪ್ರತಿವರ್ತಕದಿಂದ ಯಾವ ಅಯಾನುಗಳು ನೀರನ್ನು ರೂಪಿಸುವಲ್ಲಿ ಭಾಗವಹಿಸುತ್ತವೆ?

A. NaOH ನಿಂದ Na+(aq) ಮತ್ತು HCl ನಿಂದ Cl-(aq)

B. HCl ನಿಂದ H+(aq) ಮತ್ತು NaOH ನಿಂದ OH-(aq) ✓

C. NaOH ನಿಂದ H+(aq) ಮತ್ತು HCl ನಿಂದ OH-(aq)

D. HCl ನಿಂದ Cl-(aq) ಮತ್ತು NaOH ನಿಂದ Na+(aq)

**Q20** Reflection & Refraction

ಒಂದು ಬೆಳಕಿನ ಕಿರಣವು ಲಂಬಕ್ಕೆ 40 ಡಿಗ್ರಿ ಕೋನದಲ್ಲಿ ಗಾಳಿಯಿಂದ ಒಂದು ಆಯತಾಕಾರದ ಗಾಜಿನ ಚಪ್ಪಡಿಯನ್ನು ಪ್ರವೇಶಿಸುತ್ತದೆ. ಒಂದು ವೇಳೆ ಗಾಳಿಗೆ ಸಂಬಂಧಿಸಿದಂತೆ ಗಾಜಿನ ವಕ್ರೀಭವನ ಸೂಚ್ಯಂಕವು 1.5 ಆಗಿದ್ದರೆ ಮತ್ತು ಗಾಳಿಯಲ್ಲಿ ಬೆಳಕಿನ ವೇಗವು $3 \times 10^8$ m/s ಆಗಿದ್ದರೆ, ಗಾಜಿನ ಚಪ್ಪಡಿಯೊಳಗಿನ ಬೆಳಕಿನ ವೇಗ ಎಷ್ಟು?

A. 1.5 × 108m/s

B. 2.25 × 108m/s

C. 2.5 × 108m/s

D. 2 × 108m/s ✓

**Q21** Respiratory System

ಪ್ರಾಣಿಗಳಲ್ಲಿ ವಾಯುವಿಕ ಉಸಿರಾಟಕ್ಕೆ ಯಾವ ಅನಿಲವು ಅತ್ಯಗತ್ಯವಾಗಿರುತ್ತದೆ?

A. ಇಂಗಾಲದ ಡೈಆಕ್ಸೈಡ್

B. ಸಾರಜನಕ

C. ಜಲಜನಕ

D. ಆಮ್ಲಜನಕ ✓

**Q22** Work, Energy & Power

ಕೆಲಸ-ಶಕ್ತಿ ಪ್ರಮೇಯದ ಪ್ರಕಾರ, ಒಂದು ವಸ್ತುವಿನ ಮೇಲೆ ನಡೆದ ನಿವ್ವಳ ಕೆಲಸವು ಶೂನ್ಯವಾಗಿದ್ದರೆ, ಅದರ ಚಲನ ಶಕ್ತಿಯು ________.

A. ನಿರಂತರವಾಗಿ ಹೆಚ್ಚಾಗುತ್ತದೆ

B. ನಿರಂತರವಾಗಿ ಕಡಿಮೆಯಾಗುತ್ತದೆ

C. ಶೂನ್ಯವಾಗುತ್ತದೆ

D. ಬದಲಾಗದೆ ಉಳಿಯುತ್ತದೆ ✓

**Q23** Work, Energy & Power

1000 kg ದ್ರವ್ಯರಾಶಿಯ ಒಂದು ಕಾರು 25 m/s ವೇಗದಲ್ಲಿ ಚಲಿಸುತ್ತಿದೆ. ಒಂದುವೇಳೆ ಚಾಲಕನು ಬ್ರೇಕ್ ಹಾಕಿ ಕಾರನ್ನು ನಿಲ್ಲಿಸಿದರೆ, ಈ ಪ್ರಕ್ರಿಯೆಯಲ್ಲಿ ಎಷ್ಟು ಚಲನ ಶಕ್ತಿ ಕಳೆದುಹೋಗುತ್ತದೆ?

A. 25000 J

B. 625000 J

C. 12500 J

D. 312500 J ✓

Blackbook Vocabulary — Now in the App! ▶ Download Now on Google Play

**Q24** Circulatory System (Heart, Blood)

ರಕ್ತನಾಳಗಳಲ್ಲಿರುವ ಸ್ನಾಯು ಪದರಗಳಿಗೆ ಸಂಬಂಧಿಸಿದಂತೆ 'ಕಾಲಮ್ A' ಅನ್ನು 'ಕಾಲಮ್ B' ನೊಂದಿಗೆ ಹೊಂದಿಸಿ.

| | ಕಾಲಮ್ A | | ಕಾಲಮ್ B |
|---|---|---|---|
| (a) | ದಪ್ಪ ಟ್ಯೂನಿಕಾ ಮೀಡಿಯ | (i) | ಅಭಿಧಮನಿ |
| (b) | ಅತ್ಯಂತ ಸಣ್ಣ ನಾಳದ ವ್ಯಾಸ | (ii) | ಅಪಧಮನಿ |
| (c) | ದೊಡ್ಡ ಲ್ಯೂಮೆನ್ (Large lumen) | (iii) | ಲೋಮನಾಳ |
| (d) | ಎಂಡೋಥೀಲಿಯಂ (Endothelium) | (iv) | ಎಲ್ಲಾ ರಕ್ತನಾಳಗಳು |

A. a–i, b–ii, c–iv, d–iii

B. a–ii, b–iv, c–i, d–iii

C. a–iii, b–ii, c–i, d–iv

D. a–ii, b–iii, c–i, d–iv ✓

**Q25** Current Electricity (Ohm's Law, Circuits)

ವಿದ್ಯುತ್ ಸರ್ಕ್ಯೂಟ್ ರೇಖಾಚಿತ್ರದಲ್ಲಿ ಕೊಟ್ಟಿರುವ ಚಿಹ್ನೆಯು ಏನನ್ನು ಪ್ರತಿನಿಧಿಸುತ್ತದೆ?



A. ತಂತಿ ಜೋಡಣೆ ✓

B. ಬದಲಾಗುವ ರೋಧಕ

C. ಪ್ಲಗ್ ಕೀ ಅಥವಾ ಸ್ವಿಚ್

D. ಜೋಡಣೆ ಆಗದೇ ದಾಟುತ್ತಿರುವ ತಂತಿಗಳು

Blackbook Vocabulary — Now in the App! ► Download Now on Google Play

## General Science

25 Questions • Answer Key

**Q1** Atomic Structure & Models

ನ್ಯೂಕ್ಲಿಯಸ್‌ನಲ್ಲಿರುವ ಪ್ರೋಟಾನ್‌ಗಳು ಮತ್ತು ನ್ಯೂಟ್ರಾನ್‌ಗಳ ಒಟ್ಟು ದ್ರವ್ಯರಾಶಿಯ ಆಧಾರದ ಮೇಲೆ ವಿವಿಧ ಧಾತುಗಳ ಪರಮಾಣುಗಳನ್ನು ಪ್ರತ್ಯೇಕಿಸಲು ಈ ಕೆಳಗಿನ ಯಾವ ಗುಣಲಕ್ಷಣವನ್ನು ಬಳಸಲಾಗುತ್ತದೆ?

A. ವೇಲೆನ್ಸಿ
B. ಪರಮಾಣು ದ್ರವ್ಯರಾಶಿ ✓
C. ಸಮಸ್ಥಾಪಕ ಅನುಪಾತ
D. ಪರಮಾಣು ಸಂಖ್ಯೆ

**Q2** Atoms & Molecules

ಅಮೋನಿಯ ($NH_3$) ದಲ್ಲಿ, ಸಂಯೋಜಿಸುವ ಧಾತುಗಳು ಯಾವ ಅನುಪಾತದಲ್ಲಿ ಇರುತ್ತವೆ?

A. 14:3 ✓
B. 28:3
C. 7:3
D. 14:6

**Q3** Basic Organic Chemistry

ಕಬ್ಬಿನಿಂದ ಸಕ್ಕರೆ ಉತ್ಪಾದನೆಯ ಉಪ ಉತ್ಪನ್ನವಾದ ಕಾಕಂಬಿಯನ್ನು ಹುದುಗುವಿಕೆಯ ಮೂಲಕ ಈ ಕೆಳಗಿನ ಯಾವ ಇಂಗಾಲದ ಸಂಯುಕ್ತದ ಉತ್ಪಾದನೆಗೆ ಪೂರಕ ವಸ್ತುವಾಗಿ ಬಳಸಬಹುದು?

A. ಎಥೆನಾಲ್ (ethanol) ✓
B. ಪ್ರೊಪನೊಯಿಕ್ ಆಮ್ಲ (propanoic acid)
C. ಬ್ಯೂಟೇನೋನ್ (butanone)
D. ಪ್ರೊಪನಲ್ (propanal)

**Q4** Basic Organic Chemistry

ಒಂದು ಪ್ರಯೋಗಾಲಯದ ವ್ಯವಸ್ಥೆಯಲ್ಲಿ ಪರ್ಯಾಪ್ತ ಮತ್ತು ಅಪರ್ಯಾಪ್ತ ಇಂಗಾಲದ ಸಂಯುಕ್ತಗಳ ನಡುವೆ ವ್ಯತ್ಯಾಸವನ್ನು ಗುರುತಿಸಲು ಈ ಕೆಳಗಿನ ಯಾವ ವಿಧಾನವು ಹೆಚ್ಚು ಸೂಕ್ತವಾಗಿದೆ?

A. ಉಷ್ಣತಾಮಾಪಕದ ಮೂಲಕ ಕರಗುವ ಬಿಂದುವನ್ನು ಅಳೆಯುವುದು
B. ತಾಮ್ರದ ಸಲ್ಫೇಟ್ ದ್ರಾವಣದೊಂದಿಗೆ ಮಿಶ್ರಣ ಮಾಡುವುದು
C. ಬಣ್ಣ ಬದಲಾವಣೆಯನ್ನು ಗಮನಿಸಲು ಬ್ರೋಮಿನ್ ನೀರಿನಿಂದ ಪರೀಕ್ಷಿಸುವುದು ✓
D. ಬನ್ಸೆನ್ ಬರ್ನರ್ ಮೇಲೆ ಬಿಸಿ ಮಾಡುವುದು ಮತ್ತು ಜ್ವಾಲೆಯ ಬಣ್ಣವನ್ನು ಗಮನಿಸುವುದು

**Q5** Biodiversity & Conservation

ಹವಾಮಾನ ಬದಲಾವಣೆಯು ಪಶ್ಚಿಮ ಘಟ್ಟಗಳಲ್ಲಿ ಮಳೆಯ ಪ್ರಮಾಣವನ್ನು ಹೆಚ್ಚಿಸುತ್ತದೆ ಮತ್ತು ಪರಿಸರ ವ್ಯವಸ್ಥೆಯನ್ನು ಬದಲಾಯಿಸುತ್ತದೆ. ಈ ಪ್ರದೇಶದ ಸ್ಥಳೀಯ ಪ್ರಭೇದಗಳ ಮೇಲೆ ಇದು ಯಾವ ದೀರ್ಘಾವಧಿಯ ಪರಿಣಾಮವನ್ನು ಬೀರಬಹುದು?

A. ಸ್ಥಳೀಯ ಪ್ರಭೇಧಗಳ ಜನಸಂಖ್ಯೆ ಹೆಚ್ಚಾಗುತ್ತದೆ
B. ಸ್ಥಳೀಯ ಪ್ರಭೇಧಗಳು ಬದುಕುಳಿಯಲು ಮತ್ತು ಹೊಂದಿಕೊಳ್ಳಲು ಹೆಣಗಾಡಬಹುದು ✓
C. ಸ್ಥಳೀಯ ಪ್ರಭೇದಗಳು ಹೊಸ ಪ್ರದೇಶಗಳಿಗೆ ಹರಡುತ್ತವೆ
D. ಸ್ಥಳೀಯ ಪ್ರಭೇದಗಳ ಮೇಲೆ ಪರಿಣಾಮ ಬೀರುವುದಿಲ್ಲ

**Q6** Current Electricity (Ohm's Law, Circuits)

ಒಬ್ಬ ವಿದ್ಯಾರ್ಥಿಯು ಒಂದೇ ಉದ್ದಗಳಿರುವ ಮತ್ತು ಒಂದೇ ಅಡ್ಡ-ಛೇದನ ವಿಸ್ತೀರ್ಣಗಳಿರುವ ಎರಡು ತಂತಿಗಳನ್ನು ಮಾಡಿರುವ ಎರಡು ವಸ್ತುಗಳ ರೋಧತೆಯನ್ನು ಹೋಲಿಸಲು ಬಯಸುತ್ತಾನೆ. ಎರಡೂ ತಂತಿಗಳ ರೋಧಶೀಲತೆಯನ್ನು ನಿರ್ಧರಿಸಲು ಯಾವುದನ್ನು ಅಳತೆ ಮಾಡಬೇಕು?

A. ಪ್ರತಿಯೊಂದು ತಂತಿಯ ದ್ರವ್ಯರಾಶಿಯನ್ನು ಅಳೆಯುವುದು
B. ವಿದ್ಯುತ್ ಮಂಡಲದಲ್ಲಿನ ಬಲ್ಬ್‌ನ ಪ್ರಕಾಶಮಾನತೆಯನ್ನು ಅಳೆಯುವುದು
C. ಪ್ರತಿಯೊಂದು ತಂತಿಯ ರೋಧವನ್ನು ಅಳೆಯುವುದು ✓
D. ಪ್ರತಿ ತಂತಿಯಾದ್ಯಂತ ಇರುವ ವೋಲ್ಟೇಜ್ ಅನ್ನು ಅಳೆಯುವುದು

**Q7** Digestive System

ಈ ಕೆಳಗಿನವುಗಳಲ್ಲಿ ಯಾವ ಆಯ್ಕೆಯಲ್ಲಿ ಒಂದು ಜೀವಿ ಮತ್ತು ಆ ಜೀವಿಯು ಆಹಾರ ಸೇವನೆಗೆ ಬಳಸುವ ದೇಹದ ಭಾಗ - ಇವೆರಡನ್ನು ಸರಿಯಾಗಿ ಹೊಂದಿಸಲಾಗಿದೆ?

A. ಹೈಡ್ರಾ - ಮಿಥ್ಯಾಪಾದ
B. ಅಮೀಬಾ - ಫ್ಲಾಜೆಲ್ಲ
C. ಪ್ಯಾರಾಮೆಸಿಯಮ್ - ಸಿಲಿಯಾ ✓
D. ಯುಗ್ಲೆನಾ - ಗ್ರಹಣಾಂಗಗಳು

Blackbook Vocabulary — Now in the App! ▶ Download Now on Google Play

**Q8** Digestive System

ಏಕಕೋಶೀಯ ಜೀವಿಗಳಲ್ಲಿನ ಪೋಷಣೆಯ ಕುರಿತಾದ ಈ ಕೆಳಗಿನ ಯಾವ ಹೇಳಿಕೆಯು **ತಪ್ಪಾಗಿದೆ**?

A. ಅಮೀಬಾವು ಆಹಾರವನ್ನು ಪಡೆಯಲು ಮಿಥ್ಯಾಪಾದವನ್ನು ಬಳಸುತ್ತದೆ

B. ಪ್ಯಾರಾಮಿಸಿಯಮ್, ತನ್ನ ಮೇಲ್ಮೈಯ ಎಲ್ಲಾ ಭಾಗಗಳಿಂದ ಆಹಾರವನ್ನು ತೆಗೆದುಕೊಳ್ಳುತ್ತದೆ ✓

C. ಪ್ಯಾರಾಮಿಸಿಯಂ, ಸಿಲಿಯಾದ ಸಹಾಯದಿಂದ ನಿಗದಿತ ಸ್ಥಳದಲ್ಲಿ ಆಹಾರವನ್ನು ತೆಗೆದುಕೊಳ್ಳುತ್ತದೆ

D. ಅಮೀಬಾದಲ್ಲಿನ ಆಹಾರದ ಕುಹರಗಳೊಳಗೆ ಆಹಾರವು ಜೀರ್ಣಗೊಳ್ಳುತ್ತದೆ

**Q9** Light & Optics

ಹಗಲಿನ ವೇಳೆಯಲ್ಲಿ ಆಕಾಶವು ನೀಲಿ ಬಣ್ಣದಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಣವನ್ನು ಕೆಳಗಿನ ಯಾವ ವಿದ್ಯಮಾನವು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಸೂರ್ಯನು ಹಗಲಿನಲ್ಲಿ ಪ್ರಧಾನವಾಗಿ ನೀಲಿ ಬೆಳಕನ್ನು ಹೊರಸೂಸುತ್ತಾನೆ

B. ಮೋಡಗಳಿಂದ ಸೂರ್ಯನ ಬೆಳಕಿನ ಪ್ರತಿಫಲನವು ನೀಲಿ ಬಣ್ಣಕ್ಕೆ ಕಾರಣವಾಗುತ್ತದೆ

C. ವಾತಾವರಣದಲ್ಲಿನ ಓಜೋನ್ ನೀಲಿ ಬಣ್ಣವನ್ನು ಹೊರತುಪಡಿಸಿ ಉಳಿದ ಎಲ್ಲಾ ಬಣ್ಣಗಳನ್ನು ಹೀರಿಕೊಳ್ಳುತ್ತದೆ

D. ಸೂರ್ಯನ ಬೆಳಕಿನ ಕಡಿಮೆ ತರಂಗಾಂತರಗಳು ದೀರ್ಘ ತರಂಗಾಂತರಗಳಿಗಿಂತ ಹೆಚ್ಚು ಚದರುತ್ತವೆ ✓

**Q10** Magnetic Effects of Current

ಒಂದು ವೇಳೆ ಒಂದು ವಾಹಕದಲ್ಲಿನ ವಿದ್ಯುತ್ ಪ್ರವಾಹವು ದ್ವಿಗುಣಗೊಂಡರೆ, ಆದರೆ ಅದೇ ಕಾಂತಕ್ಷೇತ್ರಕ್ಕೆ ಲಂಬವಾಗಿ ಉಳಿದರೆ, ವಾಹಕದ ಮೇಲಿನ ಬಲವು ಹೇಗೆ ಬದಲಾಗುತ್ತದೆ?

A. ಬಲವು ಬದಲಾಗದೆ ಉಳಿಯುತ್ತದೆ

B. ಬಲವು ನಾಲ್ಕು ಪಟ್ಟು ಕಡಿಮೆಯಾಗುತ್ತದೆ

C. ಬಲವು ದ್ವಿಗುಣಗೊಳ್ಳುತ್ತದೆ ✓

D. ಬಲವು ಅರ್ಧದಷ್ಟು ಆಗುತ್ತದೆ

**Q11** Mechanics

ಏಕರೂಪದ ವೇಗೋತ್ಕರ್ಷದೊಂದಿಗೆ ಚಲಿಸುತ್ತಿರುವ ಒಂದು ವಸ್ತುವಿನ ವೇಗ-ಕಾಲ ನಕ್ಷೆಯನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಇದು ಕಾಲ ಅಕ್ಷಕ್ಕೆ ಸಮಾನಾಂತರವಾಗಿರುವ ಒಂದು ಸಮತಲ ರೇಖೆಯಾಗಿದೆ

B. ಇದು ಸ್ಥಿರ ಇಳಿಜಾರನ್ನು ಹೊಂದಿರುವ ಒಂದು ಸರಳ ರೇಖೆಯಾಗಿದೆ ✓

C. ಇದು ಮೇಲ್ಮುಖವಾಗಿ ಬಾಗಿರುವ ಒಂದು ವಕ್ರರೇಖೆಯಾಗಿದೆ

D. ಇದು ವೇಗ ಅಕ್ಷಕ್ಕೆ ಸಮಾನಾಂತರವಾಗಿರುವ ಒಂದು ಸರಳ ರೇಖೆಯಾಗಿದೆ

**Q12** Mechanics

ಒಂದು ಕಾರು ನಿಶ್ಚಲ ಸ್ಥಿತಿಯಿಂದ ಆರಂಭಗೊಂಡು ಕ್ರಮೇಣ ತನ್ನ ಜವವನ್ನು ಹೆಚ್ಚಿಸಿಕೊಳ್ಳುತ್ತದೆ. ಈ ಕೆಳಗಿನವುಗಳಲ್ಲಿ ಯಾವುದು ಅದರ ದೂರ-ಕಾಲ ನಕ್ಷೆಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಮೂಲದಿಂದ ಆರಂಭವಾಗಿ ಇಳಿಜಾರು ಆಗುತ್ತಿರುವ ಹೋಗುವ ಒಂದು ವಕ್ರರೇಖೆ

B. ಮೂಲದಿಂದ ಪ್ರಾರಂಭವಾಗುವ ಒಂದು ಸಮತಲ ರೇಖೆ

C. ಮೂಲದಿಂದ ಆರಂಭವಾಗುವ ಸ್ಥಿರ ಇಳಿಜಾರು ಹೊಂದಿರುವ ಒಂದು ನೇರ ರೇಖೆ

D. ಮೂಲದಿಂದ ಪ್ರಾರಂಭವಾಗಿ ಮೇಲಕ್ಕೆ ಏರುತ್ತಾ ಹೋಗುವ ಒಂದು ವಕ್ರರೇಖೆ ✓

**Q13** Mirrors & Lenses

ಒಂದು ಪೀನ ದರ್ಪಣದ ಸಂಗಮದೂರವು 20 cm ಆಗಿದೆ. ಒಂದು ವೇಳೆ ಒಂದು ವಸ್ತುವನ್ನು ದರ್ಪಣದಿಂದ 40 cm ದೂರದಲ್ಲಿ ಇರಿಸಿದರೆ, ಬಿಂಬದ ಸ್ವರೂಪ ಮತ್ತು ಸಾಪೇಕ್ಷ ಗಾತ್ರವು ಏನಾಗಿರುತ್ತದೆ?

A. ಮಿಥ್ಯ, ವಸ್ತುವಿನಂತೆಯೇ ಅದೇ ಗಾತ್ರ

B. ಮಿಥ್ಯ, ವಸ್ತುವಿಗಿಂತ ಸಣ್ಣದು ✓

C. ನೈಜ, ವಸ್ತುವಿಗಿಂತ ಸಣ್ಣದು

D. ನೈಜ, ವಸ್ತುಗಿಂತ ದೊಡ್ಡದು

**Q14** Mixtures, Solutions, Colloids

ಈ ಕೆಳಗಿನವುಗಳಲ್ಲಿ ಯಾವುದು ದ್ರಾವಣದ ಗುಣಲಕ್ಷಣವಲ್ಲ?

A. ಏಕರೂಪದ ಸಂಯೋಜನೆ

B. ತಳಭಾಗದಲ್ಲಿ ದ್ರಾವ್ಯದ ಸಂಗ್ರಹವಾಗುವಿಕೆ ಇಲ್ಲ

C. ಪಾರದರ್ಶಕ ನೋಟ

D. ಸೋಸುವಿಕೆಯ ಮೂಲಕ ಘಟಕಗಳನ್ನು ಬೇರ್ಪಡಿಸುವುದು ✓

Blackbook Vocabulary — Now in the App! ▶ Download Now on Google Play

generated by rank.qmaths.in

**Q15** Nervous System & Brain

ಇತರ ಜೀವಕೋಶಗಳೊಂದಿಗೆ ಸಂವಹನ ನಡೆಸಲು ನರ ತಂತುವಿನ ಮೂಲಕ ಚಲಿಸುವ ವಿಶೇಷ ಸಂಕೇತವನ್ನು ನಿರ್ದಿಷ್ಟವಾಗಿ _________ ಎಂದು ಕರೆಯಲಾಗುತ್ತದೆ.

- A. ನರ ಆವೇಗ ✓
- B. ಪ್ರಚೋದನೆ
- C. ಆಕ್ಸಾನ್
- D. ಹಾರ್ಮೋನ್

**Q16** Oxidation & Reduction (Redox)

ಈ ಪ್ರತಿಕ್ರಿಯೆಯನ್ನು ಪರಿಗಣಿಸಿ: $CuO(s) + H_2(g) \rightarrow Cu(s) + H_2O(l)$

ಈ ಕ್ರಿಯೆಯಲ್ಲಿ ಸಂಭವಿಸುವ ಉತ್ಕರ್ಷಣೆ-ಅಪಕರ್ಷಣೆ ಬದಲಾವಣೆಗಳನ್ನು ಈ ಕೆಳಗಿನ ಯಾವ ಆಯ್ಕೆಯು ಸರಿಯಾಗಿ ಗುರುತಿಸುತ್ತದೆ?

- A. ತಾಮ್ರವು ಉತ್ಕರ್ಷಣೆಗೊಳ್ಳುತ್ತದೆ, ಆದೇವೇಳೆ H2ಅಪಕರ್ಷಣೆಗೊಳ್ಳುತ್ತದೆ
- B. ಜಲಜನಕ ಉತ್ಕರ್ಷಣೆಗೊಳ್ಳುತ್ತದೆ, ಆದೇವೇಳೆ CuO ಅಪಕರ್ಷಣೆಗೊಳ್ಳುತ್ತದೆ ✓
- C. ತಾಮ್ರ ಮತ್ತು ಜಲಜನಕ ಎರಡೂ ಸಹ ಉತ್ಕರ್ಷಣೆಗೊಳ್ಳುತ್ತದೆ
- D. ಜಲಜನಕ ಅಪಕರ್ಷಣೆಗೊಳ್ಳುತ್ತದೆ, ಆದೇವೇಳೆ CuO ಉತ್ಕರ್ಷಣೆಗೊಳ್ಳುತ್ತದೆ

**Q17** Physical & Chemical Properties

ತಾಮ್ರವನ್ನು ಗಾಳಿಯಲ್ಲಿ ಬಿಸಿ ಮಾಡಿದಾಗ, ಅದು ಆಮ್ಲಜನಕದೊಂದಿಗೆ ಸಂಯೋಜನೆಗೊಂಡು ಕಪ್ಪು ಆಕ್ಸೈಡ್ (black oxide) ಅನ್ನು ರೂಪಿಸುತ್ತದೆ. ಅದು_________ ಆಗಿದೆ.

- A. ತಾಮ್ರದ(I) ಆಕ್ಸೈಡ್
- B. ತಾಮ್ರದ(II) ಆಕ್ಸೈಡ್ ✓
- C. ತಾಮ್ರದ(III) ಆಕ್ಸೈಡ್
- D. ತಾಮ್ರದ(IV) ಆಕ್ಸೈಡ್

**Q18** Plant Hormones

ಟಚ್-ಮಿ-ನಾಟ್ (ಮಿಮೋಸಾ) ಸಸ್ಯದ ಎಲೆಗಳನ್ನು ಮುಟ್ಟಿದಾಗ ಏನಾಗುತ್ತದೆ?

- A. ಅವು ದೊಡ್ಡದಾಗಿ ಬೆಳೆಯುತ್ತವೆ
- B. ಅವು ಹೂವುಗಳನ್ನು ಉತ್ಪಾದಿಸುತ್ತವೆ
- C. ಅವು ಮುದುರಿಕೊಂಡು ಜೋತು ಬೀಳುತ್ತವೆ ✓
- D. ಅವುಗಳ ಬಣ್ಣ ಬದಲಾಗುತ್ತವೆ

**Q19** Plant Tissues & Transport

ಸಸ್ಯದ ಯಾವ ಭಾಗವು ನೀರು ಮತ್ತು ಖನಿಜಗಳನ್ನು ಮುಖ್ಯವಾಗಿ ಮಣ್ಣಿನಿಂದ ಹೀರಿಕೊಳ್ಳುತ್ತದೆ?

- A. ಬೇರುಗಳು ✓
- B. ಹೂವುಗಳು
- C. ಎಲೆಗಳು
- D. ಕಾಂಡಗಳು

**Q20** Properties & Tests

ತಾಮ್ರದ ಆಕ್ಸೈಡ್ ಜೊತೆ ಹೈಡ್ರೋಕ್ಲೋರಿಕ್ ಆಮ್ಲವು ಕ್ರಿಯೆಗೊಳಪಟ್ಟಾಗ, ದ್ರಾವಣವು ಈ ಕೆಳಗಿನಂತೆ ಬದಲಾಗುತ್ತದೆ:

- A. ನೀರು ರೂಪುಗೊಳ್ಳುವುದರಿಂದಾಗಿ ಬಣ್ಣರಹಿತವಾಗಿರುತ್ತದೆ
- B. ತಾಮ್ರ(II) ಕ್ಲೋರೈಡ್‌ನಿಂದಾಗಿ ನೀಲಿ-ಹಸಿರು ಬಣ್ಣಕ್ಕೆ ತಿರುಗುತ್ತದೆ ✓
- C. ಆಮ್ಲಜನಕದ ವಿಕಸನದಿಂದಾಗಿ ಕೆಂಪು ಬಣ್ಣಕೆ ತಿರುಗುತ್ತದೆ
- D. ಜಲಜನಕ ಅನಿಲದಿಂದಾಗಿ ಕಂದು ಬಣ್ಣಕ್ಕೆ ತಿರುಗುತ್ತದೆ

**Q21** Reproduction in Plants

ಸಸ್ಯ ಸಂವರ್ಧನೆಯ ಕುರಿತಂತೆ ಈ ಕೆಳಗಿನ ಯಾವ ಹೇಳಿಕೆ **ತಪ್ಪಾಗಿದೆ**?

- A. ಸಂತತಿಯು ಪೋಷಕಜೀವಿಯಂತೆಯೇ ಅನುವಂಶಿಕವಾಗಿ ಒಂದೇ ಆಗಿರುತ್ತದೆ
- B. ಈ ಪ್ರಕ್ರಿಯೆಯು ಕೇವಲ ಒಂದು ಪೋಷಕಜೀವಿಯನ್ನು ಒಳಗೊಂಡಿರುತ್ತದೆ
- C. ಹೊಸ ಸಸ್ಯಗಳು ಕಾಂಡಗಳು, ಬೇರುಗಳು ಅಥವಾ ಎಲೆಗಳಿಂದ ಹುಟ್ಟಿಕೊಳ್ಳುತ್ತವೆ
- D. ಬೀಜೋತ್ಪಾದಕ ರಚನೆಗಳಿಂದ ಹೊಸ ಸಸ್ಯಗಳು ಬೆಳೆಯುತ್ತವೆ ✓

**Q22** Ultrasound & Applications

ವೈದ್ಯಕೀಯ ಚಿತ್ರಣದಲ್ಲಿ ಅಲ್ಟ್ರಾಸೌಂಡ್ ಅನ್ನು ಹೇಗೆ ಬಳಸಲಾಗುತ್ತದೆ ಎಂಬುದನ್ನು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಅಲ್ಟ್ರಾಸೌಂಡ್ ತರಂಗಗಳು ಅಂಗಾಂಶಗಳಿಂದ ಪ್ರತಿಫಲಿಸಿ ಮಾನಿಟರ್‌ನಲ್ಲಿ ನೈಜ-ಸಮಯದ ಚಿತ್ರಗಳನ್ನು ಸೃಷ್ಟಿಸುತ್ತವೆ ✓
- B. ದೇಹದ ಅಂಗಾಂಶಗಳಲ್ಲಿನ ತಾಪಮಾನ ಬದಲಾವಣೆಗಳನ್ನು ಅಳೆಯಲು ಅಲ್ಟ್ರಾಸೌಂಡ್ ಅನ್ನು ಬಳಸಲಾಗುತ್ತದೆ
- C. ಅಲ್ಟ್ರಾಸೌಂಡ್ ತರಂಗಗಳು ಇಮೇಜಿಂಗ್‌ಗಾಗಿ ಯಾವುದೇ ಪ್ರತಿಫಲನವಿಲ್ಲದೆ ಅಂಗಾಂಶಗಳ ಮೂಲಕ ಹಾದುಹೋಗುತ್ತವೆ
- D. ಮೆಡಿಕಲ್ ಇಮೇಜಿಂಗ್‌ಗಾಗಿ ಅಲ್ಟ್ರಾಸೌಂಡ್ ಕಡಿಮೆ ಆವರ್ತನದ ಧ್ವನಿ ತರಂಗಗಳನ್ನು ಬಳಸುತ್ತದೆ

Blackbook Vocabulary — Now in the App! ▶ Download Now on Google Play

**Q23** Winds & Pressure Belts

60° ದಕ್ಷಿಣಕ್ಕೆ ಸಮೀಪವಿರುವ ಪವನಶಾಸ್ತ್ರೀಯ ಕೇಂದ್ರವು ಮಾರುತಗಳು ಒಮ್ಮುಖವಾಗುವಿಕೆ ಮತ್ತು ಮೇಲೇರುವಿಕೆಯನ್ನು ಪತ್ತೆ ಮಾಡುತ್ತದೆ. ಒತ್ತಡದ ವಿಷಯಕ್ಕೆ ಸಂಬಂಧಿಸಿದಂತೆ, ಈ ಘಟನೆಯಿಂದಾಗುವ ಹೆಚ್ಚಿನ ಪರಿಣಾಮವೆಂದರೆ:

A. ಸಮಭಾಜಕದ ಕಡಿಮೆ ಒತ್ತಡ ವಲಯ ಉಂಟಾಗುತ್ತದೆ

B. ಅಧಿಕ ಒತ್ತಡದ ವಲಯ ರೂಪುಗೊಳ್ಳುತ್ತದೆ

C. ಉಪ-ಧ್ರುವೀಯ ಕಡಿಮೆ ಒತ್ತಡದ ವಲಯ ರೂಪುಗೊಳ್ಳುತ್ತದೆ ✓

D. ಉಪೋಷ್ಣ ವಲಯದ ಅಧಿಕ ಒತ್ತಡದ ಪಟ್ಟಿ ಉಂಟಾಗುತ್ತದೆ

**Q24** Work, Energy & Power

ಒಬ್ಬ ಫುಟ್ಬಾಲ್ ಆಟಗಾರನೊಬ್ಬ ಚೆಂಡನ್ನು ಮುಂದಕ್ಕೆ ಒದೆಯುತ್ತಾನೆ. ನಂತರ, ಗೋಲ್‌ಕೀಪರ್ ಚೆಂಡನ್ನು ಹಿಡಿದು ಅದನ್ನುಹಿಡಿದು ನಿಲ್ಲಿಸುತ್ತಾನೆ.

ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

1. ಆಟಗಾರನು ಚೆಂಡಿನ ಮೇಲೆ ಧನಾತ್ಮಕ ಕೆಲಸ ಮಾಡಿದನು.
2. ಗೋಲ್‌ಕೀಪರ್ ಚೆಂಡಿನ ಮೇಲೆ ಋಣಾತ್ಮಕ ಕೆಲಸ ಮಾಡಿದನು.
3. ಒದೆಯುವ ಸಮಯದಲ್ಲಿ, ಬಲ ಮತ್ತು ಸ್ಥಳಾಂತರವು ಒಂದೇ ದಿಕ್ಕಿನಲ್ಲಿರುತ್ತದೆ.
4. ಹಿಡಿಯುವ ಸಮಯದಲ್ಲಿ, ಬಲ ಮತ್ತು ಸ್ಥಳಾಂತರವು ವಿರುದ್ಧ ದಿಕ್ಕಿನಲ್ಲಿರುತ್ತದೆ.

A. 1 ಮತ್ತು 2 ಮಾತ್ರ

B. 2 ಮತ್ತು 3 ಮಾತ್ರ

C. 1, 2, 3 ಮತ್ತು 4 ✓

D. 1, 2 ಮತ್ತು 4 ಮಾತ್ರ

**Q25** Work, Energy & Power

ಒಂದು ಮೋಟಾರ್ 30 s ಗಳಿಗೆ 85 W ಶಕ್ತಿಯನ್ನು ಹೊಮ್ಮಿಸುತ್ತದೆ. ಹಾಗಾದರೆ ಮೋಟಾರ್‌ನಿಂದ ನಡೆದ ಕೆಲಸ ಎಷ್ಟು?

A. 2500 J

B. 250 J

C. 255 J

D. 2550 J ✓

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Atomic Structure & Models

ಕ್ಲೋರಿನ್ ಪ್ರಕೃತಿಯಲ್ಲಿ ಎರಡು ಸಮಸ್ಥಾನೀಯ ರೂಪಗಳಲ್ಲಿ, 35 u ಮತ್ತು 37 u ದ್ರವ್ಯರಾಶಿಗಳೊಂದಿಗೆ ದೊರಕುತ್ತದೆ. ಕ್ಲೋರಿನ್ ಪರಮಾಣುವಿನ ಸರಾಸರಿ ಪರಮಾಣು ದ್ರವ್ಯರಾಶಿಯನ್ನು ________ ಎಂದು ಅಂದಾಜಿಸಲಾಗಿದೆ.

- **A. 35.5 u ✓**
- B. 35.2 u
- C. 35 u
- D. 34.5 u

**Q2** Basic Organic Chemistry

ಅನುರೂಪ ಶ್ರೇಣಿಗಳ ಬಗ್ಗೆ ನೀಡಿರುವ ಹೇಳಿಕೆಗಳಲ್ಲಿ ಈ ಕೆಳಗಿನ ಯಾವುವು ಸರಿಯಾಗಿವೆ?
1 ಎಲ್ಲಾ ಸದಸ್ಯರು ಒಂದೇ ಸಾಮಾನ್ಯ ಸೂತ್ರವನ್ನು ಹೊಂದಿರುತ್ತವೆ.
2 ಪ್ರತಿಯೊಂದು ಅನುಕ್ರಮ ಸದಸ್ಯವು ಸಹ ಒಂದು $-CH_2-$ ಗುಂಪಿನಿಂದ ಭಿನ್ನವಾಗಿರುತ್ತದೆ.
3 ಭೌತಿಕ ಗುಣಗಳು ಎಲ್ಲಾ ಸದಸ್ಯರಿಗೆ ಒಂದೇ ಆಗಿರುತ್ತವೆ.

- **A. 1 ಮತ್ತು 2 ಮಾತ್ರ ✓**
- B. 2 ಮತ್ತು 3 ಮಾತ್ರ
- C. 1 ಮತ್ತು 3 ಮಾತ್ರ
- D. 1,2 ಮತ್ತು 3

**Q3** Carbon & Its Compounds

ಇಂಗಾಲದ ಬಹುರೂಪವಾದ ವಜ್ರದ ಯಾವ ಪ್ರಮುಖ ಗುಣವು ಅದನ್ನು ಗ್ರ್ಯಾಫೈಟ್‌ನಿಂದ ಭಿನ್ನವಾಗಿಸುತ್ತದೆ?

- **A. ಮುಕ್ತ ಎಲೆಕ್ಟ್ರಾನ್‌ಗಳ ಅನುಪಸ್ಥಿತಿಯಿಂದಾಗಿ ವಜ್ರವು ಒಂದು ವಿದ್ಯುತ್ ಅವಾಹಕವಾಗಿದೆ ✓**
- B. ವಜ್ರವು ಗ್ರ್ಯಾಫೈಟ್‌ನಂತೆ ಪದರಗಳ ರಚನೆಯಲ್ಲಿದೆ
- C. ಅಸ್ಥಾನಿಕ ಎಲೆಕ್ಟ್ರಾನ್‌ಗಳಿಂದಾಗಿ ವಜ್ರವು ವಿದ್ಯುತ್ ವಾಹಕವಾಗಿದೆ
- D. ವಜ್ರವು ಒಂದರ ಮೇಲೊಂದು ಜಾರುವ ಮೃದುವಾದ ಪದರಗಳನ್ನು ಹೊಂದಿದೆ

**Q4** Chemical Bonding (Ionic, Covalent)

ಕ್ಲೋರಿನ್‌ನೊಂದಿಗೆ ಪೊಟ್ಯಾಸಿಯಮ್ ವರ್ತಿಸಿ ಪೊಟ್ಯಾಸಿಯಮ್ ಕ್ಲೋರೈಡ್ ಅನ್ನು ರೂಪಿಸಿದಾಗ, ಅವುಗಳ ಸಂಯೋಜಿತ ಅನುಪಾತಗಳ ಆಧಾರದ ಮೇಲೆ ಈ ಕೆಳಗಿನ ಯಾವ ಸೂತ್ರವು ಉತ್ಪತ್ತಿಯಾದ ಸಂಯುಕ್ತವನ್ನು ಸರಿಯಾಗಿ ಪ್ರತಿನಿಧಿಸುತ್ತದೆ?

- A. KCl2
- **B. KCl ✓**
- C. K2Cl
- D. K2Cl2

**Q5** Circulatory System (Heart, Blood)

ಮಾನವ ಹೃದಯದ ಯಾವ ಕೋಣೆಯು ಆಮ್ಲಜನಕೀಕರಣಕ್ಕಾಗಿ ರಕ್ತವನ್ನು ನೇರವಾಗಿ ಶ್ವಾಸಕೋಶಕ್ಕೆ ಪಂಪ್ ಮಾಡುತ್ತದೆ?

- A. ಬಲ ಹೃತ್ಕರ್ಣ
- B. ಎಡ ಹೃತ್ಕುಕ್ಷಿ
- **C. ಬಲ ಹೃತ್ಕುಕ್ಷಿ ✓**
- D. ಎಡ ಹೃತ್ಕರ್ಣ

**Q6** Ecology & Environment

ಈ ಕೆಳಗಿನ ಒಂದನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಕ್ರಿಯೆಗಳು ವಾತಾವರಣದ ಆಮ್ಲಜನಕವನ್ನು ಸೇವಿಸುತ್ತವೆ.

- A. ಪಳೆಯುಳಿಕೆ ಇಂಧನಗಳ ದಹನ
- B. ಸಸ್ಯಗಳ ಉಸಿರಾಟ
- **C. ಹಸಿರು ಸಸ್ಯಗಳ ದ್ಯುತಿಸಂಶ್ಲೇಷಣೆ ✓**
- D. ಪ್ರಾಣಿಗಳ ಉಸಿರಾಟ

**Q7** Ecosystem & Food Chain

ಒಂದು ಹುಲ್ಲುಗಾವಲಿನ ಆಹಾರ ಸರಪಳಿಯಲ್ಲಿ, ರಾಸಾಯನಿಕ ಕೀಟನಾಶಕವು ಯಾವುದರಲ್ಲಿ ಗರಿಷ್ಠವಾಗಿ ಸಂಚಯನವಾಗುತ್ತದೆ?

- A. ಕಪ್ಪೆ
- **B. ಗಿಡುಗ ✓**
- C. ಮಿಡತೆ
- D. ಹುಲ್ಲು

Blackbook Vocabulary — Now in the App! ▸ Download Now on Google Play
generated by rank.qmaths.in

**Q8** Electromagnetic Induction

ಒಂದು ಪ್ರಯೋಗದಲ್ಲಿ, ಒಂದು ಲೋಹದ ಸಲಾಕೆಯು ಪೂರ್ವಕ್ಕೆ ನಿರ್ದೇಶಿಸಲ್ಪಟ್ಟ ಸಮತಲ ಕಾಂತಕ್ಷೇತ್ರದ ಮೂಲಕ ಉತ್ತರ ದಿಕ್ಕಿಗೆ ಚಲಿಸುತ್ತದೆ. ಫ್ಲೆಮಿಂಗ್‌ನ ಬಲಗೈ ನಿಯಮದ ಪ್ರಕಾರ, ಸಲಾಕೆಯಲ್ಲಿ ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕು ಯಾವುದು?

A. ಪ್ರೇರಿತ ವಿದ್ಯುತ್ ಪ್ರವಾಹವು ಪೂರ್ವಕ್ಕೆ ಹರಿಯುತ್ತದೆ
B. ಪ್ರೇರಿತ ವಿದ್ಯುತ್ ಪ್ರವಾಹವು ಲಂಬವಾಗಿ ಕೆಳಮುಖವಾಗಿ ಹರಿಯುತ್ತದೆ ✓
C. ಪ್ರೇರಿತ ವಿದ್ಯುತ್ ಪ್ರವಾಹವು ಲಂಬವಾಗಿ ಮೇಲ್ಮುಖವಾಗಿ ಹರಿಯುತ್ತದೆ
D. ಪ್ರೇರಿತ ವಿದ್ಯುತ್ ಪ್ರವಾಹವು ಪಶ್ಚಿಮಕ್ಕೆ ಹರಿಯುತ್ತದೆ

**Q9** Electromagnetic Induction

ಯಾವ ವ್ಯವಸ್ಥೆಯು ಒಂದು ತಂತಿಯ ಲೂಪ್‌ನಲ್ಲಿ ಅತಿ ಹೆಚ್ಚು ಪ್ರೇರಿತ ವಿದ್ಯುತ್ ಪ್ರವಾಹವನ್ನು ಉಂಟುಮಾಡುತ್ತದೆ?

A. ಒಂದು ಬಲವಾದ ಕಾಂತಕ್ಷೇತ್ರದೊಳಗೆ ಲೂಪ್‌ಅನ್ನು ತ್ವರಿತವಾಗಿ ಚಲಿಸುವುದು ✓
B. ಲೂಪ್‌ಅನ್ನು ಕ್ಷೇತ್ರ ರೇಖೆಗಳಿಗೆ ಸಮಾನಾಂತರವಾಗಿ ಚಲಿಸುವುದು
C. ಲೂಪ್‌ಅನ್ನು ನಿಧಾನವಾಗಿ ಒಂದು ದುರ್ಬಲ ಕಾಂತಕ್ಷೇತ್ರದೊಳಗೆ ಚಲಿಸುವುದು
D. ಒಂದು ಕಾಂತಕ್ಷೇತ್ರದಲ್ಲಿ ಲೂಪ್‌ಅನ್ನು ಸ್ಥಿರವಾಗಿಡುವುದು

**Q10** Light & Optics

ಹಗಲಿನಲ್ಲಿ ಆಕಾಶವು ನೀಲಿ ಬಣ್ಣದಲ್ಲಿ ಕಾಣುತ್ತದೆ ಆದರೆ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ನಸುಗೆಂಪಾದ ಬಣ್ಣಕ್ಕೆ ತಿರುಗುತ್ತದೆ ಎಂಬುದನ್ನು ವಿವರಿಸಲು ವಿಜ್ಞಾನ ವಸ್ತುಸಂಗ್ರಹಾಲಯವು ಒಂದು ಪ್ರಾತ್ಯಕ್ಷಿಕೆಯನ್ನು ವಿನ್ಯಾಸಗೊಳಿಸುತ್ತಿದೆ. ವಾತಾವರಣದಲ್ಲಿ ಬೆಳಕಿನ ಚದುರುವಿಕೆಯ ಆಧಾರದ ಮೇಲೆ ಈ ವೀಕ್ಷಣೆಗಳಿಗೆ ಸಂಬಂಧಿಸಿದಂತೆ ಅತ್ಯುತ್ತಮ ವಿವರಣೆ ಯಾವುದು?

A. ಕಡಿಮೆ ತರಂಗದೂರಗಳು ಹೆಚ್ಚು ಪ್ರಬಲವಾಗಿ ಚದುರಿಹೋಗುತ್ತವೆ, ಆದರೆ ಸೂರ್ಯಾಸ್ತದ ಸಮಯದಲ್ಲಿ ವಾತಾವರಣದ ದೀರ್ಘ ಪಥಗಳು ಕೆಂಪು ತರಂಗದೂರಗಳಿಗೆ ಅನುಕೂಲಕರವಾಗಿರುತ್ತವೆ ✓
B. ವಾತಾವರಣದ ಹೀರಿಕೊಳ್ಳುವಿಕೆಯು ಹಗಲಿನಲ್ಲಿ ಕೆಂಪು ಬೆಳಕನ್ನು ತೆಗೆದುಹಾಕುತ್ತದೆ, ಆದರೆ ಸೂರ್ಯಾಸ್ತದ ಸಮಯದಲ್ಲಿ ನೀಲಿ ಬೆಳಕನ್ನು ತೆಗೆದುಹಾಕುತ್ತದೆ
C. ಧೂಳಿನ ಕಣಗಳು ಎಲ್ಲಾ ತರಂಗದೂರಗಳನ್ನು ಸಮಾನವಾಗಿ ಚದುರಿಸುತ್ತವೆ, ಆದರೆ ಸೂರ್ಯಾಸ್ತದ ಸಮಯದಲ್ಲಿ ಹೆಚ್ಚಿದ ಧೂಳು ಕೆಂಪು ಬೆಳಕನ್ನು ಹೆಚ್ಚು ಗೋಚರಿಸುವಂತೆ ಮಾಡುತ್ತದೆ
D. ಸೂರ್ಯನು ಹಗಲಿನಲ್ಲಿ ಹೆಚ್ಚು ನೀಲಿ ಬೆಳಕನ್ನು ಹೊರಸೂಸುತ್ತಾನೆ, ಆದರೆ ಸೂರ್ಯಾಸ್ತದ ಸಮಯದಲ್ಲಿ ಹೆಚ್ಚು ಕೆಂಪು ಬೆಳಕನ್ನು ಹೊರಸೂಸುತ್ತಾನೆ

**Q11** Light & Optics

ಪ್ರಸರಣಕ್ಕೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ನಿಜವಾಗಿದೆ?

(1) ಒಂದು ಗಾಜಿನ ಪಟ್ಟಕದ ಮೂಲಕ ಕೆಂಪು ಬೆಳಕು ಹಾದು ಹೋದಾಗ ಅದು ಹೆಚ್ಚು ಬಾಗುತ್ತದೆ.
(2) ಎಲ್ಲಾ ಬಣ್ಣಗಳಿಗೂ ವಿಚಲನ ಕೋನ ಒಂದೇ ಆಗಿರುತ್ತದೆ.
(3) ಮಳೆಬಿಲ್ಲಿನ ರಚನೆಗೆ ಕಾರಣವಾಗುವ ವಿದ್ಯಮಾನಗಳಲ್ಲಿ ಚೆದುರುವಿಕೆಯು ಸಹ ಒಂದು.
(4) ಬೆಳಕು ಗಾಳಿಯಿಂದ ಪಟ್ಟಕಕ್ಕೆ ಹೋದಂತೆ ಬೆಳಕಿನ ವೇಗ ಕಡಿಮೆಯಾಗುತ್ತದೆ.

A. 3 ಮತ್ತು 4 ಹೇಳಿಕೆಗಳು ಮಾತ್ರ ಸರಿ ✓
B. 1 ಮತ್ತು 2 ಹೇಳಿಕೆಗಳು ಮಾತ್ರ ಸರಿ
C. 1 ಮತ್ತು 3 ಹೇಳಿಕೆಗಳು ಮಾತ್ರ ಸರಿ
D. 2 ಮತ್ತು 4 ಹೇಳಿಕೆಗಳು ಮಾತ್ರ ಸರಿ

**Q12** Mechanics

ಒಂದು ಕಾರು ತನ್ನ ವೇಗವನ್ನು ಐದು ಸೆಕೆಂಡುಗಳಲ್ಲಿ 10 m/s ನಿಂದ 30 m/s ಗೆ ಹೆಚ್ಚಿಸುತ್ತದೆ. ಹಾಗಾದರೆ ಕಾರಿನ ವೇಗೋತ್ಕರ್ಷ ಎಷ್ಟು?

A. 4 $m/s^2$ ✓
B. 6 $m/s^2$
C. 2 $m/s^2$
D. 10 $m/s^2$

**Q13** Mirrors & Lenses

ಒಬ್ಬ ವಿದ್ಯಾರ್ಥಿಯು ಉರಿಯುತ್ತಿರುವ ಒಂದು ಮೇಣದಬತ್ತಿಯನ್ನು ಅನಂತದಿಂದ ಒಂದು ಪೀನ ಮಸೂರದ ಸಂಗಮಬಿಂದುವಿನ ಕಡೆಗೆ ಸರಿಸುತ್ತಾನೆ. ಬಿಂಬದ ಗಾತ್ರವು ಹೇಗೆ ಬದಲಾಗುತ್ತದೆ?

A. ಬಿಂಬದ ಗಾತ್ರವು ಕಡಿಮೆಯಾಗುತ್ತದೆ
B. ಬಿಂಬದ ಗಾತ್ರವು ಹೆಚ್ಚಾಗುತ್ತದೆ ✓
C. ಬಿಂಬವು ಕಣ್ಮರೆಯಾಗುತ್ತದೆ
D. ಬಿಂಬವು ಉದ್ದಕ್ಕೂ ಒಂದೇ ಗಾತ್ರದಲ್ಲಿರುತ್ತದೆ

**Q14** Mixtures, Solutions, Colloids

ದ್ರಾವಣದಲ್ಲಿರುವ ಕಣದ ಗಾತ್ರವನ್ನು ನಿಲಂಬನದಲ್ಲಿನ ಕಣದ ಗಾತ್ರದೊಂದಿಗೆ ಸರಿಯಾಗಿ ಹೋಲಿಸುವ ಹೇಳಿಕೆ ಯಾವುದು?

A. ನಿಲಂಬನದ ಕಣಗಳು ಗಾತ್ರದಲ್ಲಿ ಆಣ್ವಿಕವಾಗಿರುತ್ತವೆ ಮತ್ತು ದ್ರಾವಣದ ಕಣಗಳು ಪರಮಾಣುಗಳಾಗಿವೆ
B. ನಿಲಂಬನದ ಕಣಗಳು ದ್ರಾವಣದ ಕಣಗಳಿಗಿಂತ ಚಿಕ್ಕದಾಗಿರುತ್ತವೆ
C. ನಿಲಂಬನದ ಕಣಗಳು ದ್ರಾವಣದ ಕಣಗಳಿಗಿಂತ ದೊಡ್ಡದಾಗಿರುತ್ತವೆ ✓
D. ಎರಡೂ ಸಹ ಸಮಾನ ಕಣದ ಗಾತ್ರವನ್ನು ಹೊಂದಿವೆ

Blackbook Vocabulary — Now in the App! ▶ Download Now on Google Play

**Q15** Nervous System & Brain

ಮೆದುಳಿನ ಇತರ ಭಾಗಗಳಿಗೆ ಹೋಲಿಸಿದರೆ ಮುಮ್ಮಿದುಳಿನ (forebrain) ವಿಶಿಷ್ಟ ಕಾರ್ಯವೇನು?

A. ಅದು ಸಮತೋಲನವನ್ನು ನಿಯಂತ್ರಿಸುತ್ತದೆ

B. ಅದು ಹೃದಯ ಬಡಿತವನ್ನು ನಿಯಂತ್ರಿಸುತ್ತದೆ

C. ಅದು ಸಂವೇದನಾ ಪ್ರಚೋದನೆಗಳನ್ನು ಸ್ವೀಕರಿಸುತ್ತದೆ ✓

D. ಅದು ಹಾರ್ಮೋನುಗಳನ್ನು ಬಿಡುಗಡೆ ಮಾಡುತ್ತದೆ

**Q16** Oxidation & Reduction (Redox)

ಈ ಕೆಳಗಿನ ಕ್ರಿಯೆಯನ್ನು ಪರಿಗಣಿಸಿ:

$MnO_2 + 4HCl \rightarrow MnCl_2 + 2H_2O + Cl_2$

ರೆಡಾಕ್ಸ್ ಕ್ರಿಯೆಗಳ ಆಮ್ಲಜನಕ-ಜಲಜನಕ ವ್ಯಾಖ್ಯಾನದ ಆಧಾರದ ಮೇಲೆ, ಈ ಕ್ರಿಯೆಯಲ್ಲಿ ಯಾವ ವಸ್ತುವು ಅಪಕರ್ಷಣಕ್ಕೆ ಒಳಗಾಗುತ್ತದೆ?

A. ಆಮ್ಲಜನಕವನ್ನು ಪಡೆದುಕೊಂಡ ನಂತರ ನೀರು ರೂಪುಗೊಳ್ಳುತ್ತದೆ

B. ಮ್ಯಾಂಗನೀಸ್ ಡೈಆಕ್ಸೈಡ್ ಆಮ್ಲಜನಕವನ್ನು ಕಳೆದುಕೊಳ್ಳುತ್ತದೆ ✓

C. ಹೈಡ್ರೋಜನ್ ಕ್ಲೋರೈಡ್ ಹೈಡ್ರೋಜನ್ ಅನ್ನು ಕಳೆದುಕೊಳ್ಳುತ್ತದೆ

D. ಕ್ಲೋರಿನ್ ಅನಿಲವು ಉತ್ಕರ್ಷಣೆಯ ಮೂಲಕ ರೂಪುಗೊಳ್ಳುತ್ತದೆ

**Q17** Physical & Chemical Properties

ಮೆಗ್ನೀಸಿಯಮ್ ಲೋಹವು ಬಿಸಿನೀರಿನೊಂದಿಗೆ ವರ್ತಿಸಿದಾಗ, ಜಲಜನಕ ಅನಿಲದ ಜೊತೆಗೆ ರೂಪುಗೊಳ್ಳುವ ಮುಖ್ಯ ಉತ್ಪನ್ನ ಯಾವುದು?

A. ಕಬ್ಬಿಣದ ಹೈಡ್ರಾಕ್ಸೈಡ್

B. ತಾಮ್ರದ ಹೈಡ್ರಾಕ್ಸೈಡ್

C. ಮೆಗ್ನೀಸಿಯಮ್ ಹೈಡ್ರಾಕ್ಸೈಡ್ ✓

D. ಮೆಗ್ನೀಸಿಯಂ ಆಕ್ಸೈಡ್

**Q18** Plant Tissues & Transport

ಸಸ್ಯಗಳಲ್ಲಿನ ವರ್ಧನ ಅಂಗಾಂಶಗಳ ವಿಶಿಷ್ಟವಾದ ಲಕ್ಷಣ ಯಾವುದು?

A. ಜೀವಕೋಶಗಳು ನೀರು ಮತ್ತು ಖನಿಜಾಂಶವನ್ನು ಸಾಗಿಸುತ್ತವೆ

B. ಜೀವಕೋಶಗಳು ನಿರಂತರ ವಿಭಜನೆಯ ಸಾಮರ್ಥ್ಯವನ್ನು ಹೊಂದಿರುತ್ತವೆ ✓

C. ಜೀವಕೋಶಗಳು ದಪ್ಪವಾದ ದ್ವಿತೀಯಕ ಭಿತ್ತಿಗಳನ್ನು ಹೊಂದಿರುತ್ತವೆ

D. ಜೀವಕೋಶಗಳು ಮುಖ್ಯವಾಗಿ ಯಾಂತ್ರಿಕ ಬೆಂಬಲವನ್ನು ಒದಗಿಸುತ್ತವೆ

**Q19** Plant Tissues & Transport

ಮೃತ ರಚನೆಗಳು ಹೆಚ್ಚಾಗಿ "ಗಡಸು ಮತ್ತು ಕಠಿಣ"ವಾಗಿರುತ್ತವೆ. ಯಾವ ಸರಳ ಶಾಶ್ವತ ಅಂಗಾಂಶವು, ಮುಖ್ಯವಾಗಿ ಸಸ್ಯಗಳಿಗೆ ಯಾಂತ್ರಿಕ ಶಕ್ತಿಯನ್ನು ಒದಗಿಸುವ ಮೃತ ಜೀವಕೋಶಗಳಿಂದ ಮಾಡಲ್ಪಟ್ಟಿದೆ?

A. ಪ್ಯಾರೆಂಕೈಮಾ

B. ವರ್ಧನ ಊತಕ

C. ಸ್ಲೀರೆಂಕೈಮಾ ✓

D. ಹೊರಚರ್ಮ

**Q20** Pollution (Air, Water, Soil, Noise)

ಈ ಹಿಂದೆ ಕೆಳಗಿನ ಯಾವ ಸಾಧನದಲ್ಲಿ CFC ಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು?

A. ಜಲ ಶುದ್ಧೀಕರಣ ಯಂತ್ರ

B. ಸೈಕಲ್

C. ಸೌರಶಕ್ತಿಯ ಕುಕ್ಕರ್

D. ರೆಫ್ರಿಜರೇಟರ್ ✓

**Q21** SI Units & Dimensions

SI ವ್ಯವಸ್ಥೆಯಲ್ಲಿ ಸರಾಸರಿ ವೇಗಕ್ಕೆ ಸರಿಯಾದ ಏಕಮಾನವನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ಪ್ರತಿನಿಧಿಸುತ್ತದೆ?

A. ಪ್ರತಿ ಗಂಟೆಗೆ ಕಿಲೋಮೀಟರ್

B. ಪ್ರತಿ ಸೆಕೆಂಡಿಗೆ ಮೀಟರ್ ✓

C. ಪ್ರತಿ ಸೆಕೆಂಡಿಗೆ ಅಡಿ

D. ಪ್ರತಿ ನಿಮಿಷಕ್ಕೆ ಸೆಂಟಿಮೀಟರ್

**Q22** Theory of Evolution

ಒಬ್ಬ ಪ್ರಾಣಿಶಾಸ್ತ್ರಜ್ಞನು ವೃಕ್ಷವಾಸಿ ಮತ್ತು ಭೂಮಿಯ ಸಸ್ತನಿಗಳ ಪಂಜಗಳನ್ನು ಹೋಲಿಸುತ್ತಾನೆ. ಇವುಗಳಲ್ಲಿ ಯಾವುದು, ಅವುಗಳ ಹೊಂದಾಣಿಕೆಯನ್ನು ಮುಖ್ಯವಾಗಿ ಸೂಚಿಸುವ ರಚನಾತ್ಮಕ ವ್ಯತ್ಯಾಸವನ್ನು ವ್ಯಾಖ್ಯಾನಿಸುತ್ತದೆ?

A. ಅವುಗಳ ಆವಾಸಸ್ಥಾನದಲ್ಲಿ ಮರೆಮಾಚುವಿಕೆಯನ್ನು ಒದಗಿಸುವ ದ್ವಿ ಪಾತ್ರ

B. ಮೇಲೆ ಹತ್ತಲು ಮತ್ತು ಸಮತಟ್ಟಾದ ನೆಲದ ಮೇಲೆ ನಡೆಯಲು ಅನುಕೂಲತೆ ✓

C. ಎಲ್ಲಾ ವೃಕ್ಷವಾಸಿ ಪ್ರಭೇದಗಳಲ್ಲಿ ಪಂಜದ ಉದ್ದದಲ್ಲಿ ಏಕರೂಪದ ಹೆಚ್ಚಳ

D. ರಕ್ಷಣಾತ್ಮಕ ಅಗತ್ಯಗಳಿಗಾಗಿ ಪ್ರಾಥಮಿಕವಾಗಿ ಅಭಿವೃದ್ಧಿಪಡಿಸಲಾದ ಸಮಾನ ಮೊನಚು

Blackbook Vocabulary — Now in the App! ► Download Now on Google Play

**Q23** Work, Energy & Power

ಒಂದು ಯಂತ್ರವು 3000 J ಕೆಲಸದ ಅಗತ್ಯವಿರುವ ಕೆಲಸವನ್ನು ಅರ್ಧ ನಿಮಿಷದಲ್ಲಿ ಪೂರ್ಣಗೊಳಿಸುತ್ತದೆ. ಯಂತ್ರವು ಉತ್ಪತ್ತಿ ಮಾಡುವ ಸರಾಸರಿ ಶಕ್ತಿ (average power) ____ ಆಗಿದೆ.

A. 30 W

B. 10 W

C. 100 W ✔

D. 300 W

**Q24** Work, Energy & Power

M ಯಂತ್ರವು 20 s ನಲ್ಲಿ 600 J ಕೆಲಸವನ್ನು ಮಾಡುತ್ತದೆ. N ಯಂತ್ರವು 15 s ನಲ್ಲಿ 900 J ಕೆಲಸವನ್ನು ಮಾಡುತ್ತದೆ. ಯಾವ ಹೇಳಿಕೆ ಸರಿಯಾಗಿದೆ?

A. N ಯಂತ್ರವು M ಯ ಶಕ್ತಿಯ ಎರಡು ಪಟ್ಟು ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ. ✔

B. ಎರಡೂ ಯಂತ್ರಗಳು ಒಂದೇ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತವೆ.

C. M ಯಂತ್ರವು ಹೆಚ್ಚಿನ ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ.

D. N ಯಂತ್ರವು M ಯಂತ್ರದ ಶಕ್ತಿಯ 1.5 ಪಟ್ಟು ಶಕ್ತಿಯನ್ನು ಅಭಿವೃದ್ಧಿಪಡಿಸುತ್ತದೆ.

**Q25** pH Scale & Indicators

ಪ್ರತ್ಯಾಮ್ಲೀಯ ದ್ರಾವಣದಲ್ಲಿ, ಫೀನಾಪ್ತಲೀನ್ ಯಾವ ಬಣ್ಣ ಬದಲಾವಣೆಯನ್ನು ತೋರ್ಪಡಿಸುತ್ತದೆ?

A. ಅಲುಗಾಡಿಸಿದಾಗ ಬಿಳಿ ಬಣ್ಣದಿಂದ ಹಸಿರು ಬಣ್ಣಕ್ಕೆ

B. ಬಣ್ಣರಹಿತದಿಂದ ಕ್ರಮೇಣವಾಗಿ ಗುಲಾಬಿ ಬಣ್ಣಕ್ಕೆ ✔

C. ಹಳದಿ ಬಣ್ಣದಿಂದ ತಕ್ಷಣಕ್ಕೆ ಕೆಂಪು ಬಣ್ಣಕ್ಕೆ

D. ತ್ವರಿತವಾಗಿ ನೀಲಿ ಬಣ್ಣದಿಂದ ಬಣ್ಣರಹಿತವಾಗುತ್ತದೆ

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Atoms & Molecules

ಈ ಕೆಳಗಿನ ಯಾವ ಹೇಳಿಕೆ(ಗಳು) ಸರಿಯಾಗಿದೆ/ವೆ?

**ಹೇಳಿಕೆ I:** 'Ag' ಸಂಕೇತವು ಚಿನ್ನವನ್ನು ಸೂಚಿಸುತ್ತದೆ.
**ಹೇಳಿಕೆ II:** 'Pb' ಸಂಕೇತವು ಸೀಸವನ್ನು ಪ್ರತಿನಿಧಿಸುತ್ತದೆ.

A. ಹೇಳಿಕೆ I ಸರಿಯಾಗಿದೆ, ಹೇಳಿಕೆ II ತಪ್ಪಾಗಿದೆ
B. ಹೇಳಿಕೆ I ತಪ್ಪಾಗಿದೆ, ಹೇಳಿಕೆ II ಸರಿಯಾಗಿದೆ ✓
C. ಎರಡೂ ಹೇಳಿಕೆಗಳು ತಪ್ಪಾಗಿವೆ
D. ಎರಡೂ ಹೇಳಿಕೆಗಳು ಸರಿಯಾಗಿವೆ

**Q2** Basic Organic Chemistry

ಇಂಗಾಲದ ಈ ಕೆಳಗಿನ ಯಾವ ಗುಣಲಕ್ಷಣಗಳು ಹೆಚ್ಚಿನ ಸಂಖ್ಯೆಯ ಸಂಯುಕ್ತಗಳ ರಚನೆಗೆ ಕಾರಣವಾಗುತ್ತವೆ?

A. ಕುಟ್ಯತೆ ಮತ್ತು ಅನುರಣನತೆ
B. ದಹನಶೀಲತೆ ಮತ್ತು ತಂತುಕ್ಷಮ್ಯತೆ
C. ಕೆಟನೀಕರಣ ಮತ್ತು ಟೆಟ್ರಾವೇಲೆನ್ಸಿ ✓
D. ಅನಮ್ಯತೆ

**Q3** Chemical Bonding (Ionic, Covalent)

ಒಂದು ಲೋಹ ಮತ್ತು ಅಲೋಹವನ್ನು ಬೆರೆಸಿ ಸಂಯುಕ್ತವನ್ನು ರೂಪಿಸಿದರೆ, ಯಾವ ರೀತಿಯ ಆವೇಶವುಳ್ಳ ಗುಂಪುಗಳು ಹೆಚ್ಚಾಗಿ ಕಂಡುಬರುತ್ತವೆ ಮತ್ತು ಅವುಗಳನ್ನು ಹೇಗೆ ವರ್ಗೀಕರಿಸಲಾಗುತ್ತದೆ?

A. ಧಾತುಗಳು; ಲೋಹಗಳು ಮತ್ತು ಅಲೋಹಗಳು ಎಂದು ವರ್ಗೀಕರಿಸಲಾಗಿದೆ
B. ಪರಮಾಣುಗಳು; ಪ್ರೋಟಾನ್‌ಗಳು ಮತ್ತು ನ್ಯೂಟ್ರಾನ್‌ಗಳು ಎಂದು ವರ್ಗೀಕರಿಸಲಾಗಿದೆ
C. ಅಣುಗಳು; ಆಮ್ಲಗಳು ಮತ್ತು ಪ್ರತ್ಯಾಮ್ಲಗಳು ಎಂದು ವರ್ಗೀಕರಿಸಲಾಗಿದೆ
D. ಅಯಾನುಗಳು; ಧನ ಅಯಾನುಗಳು ಮತ್ತು ಋಣ ಅಯಾನುಗಳು ಎಂದು ವರ್ಗೀಕರಿಸಲಾಗಿದೆ ✓

**Q4** Circulatory System (Heart, Blood)

ಕರುಳಿನಿಂದ ಹೀರಿಕೊಳ್ಳಲ್ಪಟ್ಟ ಕೊಬ್ಬನ್ನು ಸಾಗಾಣಿಕೆ ಮಾಡಲು ಒಬ್ಬ ರೋಗಿಗೆ ಕಷ್ಟವಾಗುತ್ತಿದೆ. ಯಾವ ದ್ರವದ ಕಾರ್ಯವು ದುರ್ಬಲಗೊಂಡರೆ ಈ ಸಮಸ್ಯೆ ಉಂಟಾಗಬಹುದು?

A. ದುಗ್ಧರಸ ✓
B. ಪ್ಲಾಸ್ಮಾ
C. ಕಿರುತಟ್ಟೆಗಳು
D. ರಕ್ತ ಕಣಗಳು

**Q5** Current Electricity (Ohm's Law, Circuits)

ವಿದ್ಯುತ್ ಬಲ್ಬ್‌ಗಳಲ್ಲಿ ಟಂಗ್‌ಸ್ಟನ್ ಅನ್ನು ತಂತು ವಸ್ತುವಾಗಿ ಏಕೆ ಬಳಸಲಾಗುತ್ತದೆ?

A. ಇದು ತಂತುಗಳನ್ನು ತಯಾರಿಸಲು ಲಭ್ಯವಿರುವ ಅತ್ಯಂತ ಕಡಿಮೆ ಬೆಲೆಯ ಲೋಹವಾಗಿದೆ
B. ಇದು ಸಾರಜನಕ ಮತ್ತು ಆರ್ಗಾನ್‌ಗಳೊಂದಿಗೆ ವರ್ತಿಸಿ ಪ್ರಕಾಶಮಾನವಾದ ಬೆಳಕನ್ನು ಸೃಷ್ಟಿಸುತ್ತದೆ
C. ಇದು ಹೆಚ್ಚಿನ ಕರಗುವ ಬಿಂದುವನ್ನು ಹೊಂದಿದೆ ಮತ್ತು ಕರಗದೆ ಹೆಚ್ಚಿನ ತಾಪಮಾನವನ್ನು ತಡೆದುಕೊಳ್ಳಬಲ್ಲದು ✓
D. ಇದು ಕಡಿಮೆ ತಾಪಮಾನದಲ್ಲಿ ಇತರ ಲೋಹಗಳಿಗಿಂತ ಹೆಚ್ಚು ಶಾಖವನ್ನು ಉತ್ಪಾದಿಸುತ್ತದೆ

**Q6** Current Electricity (Ohm's Law, Circuits)

ಒಂದು ಲೋಹದ ಮಂಡಲದಲ್ಲಿ ವಿದ್ಯುತ್ ಪ್ರವಾಹದ ಸಾಂಪ್ರದಾಯಿಕ ದಿಕ್ಕು ಯಾವುದು?

A. ಧನಾತ್ಮಕ ತುದಿಯಿಂದ ಋಣಾತ್ಮಕ ತುದಿಗೆ ✓
B. ಋಣಾತ್ಮಕ ತುದಿಯಿಂದ ಧನಾತ್ಮಕ ತುದಿಗೆ
C. ಎಲೆಕ್ಟ್ರಾನ್ ಚಲನೆಯ ದಿಕ್ಕಿನಲ್ಲಿ
D. ಯಾದೃಚ್ಛಿಕವಾಗಿ ಯಾವುದೇ ಎರಡು ಬಿಂದುಗಳ ನಡುವೆ

**Q7** Extraction & Metallurgy

ಲೋಹಗಳ ಶುದ್ಧೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿದೆ?

A. ಶುದ್ಧೀಕರಣವು ಅದಿರನ್ನು ಆಕ್ಸೈಡ್ ರೂಪಕ್ಕೆ ಪರಿವರ್ತಿಸುವುದನ್ನು ಒಳಗೊಂಡಿರುತ್ತದೆ
B. ಶುದ್ಧೀಕರಣವು ಅದಿರಿನಿಂದ ಲೋಹವನ್ನು ಹೊರತೆಗೆಯುವ ಪ್ರಕ್ರಿಯೆಯಾಗಿದೆ
C. ಹೊರತೆಗೆಯಲಾದ ಲೋಹದಿಂದ ಕಲ್ಮಶಗಳನ್ನು ತೆಗೆದುಹಾಕಲು ಶುದ್ಧೀಕರಣವನ್ನು ಬಳಸಲಾಗುತ್ತದೆ ✓
D. ಶುದ್ಧೀಕರಣವನ್ನು ಹೆಚ್ಚು ಕ್ರಿಯಾಶೀಲ ಲೋಹಗಳಿಗೆ ಮಾತ್ರ ಬಳಸಲಾಗುತ್ತದೆ

Blackbook Vocabulary — Now in the App! ► Download Now on Google Play

generated by rank.qmaths.in

**Q8** Five Kingdom Classification

ಬೀಜಕಗಳ ಮೂಲಕ ಸಂತಾನೋತ್ಪತ್ತಿ ಮಾಡುವ ಮತ್ತು ಕೈಟಿನ್ (chitin) ಕೋಶ ಭಿತ್ತಿಯನ್ನು ಹೊಂದಿರುವ ಯುಕ್ಯಾರಿಯೋಟಿಕ್ ಜೀವಿಯಿಂದಾಗಿ ಒಬ್ಬ ರೋಗಿಯು ದೀರ್ಘಕಾಲದ ಸೋಂಕಿಗೆ ತುತ್ತಾಗುತ್ತಾನೆ. ಈ ಸೋಂಕಿಗೆ ಹೆಚ್ಚಾಗಿ ಯಾವ ರೀತಿಯ ಜೀವಿಯು ಕಾರಣವಾಗಿದೆ?

A. ಶೈವಲ

B. ಶಿಲೀಂಧ್ರ ✓

C. ಪ್ರೋಟೋಜೋವಾ

D. ಬ್ಯಾಕ್ಟೀರಿಯಾ

**Q9** Mechanics

ಕೆಳಗಿನವುಗಳಲ್ಲಿ ಯಾವುದು ಸರಳ ರೇಖೆಯ ಉದ್ದಕ್ಕೂ ಏಕರೂಪದ ಚಲನೆಯಲ್ಲಿ ಚಲಿಸುತ್ತಿರುವ ಒಂದು ವಸ್ತುವನ್ನು ವಿವರಿಸುತ್ತದೆ?

A. ಮಧ್ಯಂತರಗಳಲ್ಲಿ ದಿಕ್ಕನ್ನು ಬದಲಾಯಿಸುತ್ತಿರುವ ಒಂದು ವಸ್ತು

B. ಪದೇ ಪದೇ ನಿಲ್ಲುತ್ತಿರುವ ಮತ್ತು ಪ್ರಾರಂಭವಾಗುತ್ತಿರುವ ಒಂದು ವಸ್ತು

C. ಮುಂದಕ್ಕೆ ಚಲಿಸಿದಂತೆ ವೇಗೋತ್ಕರ್ಷಗೊಳ್ಳುತ್ತಿರುವ ಒಂದು ವಸ್ತು

D. ಒಂದು ದಿಕ್ಕಿನಲ್ಲಿ ಸ್ಥಿರವಾದ ವೇಗದಲ್ಲಿ ಚಲಿಸುತ್ತಿರುವ ಒಂದು ವಸ್ತು ✓

**Q10** Mechanics

ಒಂದು ಸರಳ ಯಂತ್ರದಲ್ಲಿ, ಮೀರಿಸಬೇಕಾದ ಬಲವನ್ನು _____ ಎಂದು ಕರೆಯಲಾಗುತ್ತದೆ.

A. ಭಾರ ✓

B. ಯತ್ನ

C. ಸಾಮರ್ಥ್ಯ

D. ಶಕ್ತಿ

**Q11** Mirrors & Lenses

ಒಬ್ಬ ವಿದ್ಯಾರ್ಥಿಯು ನಿಮ್ನ ದರ್ಪಣದ ವಕ್ರತಾ ಕೇಂದ್ರ ಮತ್ತು ಪ್ರಧಾನ ಸಂಗಮಬಿಂದುವಿನ ನಡುವೆ ಒಂದು ಸಣ್ಣ ಮೇಣದಬತ್ತಿಯನ್ನು ಇಡುತ್ತಾನೆ. ಕಿರಣದ ರೇಖಾಚಿತ್ರದ ನಿಯಮಗಳ ಪ್ರಕಾರ ದರ್ಪಣದಿಂದ ಯಾವ ರೀತಿಯ ಬಿಂಬವು ರೂಪುಗೊಳ್ಳುತ್ತದೆ?

A. ವಕ್ರತಾ ಕೇಂದ್ರದಲ್ಲಿ ನೈಜ, ತಲೆಕೆಳಗಾದ ಮತ್ತು ಅಷ್ಟೇ ಗಾತ್ರದ ಬಿಂಬವು ರೂಪುಗೊಳ್ಳುತ್ತದೆ

B. ವಕ್ರತಾ ಕೇಂದ್ರದ ಆಚೆಗೆ ನೈಜ, ತಲೆಕೆಳಗಾದ ಮತ್ತು ಹಿಗ್ಗಿದ ಬಿಂಬವು ರೂಪುಗೊಳ್ಳುತ್ತದೆ ✓

C. ದರ್ಪಣದ ಹಿಂದೆ ಮಿಥ್ಯ, ನೇರ ಮತ್ತು ಹಿಗ್ಗಿದ ಬಿಂಬವು ರೂಪುಗೊಳ್ಳುತ್ತದೆ

D. ಧ್ರುವ ಮತ್ತು ಸಂಗಮ ಬಿಂದುವಿನ ನಡುವೆ ಮಿಥ್ಯ, ನೇರ ಮತ್ತು ಕುಗ್ಗಿದ ಬಿಂಬವು ರೂಪುಗೊಳ್ಳುತ್ತದೆ

**Q12** Mirrors & Lenses

ಒಬ್ಬ ವಿದ್ಯಾರ್ಥಿಯು ಮೇಣದಬತ್ತಿಯನ್ನು ಒಂದು ಪೀನ ಮಸೂರದ ವಕ್ರತಾ ಕೇಂದ್ರದ ಆಚೆ ಇರಿಸುತ್ತಾನೆ. ಮಸೂರದ ಇನ್ನೊಂದು ಬದಿಯಲ್ಲಿ ಯಾವ ರೀತಿಯ ಬಿಂಬವು ರೂಪುಗೊಳ್ಳುವ ಸಾಧ್ಯತೆ ಹೆಚ್ಚು?

A. ವಸ್ತುವಿನ ಅದೇ ಗಾತ್ರದ ನೈಜ ಮತ್ತು ತಲೆಕೆಳಗಾದ ಬಿಂಬ

B. ವಸ್ತುವಿಗಿಂತ ಚಿಕ್ಕದಾದ ನೈಜ ಮತ್ತು ತಲೆಕೆಳಗಾದ ಬಿಂಬ ✓

C. ವಸ್ತುವಿಗಿಂತ ದೊಡ್ಡದಾದ ಮಿಥ್ಯ ಮತ್ತು ನೇರ ಬಿಂಬ

D. ವಸ್ತುವಿಗಿಂತ ಸಣ್ಣದಾದ ಮಿಥ್ಯ ಮತ್ತು ತಲೆಕೆಳಗಾದ ಬಿಂಬ

**Q13** Newton's Laws of Motion

ಒಂದು ಕಾರು 2000 kg ದ್ರವ್ಯರಾಶಿಯನ್ನು ಹೊಂದಿದ್ದು, 4 $m/s^2$ ನಲ್ಲಿ ವೇಗೋತ್ಕರ್ಷಗೊಳ್ಳುತ್ತದೆ. ನ್ಯೂಟನ್‌ನ ಎರಡನೇ ನಿಯಮದ ಪ್ರಕಾರ, ಕಾರಿನ ಮೇಲೆ ಪ್ರಯೋಗಿಸಲಾದ ಬಲದ ಪರಿಮಾಣ ಎಷ್ಟು?

A. 2500 N

B. 500 N

C. 8000 N ✓

D. 1000 N

**Q14** Oxidation & Reduction (Redox)

ಆಮ್ಲೀಕರಿಸಿದ ಪೊಟ್ಯಾಸಿಯಮ್ ಡೈಕ್ರೋಮೇಟ್ ಬಳಸಿಕೊಂಡು ಎಥೆನಾಲ್ ($CH_3CH_2OH$) ಅನ್ನು ಅಸಿಟಿಕ್ ಆಮ್ಲ ($CH_3COOH$) ಆಗಿ ಪರಿವರ್ತಿಸುವುದನ್ನು ಪರಿಗಣಿಸಿ:

ಹೇಳಿಕೆ I: ಇದು ಉತ್ಕರ್ಷಣ ಕ್ರಿಯೆಗೆ ಒಂದು ಉದಾಹರಣೆಯಾಗಿದೆ.

ಹೇಳಿಕೆ II: ಆಮ್ಲೀಕರಿಸಿದ ಪೊಟ್ಯಾಸಿಯಮ್ ಡೈಕ್ರೋಮೇಟ್ ಒಂದು ಉತ್ಕರ್ಷಕ ಕಾರಕವಾಗಿದೆ.

ಹೇಳಿಕೆ III: ಆಮ್ಲೀಕರಿಸಿದ ಪೊಟ್ಯಾಸಿಯಮ್ ಡೈಕ್ರೋಮೇಟ್ ಅಪಕರ್ಷಣ ಕಾರಕವಾಗಿದೆ.

ಈ ಕೆಳಗಿನವುಗಳಲ್ಲಿ ಯಾವುದು/ವು ಸರಿಯಾಗಿದೆ/ವೆ?

A. II ಮತ್ತು III ಸರಿಯಾಗಿವೆ

B. I ಮತ್ತು III ಸರಿಯಾಗಿವೆ

C. ಕೇವಲ I ಸರಿಯಾಗಿದೆ

D. ಕೇವಲ I ಮತ್ತು II ಸರಿಯಾಗಿವೆ ✓

Blackbook Vocabulary — Now in the App! ▶ Download Now on Google Play

generated by rank.qmaths.in

**Q15** Physical & Chemical Properties

ಯಾವ ಹೇಳಿಕೆಯು ಲೋಹಾಭವನ್ನು ಅದರ ಗುಣಲಕ್ಷಣಗಳ ಆಧಾರದ ಮೇಲೆ ಉತ್ತಮವಾಗಿ ಗುರುತಿಸುತ್ತದೆ?

A. ಇದು ಎಲ್ಲಾ ಪರಿಸ್ಥಿತಿಗಳಲ್ಲಿ ಲೋಹಗಳಿಗೆ ಹೋಲುವ ಗುಣಲಕ್ಷಣಗಳನ್ನು ತೋರಿಸುತ್ತದೆ

B. ಇದು ಲೋಹಗಳು ಮತ್ತು ಅಲೋಹಗಳಿಗೆ ಸಂಬಂಧವಿಲ್ಲದ ಗುಣಲಕ್ಷಣಗಳನ್ನು ತೋರಿಸುತ್ತದೆ

C. ಇದು ಎಲ್ಲಾ ಪರಿಸ್ಥಿತಿಗಳಲ್ಲಿ ಅಲೋಹಗಳಿಗೆ ಹೋಲುವ ಗುಣಲಕ್ಷಣಗಳನ್ನು ತೋರಿಸುತ್ತದೆ

D. ಇದು ಲೋಹಗಳು ಮತ್ತು ಅಲೋಹಗಳ ನಡುವೆ ಮಧ್ಯಂತರ ಗುಣಲಕ್ಷಣಗಳನ್ನು ತೋರಿಸುತ್ತದೆ ✓

**Q16** Plant Tissues & Transport

ಎತ್ತರದ ಮರಗಳಲ್ಲಿ ಕ್ಸೈಲಂ ಮೂಲಕ ನೀರನ್ನು ಮೇಲಕ್ಕೆ ಎಳೆಯುವ ಪ್ರಮುಖ ಬಲ ಯಾವುದು?

A. ಬೇರಿನ ಒತ್ತಡ

B. ವಿಸರಣೆ

C. ಬಾಷ್ಪೀಕರಣ ಸೆಳೆತ ✓

D. ಲೋಮನಾಳ ಕ್ರಿಯೆ

**Q17** Plant Tissues & Transport

ಹೆಚ್ಚಿನ ಸಸ್ಯ ಆಧಾರ ಅಂಗಾಂಶಗಳು ಮೃತ ಜೀವಕೋಶಗಳಿಂದ ಕೂಡಿದ್ದು, ಪ್ರಾಣಿ ಆಧಾರ ಅಂಗಾಂಶಗಳು ಸಜೀವ ಜೀವಕೋಶಗಳಿಂದ ಮಾಡಲ್ಪಟ್ಟಿರುತ್ತವೆ ಏಕೆ?

A. ಏಕೆಂದರೆ ಸಸ್ಯಗಳಲ್ಲಿ ಮೃತ ಜೀವಕೋಶಗಳು ಪ್ರಾಣಿಗಳಿಗಿಂತ ವೇಗವಾಗಿ ವಿಭಜನೆಯಾಗುತ್ತವೆ

B. ಸಸ್ಯಗಳಲ್ಲಿನ ಮೃತ ಜೀವಕೋಶಗಳು ಶಕ್ತಿಯ ಅಗತ್ಯವಿಲ್ಲದೆಯೇ ರಚನಾತ್ಮಕ ಶಕ್ತಿಯನ್ನು ಒದಗಿಸುತ್ತವೆ ✓

C. ಸಸ್ಯಗಳಿಗೆ ಸಜೀವ ಜೀವಕೋಶಗಳ ಅಗತ್ಯವಿರುವುದಿಲ್ಲ

D. ರೋಗನಿರೋಧಕ ಪ್ರತಿಕ್ರಿಯೆಗಳನ್ನು ತಪ್ಪಿಸಲು ಪ್ರಾಣಿ ಅಂಗಾಂಶಗಳು ಮೃತವಾಗಿರುತ್ತವೆ

**Q18** Pollution (Air, Water, Soil, Noise)

ಈ ಕೆಳಗಿನವುಗಳಲ್ಲಿ ಯಾವುದು ಜೈವಿಕವಾಗಿ ವಿಘಟನೆಯಾಗುವುದಿಲ್ಲ?

A. ಉಣ್ಣೆ

B. ಸಂಸ್ಕರಿತ ಚರ್ಮ

C. ಕಾಗದ

D. ಪ್ಲಾಸ್ಟಿಕ್ ✓

**Q19** Pollution (Air, Water, Soil, Noise)

ಜೈವಿಕ ವಿಘಟನೀಯವಲ್ಲದ ವಸ್ತುಗಳು ಪರಿಸರಕ್ಕೆ ಏಕೆ ಹಾನಿಕಾರಕವಾಗಿವೆ?

A. ಅವು ಬಹಳ ಬೇಗನೆ ವಿಘಟನೆ ಹೊಂದುತ್ತವೆ

B. ಅವು ಗಾಳಿಯಲ್ಲಿ ಆಮ್ಲಜನಕದ ಮಟ್ಟವನ್ನು ಹೆಚ್ಚಿಸುತ್ತವೆ

C. ಅವು ದೀರ್ಘಕಾಲದವರೆಗೆ ಇರುತ್ತವೆ ಮತ್ತು ಜೀವಿಗಳಿಗೆ ಹಾನಿಯನ್ನುಂಟುಮಾಡಬಹುದು ✓

D. ಅವು ಮಣ್ಣನ್ನು ಸಮೃದ್ಧಗೊಳಿಸುತ್ತವೆ

**Q20** Reflection & Refraction

ಒಬ್ಬ ವಿದ್ಯಾರ್ಥಿಯು ಪತನ ಕಿರಣ, ವಕ್ರೀಭವನ ಕಿರಣ ಮತ್ತು ಪತನ ಬಿಂದುವಿನಲ್ಲಿ ಎಳೆದ ಲಂಬ ಎಲ್ಲವೂ ಒಂದೇ ಸಮತಲದಲ್ಲಿರುವುದನ್ನು ಗಮನಿಸುತ್ತಾನೆ. ಇದು ವಕ್ರೀಭವನದ ಯಾವ ನಿಯಮವನ್ನು ವಿವರಿಸುತ್ತದೆ?

A. ವಕ್ರೀಭವನದ ಎರಡನೇ ನಿಯಮ

B. ಅಧ್ಯಾರೋಪಣ ನಿಯಮ (Law of superposition)

C. ಪ್ರಸರಣ ನಿಯಮ (Law of dispersion)

D. ವಕ್ರೀಭವನದ ಮೊದಲ ನಿಯಮ ✓

**Q21** Reproduction in Plants

ಈ ಸಾದೃಶ್ಯತೆಯನ್ನು ಪೂರ್ಣಗೊಳಿಸಿ.

ಪರಾಗಸ್ಪರ್ಶ : ಪರಾಗದ ವರ್ಗಾವಣೆ :: ಫಲೀಕರಣ : ____________________.

A. ನೀರನ್ನು ಹೀರಿಕೊಳ್ಳುವುದು

B. ಕಾಂಡದ ಬೆಳವಣಿಗೆ

C. ಲಿಂಗಾಣುಗಳ ಸಮ್ಮಿಲನ ✓

D. ಹಣ್ಣು ಮಾಗುವುದು

**Q22** Skeletal & Muscular System

ತೀವ್ರವಾದ ಆಘಾತದ ನಂತರ, ಒಂದು ಹಕ್ಕಿಗೆ ದೇಹದ ಆಧಾರ ಮತ್ತು ಚಲನೆಯಲ್ಲಿ ತೊಂದರೆ ಉಂಟಾಗುತ್ತದೆ. ಯಾವ ಕಶೇರುಕ ವ್ಯವಸ್ಥೆಯು ಮುಖ್ಯವಾಗಿ ಬಾಧಿಸಲ್ಪಟ್ಟಿದೆ?

A. ಆಂತರಿಕ ಅಸ್ಥಿಪಂಜರದ ಚೌಕಟ್ಟು (Internal skeletal framework) ✓

B. ಮೂಲ ಸ್ನಾಯು ಪಟ್ಟಿಗಳು (Basic muscle bands)

C. ಬಾಹ್ಯ ಕಿವಿರುಗಳ ಕಮಾನಿನಂತಹ ರಚನೆಗಳು (External gill arches)

D. ಸರಳ ಜೀರ್ಣಕಾರಿ ಚೀಲ (Simple digestive sac)

Blackbook Vocabulary — Now in the App! ▶ Download Now on Google Play

**Q23** Types (Combination, Decomposition, etc.)

ಹೆಚ್ಚಿನ ವಿಭಜನೆಯ ಕ್ರಿಯೆಗಳನ್ನು ಯಶಸ್ವಿಯಾಗಿ ಪ್ರಾರಂಭಿಸಲು ಯಾವ ಶಕ್ತಿಯ ಮೂಲವು ಅವಶ್ಯಕವಾಗಿದೆ?

A. ವೇಗವರ್ಧಕದ ಉಪಸ್ಥಿತಿ ಮಾತ್ರ

B. ಶಾಖ, ಬೆಳಕು ಅಥವಾ ವಿದ್ಯುತ್ ಶಕ್ತಿ ✓

C. ಯಾಂತ್ರಿಕ ಕಲಕುವ ಬಲ

D. ಕೇವಲ ವಾತಾವರಣದ ಒತ್ತಡ

**Q24** Work, Energy & Power

ಒಂದು ರೋಲರ್ ಕೋಸ್ಟರ್ ಕಾರು ಒಂದು ಪಥದ ಮೂಲಕ ಪ್ರಯಾಣಿಸಲು ಗುರುತ್ವಾಕರ್ಷಣೆಯ ವಿಭವ ಶಕ್ತಿಯನ್ನು ಮಾತ್ರ ಅವಲಂಬಿಸಿದೆ. ಯಾವ ಎಂಜಿನಿಯರಿಂಗ್ ಮಾರ್ಪಾಡು, ಅದರ ಅತ್ಯಂತ ಕಡಿಮೆ ಬಿಂದುವಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಾರಿನ ಗರಿಷ್ಠ ವೇಗವನ್ನು ಗರಿಷ್ಠಗೊಳಿಸುತ್ತದೆ?

A. ಅಡಿಯ ಟ್ರ್ಯಾಕ್ ಅನ್ನು ವಿಶಾಲ ಹಳಿಗಳಿಂದ ಬದಲಾಯಿಸುವುದು

B. ಸಮಾನ ಎತ್ತರದ ದ್ವಿತೀಯ ಬೆಟ್ಟವನ್ನು ರಚಿಸುವುದು

C. ಹೊರೆಯನ್ನು ಹೊಂದಿರುವ ಕಾರಿನ ರಚನಾತ್ಮಕ ದ್ರವ್ಯರಾಶಿಯನ್ನು ಕಡಿಮೆ ಮಾಡುವುದು

D. ಮೊದಲ ಬೆಟ್ಟದ ಆರಂಭಿಕ ಎತ್ತರವನ್ನು ಹೆಚ್ಚಿಸುವುದು ✓

**Q25** pH Scale & Indicators

ಈ ಕೆಳಗಿನವುಗಳಲ್ಲಿ ಯಾವುದನ್ನು ಸಾಮಾನ್ಯವಾಗಿ ಘ್ರಾಣ ಸೂಚಕವಾಗಿ ಬಳಸಲಾಗುತ್ತದೆ?

A. ಫಿನಾಲ್ಥೇಲೀನ್

B. ಲಿಟ್ಮಸ್

C. ಮೀಥೈಲ್ ಆರೆಂಜ್

D. ವೆನಿಲ್ಲ ಸಾರ ✓

Blackbook Vocabulary — Now in the App! ► Download Now on Google Play

## General Science

25 Questions • Answer Key

**Q1** Atomic Structure & Models

ಒಂದೇ ಪರಮಾಣು ಸಂಖ್ಯೆಯನ್ನು ಹೊಂದಿರುವ ಧಾತುಗಳು, ಅವುಗಳ ದ್ರವ್ಯರಾಶಿ ಸಂಖ್ಯೆಗಳು ವಿಭಿನ್ನವಾಗಿದ್ದರೂ ಸಹ, ಅವು ಒಂದೇ ರೀತಿಯ ರಾಸಾಯನಿಕ ಗುಣಲಕ್ಷಣಗಳನ್ನು ಏಕೆ ಪ್ರದರ್ಶಿಸುತ್ತವೆ ಎಂಬುದನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಏಕೆಂದರೆ ಅವು ಒಂದೇ ರೀತಿಯ ಪರಮಾಣು ದ್ರವ್ಯರಾಶಿಯನ್ನು ಹೊಂದಿರುತ್ತವೆ

B. ಏಕೆಂದರೆ ಅವು ಒಂದೇ ಸಂಖ್ಯೆಯ ಪ್ರೋಟಾನ್‌ಗಳು ಮತ್ತು ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತವೆ ✓

C. ಏಕೆಂದರೆ ಅವು ಒಂದೇ ಸಂಖ್ಯೆಯ ನ್ಯೂಟ್ರಾನ್‌ಗಳನ್ನು ಹೊಂದಿರುತ್ತವೆ

D. ಏಕೆಂದರೆ ಅವು ಒಂದೇ ಭೌತ ಸ್ಥಿತಿಯಲ್ಲಿ ಕಂಡುಬರುತ್ತವೆ

**Q2** Atomic Structure & Models

ಬೋರ್-ಬ್ಯೂರಿ ನಿಯಮಗಳ ಪ್ರಕಾರ, ಒಂದು ಪರಮಾಣುವಿನ L ಕವಚದಲ್ಲಿ ಗರಿಷ್ಠ ಎಷ್ಟು ಎಲೆಕ್ಟ್ರಾನುಗಳು ಸ್ಥಳಾವಕಾಶ ಪಡೆಯಲು ಸಾಧ್ಯವಿದೆ?

A. ಹದಿನಾರು ಎಲೆಕ್ಟ್ರಾನ್‌ಗಳು ಮಾತ್ರ

B. ಎಂಟು ಎಲೆಕ್ಟ್ರಾನ್‌ಗಳು ಮಾತ್ರ ✓

C. ಎರಡು ಎಲೆಕ್ಟ್ರಾನ್‌ಗಳು ಮಾತ್ರ

D. ನಾಲ್ಕು ಎಲೆಕ್ಟ್ರಾನ್‌ಗಳು ಮಾತ್ರ

**Q3** Circulatory System (Heart, Blood)

ಮಾನವ ರಕ್ತಪರಿಚಲನಾ ವ್ಯವಸ್ಥೆಯಲ್ಲಿ ಸಂಕೋಚನ ಒತ್ತಡ ಮತ್ತು ವ್ಯಾಕೋಚನ ಒತ್ತಡಗಳನ್ನು ಕೆಳಗಿನ ಯಾವ ಹೇಳಿಕೆಯು ಸರಿಯಾಗಿ ವಿವರಿಸುತ್ತದೆ?

A. ಸಂಕೋಚನವು ಹಿಗ್ಗುವಿಕೆಯಾಗಿದೆ, ವ್ಯಾಕೋಚನವು ಕುಗ್ಗುವಿಕೆಯಾಗಿದೆ

B. ಸಂಕೋಚನವು ಕುಗ್ಗುವಿಕೆಯಾಗಿದೆ, ವ್ಯಾಕೋಚನವು ಹಿಗ್ಗುವಿಕೆಯಾಗಿದೆ ✓

C. ಸಂಕೋಚನ ಮತ್ತು ವ್ಯಾಕೋಚನ ಎರಡೂ ಸಹ ಕುಗ್ಗುವಿಕೆಗಳಾಗಿವೆ

D. ಸಂಕೋಚನ ಮತ್ತು ವ್ಯಾಕೋಚನ ಎರಡೂ ಸಹ ಹಿಗ್ಗುವಿಕೆಗಳಾಗಿವೆ

**Q4** Classification of Organisms

ಹಾರ್ನ್‌ಬಿಲ್ ಪ್ರಭೇದಗಳಲ್ಲಿನ ಆನುವಂಶಿಕ ಹೋಲಿಕೆಯನ್ನು ಅಧ್ಯಯನ ಮಾಡುವ ಸಂಶೋಧಕರು ವರ್ಗೀಕರಣಕ್ಕಾಗಿ ಯಾವ ಗುಣಲಕ್ಷಣವನ್ನು ಹೆಚ್ಚಾಗಿ ಬಳಸುತ್ತಾರೆ?

A. ಕೊಕ್ಕಿನ ಆಕಾರ ಮತ್ತು ಗಾತ್ರ

B. ಡಿಎನ್‌ಎ ಅನುಕ್ರಮಣಿಕೆಯ ಹೋಲಿಕೆ ✓

C. ಗೂಡುಕಟ್ಟುವ ಜಾಗದ ಸ್ಥಳ

D. ಆಹಾರ ಸಂಯೋಜನೆ

**Q5** Current Electricity (Ohm's Law, Circuits)

ತನ್ನ ಮೂಲಕ ವಿದ್ಯುತ್ ಪ್ರವಾಹವು ಹಾದು ಹೋದಾಗ ಹೆಚ್ಚಿನ ಶಾಖವನ್ನು ಉತ್ಪಾದಿಸುವ ತಾಪನ ಅಂಶಗಳನ್ನು ವಿನ್ಯಾಸಗೊಳಿಸಲು ಒಬ್ಬ ತಯಾರಕರು ಬಯಸುತ್ತಾರೆ. ಈ ಉದ್ದೇಶಕ್ಕಾಗಿ ವಸ್ತುವಿನ ಯಾವ ಗುಣವನ್ನು ಗರಿಷ್ಠಗೊಳಿಸಬೇಕು?

A. ನಿರ್ದಿಷ್ಟ ವಿದ್ಯುತ್ ಪ್ರವಾಹಕ್ಕೆ ಶಾಖ ಉತ್ಪಾದನೆಯನ್ನು ಹೆಚ್ಚಿಸಲು ವಾಹಕತೆಯನ್ನು ಗರಿಷ್ಠಗೊಳಿಸಬೇಕು

B. ನಿರ್ದಿಷ್ಟ ವಿದ್ಯುತ್ ಪ್ರವಾಹಕ್ಕೆ ಶಾಖ ಉತ್ಪಾದನೆಯನ್ನು ಹೆಚ್ಚಿಸಲು ರೋಧಶೀಲತೆಯನ್ನು ಕನಿಷ್ಠಗೊಳಿಸಬೇಕು

C. ನಿರ್ದಿಷ್ಟ ವಿದ್ಯುತ್ ಪ್ರವಾಹಕ್ಕೆ ಶಾಖ ಉತ್ಪಾದನೆಯನ್ನು ಹೆಚ್ಚಿಸಲು ರೋಧಶೀಲತೆಯನ್ನು ಗರಿಷ್ಠಗೊಳಿಸಬೇಕು ✓

D. ಗರಿಷ್ಠ ಶಾಖ ಉತ್ಪಾದನೆಗೆ ಶೂನ್ಯ ರೋಧಶೀಲತೆಯನ್ನು ಹೊಂದಿರುವ ವಸ್ತುವನ್ನು ಬಳಸಬೇಕು

**Q6** Current Electricity (Ohm's Law, Circuits)

ಒಂದು ವಿದ್ಯುನ್ಮಂಡದಲ್ಲಿ 4 ಓಮ್‌ಗಳು, 6 ಓಮ್‌ಗಳು ಮತ್ತು 12 ಓಮ್‌ಗಳ ಮೂರು ರೋಧಕಗಳನ್ನು ಸಮಾಂತರವಾಗಿ ಸಂಪರ್ಕಿಸಲಾಗಿದೆ. ಒಟ್ಟು ರೋಧಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

A. ಒಟ್ಟು ರೋಧವು ಪ್ರತ್ಯೇಕ ರೋಧಗಳಲ್ಲಿ ಒಂದು ರೋಧಕ್ಕೆ ಸಮನಾಗಿರುತ್ತದೆ

B. ಒಟ್ಟು ರೋಧವು ಅತಿ ಹೆಚ್ಚಿನ ರೋಧ ಹೊಂದಿರುವ ಪ್ರತ್ಯೇಕ ರೋಧಕ್ಕೆ ಸಮನಾಗಿರುತ್ತದೆ

C. ಒಟ್ಟು ರೋಧವು ಎಲ್ಲಾ ರೋಧಗಳ ಮೊತ್ತಕ್ಕೆ ಸಮನಾಗಿರುತ್ತದೆ

D. ಒಟ್ಟು ರೋಧವು ಅತಿ ಕಡಿಮೆ ರೋಧ ಹೊಂದಿರುವ ಪ್ರತ್ಯೇಕ ರೋಧಕ್ಕಿಂತ ಕಡಿಮೆಯಾಗಿರುತ್ತದೆ ✓

Blackbook Vocabulary — Now in the App! ► Download Now on Google Play
generated by rank.qmaths.in

**Q7** Ecosystem & Food Chain

ಆಹಾರ ಸರಪಳಿಗಳು ಸಾಮಾನ್ಯವಾಗಿ ಕೇವಲ 3-4 ಪೋಷಣಾ ಸ್ತರಗಳಿಂದ ಏಕೆ ರೂಪುಗೊಂಡಿರುತ್ತವೆ?

- A. ಮುಂದಿನ ಪೋಷಣಾ ಸ್ತರಕ್ಕೆ ಶಕ್ತಿಯ ಲಭ್ಯತೆ ತುಂಬಾ ಕಡಿಮೆ ✓
- B. ಆಹಾರ ಸರಪಳಿಯನ್ನು ವಿಘಟಕಗಳು ಕೊನೆಗೊಳಿಸುತ್ತವೆ
- C. ಉನ್ನತ ಮಾಂಸಾಹಾರಿಗಳನ್ನು ಯಾವುದೇ ಜೀವಿಯು ತಿನ್ನಲು ಸಾಧ್ಯವಿಲ್ಲ
- D. ಉತ್ಪಾದಕರ ಸಂಖ್ಯೆ ಕಡಿಮೆ

**Q8** Global Warming & Climate Change

ಬುಧವು ಸೂರ್ಯನಿಗೆ ಹತ್ತಿರವಾಗಿದ್ದರೂ ಸಹ, ಶುಕ್ರವು ಬುಧಕ್ಕಿಂತ ಹೆಚ್ಚು ಬಿಸಿಯಾಗಿರುತ್ತದೆ. ಭೂಮಿಯ ವಾತಾವರಣದ ವಿಜ್ಞಾನವನ್ನು ಆಧರಿಸಿ, ಯಾವುದು ಅತ್ಯಂತ ಸಮರ್ಥನೀಯವಾದ ವಿವರಣೆಯಾಗಿದೆ?

- A. ಬುಧವು ಸೂರ್ಯನ ಹತ್ತಿರ ಇರುವುದರಿಂದ ತ್ವರಿತ ಶಾಖದ ನಷ್ಟ ಉಂಟಾಗುತ್ತದೆ
- B. ಬುಧವು ಯಾವುದೇ ಗಮನಾರ್ಹ ವಾತಾವರಣದ ಪದರಗಳನ್ನು ಹೊಂದಿಲ್ಲ
- C. ಶುಕ್ರವು ತನ್ನ ಗಾತ್ರದ ಕಾರಣದಿಂದಾಗಿ ಹೆಚ್ಚು ಸೂರ್ಯನ ಬೆಳಕನ್ನು ಪಡೆಯುತ್ತದೆ
- D. ಶುಕ್ರನ ವಾತಾವರಣವು ಬಲವಾದ ಹಸಿರುಮನೆ ಪರಿಣಾಮವನ್ನು ಉಂಟುಮಾಡುತ್ತದೆ ✓

**Q9** Human Body & Physiology

ಈ ಕೆಳಗಿನವುಗಳಲ್ಲಿ ಯಾವುದು ಎಪಿತೀಲಿಯಲ್ ಅಂಗಾಂಶಗಳ **ಕಾರ್ಯವಲ್ಲ?**

- A. ಹೀರಿಕೊಳ್ಳುವಿಕೆ
- B. ಕೆಂಪು ರಕ್ತ ಕಣಗಳ ರಚನೆ ✓
- C. ಸ್ರವಿಸುವಿಕೆ
- D. ರಕ್ಷಣೆ

**Q10** Human Eye & Defects

ಕಣ್ಣಿನ ಮಸೂರವು ತನ್ನ ಸಂಗಮ ದೂರವನ್ನು ಹೊಂದಿಸಿಕೊಳ್ಳುವ ಸಾಮರ್ಥ್ಯವನ್ನು ಏನೆಂದು ಕರೆಯುತ್ತಾರೆ?

- A. ದೃಷ್ಟಿ ನಿರಂತರತೆ
- B. ವಕ್ರೀಭವನ
- C. ಸರಿಹೊಂದಿಸಿಕೊಳ್ಳುವ ಸಾಮರ್ಥ್ಯ ✓
- D. ಸಮೀಪದೃಷ್ಟಿದೋಷ

**Q11** Hydrocarbons (Methane, Ethane, etc.)

ಕೆಳಗಿನ ಎರಡು ಹೇಳಿಕೆಗಳನ್ನು ಗಮನವಿಟ್ಟು ಓದಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ:
ಹೇಳಿಕೆ I: ಮೀಥೇನ್ ಸೂರ್ಯನ ಬೆಳಕಿನ ಉಪಸ್ಥಿತಿಯಲ್ಲಿ ಕ್ಲೋರಿನ್‌ನೊಂದಿಗೆ ವರ್ತಿಸಿದಾಗ, ಮೀಥೇನ್‌ನಲ್ಲಿರುವ ಹೈಡ್ರೋಜನ್ ಪರಮಾಣುಗಳು ಕ್ರಮೇಣ ಕ್ಲೋರಿನ್ ಪರಮಾಣುಗಳಿಂದ ಬದಲಾಯಿಸಲ್ಪಡುತ್ತವೆ.
ಹೇಳಿಕೆ II: ಮೀಥೇನ್ ಮತ್ತು ಕ್ಲೋರಿನ್ ನಡುವಿನ ಕ್ರಿಯೆಯನ್ನು ಸಂಕಲನ ಕ್ರಿಯೆ ಎಂದು ಕರೆಯಲಾಗುತ್ತದೆ.

- A. ಹೇಳಿಕೆ I ಮಾತ್ರ ಸರಿಯಾಗಿದೆ ✓
- B. ಎರಡೂ ಹೇಳಿಕೆಗಳು ತಪ್ಪಾಗಿವೆ
- C. ಹೇಳಿಕೆ II ಮಾತ್ರ ಸರಿಯಾಗಿದೆ
- D. ಎರಡೂ ಹೇಳಿಕೆಗಳು ಸರಿಯಾಗಿವೆ

**Q12** Mechanics

ಏಕರೂಪದ ವೃತ್ತೀಯ ಚಲನೆಗೆ ಒಳಗಾಗುವ ಒಂದು ವಸ್ತುವಿನ ವೇಗವನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ವೃತ್ತದ ಸುತ್ತಲೂ ಚಲಿಸುವಾಗ ವಸ್ತುವಿನ ವೇಗವು ಹೆಚ್ಚಾಗುತ್ತದೆ ಮತ್ತು ಕಡಿಮೆಯಾಗುತ್ತದೆ
- B. ಚಲನೆಯ ಉದ್ದಕ್ಕೂ ವೇಗವು ಪರಿಮಾಣ ಮತ್ತು ದಿಕ್ಕಿನಲ್ಲಿ ಬದಲಾಗದೆ ಉಳಿಯುತ್ತದೆ
- C. ವೇಗದ ಪರಿಮಾಣವು ಸ್ಥಿರವಾಗಿರುತ್ತದೆ, ಆದರೆ ವೃತ್ತದ ಸುತ್ತಲೂ ಅದರ ದಿಕ್ಕು ನಿರಂತರವಾಗಿ ಬದಲಾಗುತ್ತದೆ ✓
- D. ವಸ್ತುವು ಸರಳ ಪಥದ ಉದ್ದಕ್ಕೂ ಬದಲಾಗುತ್ತಿರುವ ವೇಗದಲ್ಲಿ ಚಲಿಸುತ್ತದೆ

**Q13** Mechanics

ಏಕರೂಪದ ಜವದಲ್ಲಿ ಚಲಿಸುತ್ತಿರುವ ಒಂದು ವಸ್ತುವಿನ ದೂರ-ಕಾಲ ನಕ್ಷೆಯಲ್ಲಿ ಮೇಲ್ಮುಖವಾಗಿ ಓರೆಯಾಗಿರುವ ಒಂದು ಸರಳ ರೇಖೆಯನ್ನು ಕುರಿತು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ವಸ್ತುವು ಸಮಾನ ಕಾಲಾವಧಿಯಲ್ಲಿ ಸಮಾನ ದೂರವನ್ನು ಕ್ರಮಿಸುತ್ತದೆ ✓
- B. ವಸ್ತುವು ವಿಭಿನ್ನ ಜವದಲ್ಲಿ ಉದ್ದಕ್ಕೂ ಚಲಿಸುತ್ತದೆ
- C. ವಸ್ತುವು ಎಲ್ಲಾ ಸಮಯದಲ್ಲೂ ಸ್ಥಿರವಾಗಿರುತ್ತದೆ
- D. ವಸ್ತುವು ಪದೇ ಪದೇ ತನ್ನ ಆರಂಭಿಕ ಬಿಂದುವಿಗೆ ಹಿಂದಿರುಗುತ್ತದೆ

Blackbook Vocabulary — Now in the App! ▶ Download Now on Google Play

**Q14** Mixtures, Solutions, Colloids

ಈ ಕೆಳಗಿನವುಗಳಲ್ಲಿ ಯಾವುದು ನಿಲಂಬನದ (suspension) ಯ ವಿಶಿಷ್ಟ ಲಕ್ಷಣವಾಗಿದೆ?

A. ಇದು ಸಮರೂಪದ ಮಿಶ್ರಣವಾಗಿದ್ದು, ದ್ರಾವ್ಯವು ಏಕರೂಪವಾಗಿ ಕರಗುತ್ತದೆ

B. ಕಣಗಳು ತಳದಲ್ಲಿ ನಿಲ್ಲುವುದಿಲ್ಲ ಏಕೆಂದರೆ ಅವು ತುಂಬಾ ಚಿಕ್ಕದಾಗಿರುತ್ತವೆ

C. ಕಣಗಳನ್ನು ಬರಿಗಣ್ಣಿನಿಂದ ನೋಡಬಹುದು ಮತ್ತು ಅವು ತಳದಲ್ಲಿ ನಿಲ್ಲಬಹುದು ✓

D. ನಿಲಂಬನವು ಟಿಂಡಾಲ್ ಪರಿಣಾಮವನ್ನು ತೋರಿಸುತ್ತದೆ ಆದರೆ ಪಾರದರ್ಶಕವಾಗಿರುತ್ತದೆ

**Q15** Nervous System & Brain

ಡೆಂಡ್ರೈಟ್ ಮಾಹಿತಿಯನ್ನು ಸ್ವೀಕರಿಸಿದ ನಂತರ, ಆವೇಗವು ಮುಂದಿನ ಯಾವ ರಚನೆಗೆ ಚಲಿಸುತ್ತದೆ?

A. ಆಕ್ಸಾನ್

B. ಆಕ್ಸಾನ್ ತುದಿ

C. ಡೆಂಡ್ರೈಟ್

D. ಕೋಶ ಕಾಯ ✓

**Q16** Properties & Tests

ಪ್ರತ್ಯಾಮ್ಲೀಯ ದ್ರಾವಣಗಳು ನೀರಿನಲ್ಲಿ ಕರಗಿದಾಗ ಏಕೆ ವಿದ್ಯುತ್ ಅನ್ನು ಹರಿಯಗೊಡುತ್ತವೆ?

A. ಪ್ರತ್ಯಾಮ್ಲಗಳು ಮುಕ್ತ ಎಲೆಕ್ಟ್ರಾನ್ ಗಳನ್ನು ಬಿಡುಗಡೆ ಮಾಡುತ್ತವೆ

B. ಪ್ರತ್ಯಾಮ್ಲಗಳು ಅಯಾನುಗಳಿಲ್ಲದೆ ಸಂಪೂರ್ಣವಾಗಿ ಕರಗುತ್ತವೆ

C. ಹೈಡ್ರಾಕ್ಸೈಡ್ ಅಯಾನುಗಳು ಆವೇಶ ವಾಹಕಗಳಾಗಿ ಕಾರ್ಯನಿರ್ವಹಿಸುತ್ತವೆ ✓

D. ಉಷ್ಣ ಶಕ್ತಿಯು ವಿದ್ಯುತ್ ಪ್ರವಾಹವನ್ನು ಉತ್ಪಾದಿಸುತ್ತದೆ

**Q17** Reflection & Refraction

ನೀರಿನಲ್ಲಿ ಭಾಗಶಃ ಮುಳುಗಿಸಿದ ಪೆನ್ಸಿಲ್ ಮೇಲ್ಮೈಯಲ್ಲಿ ಬಾಗಿದಂತೆ ಏಕೆ ಕಾಣುತ್ತದೆ ಎಂಬುದನ್ನು ಈ ಕೆಳಗಿನ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಬೆಳಕು ಗಾಳಿಯಿಂದ ನೀರಿಗೆ ಚಲಿಸುವಾಗ ದಿಕ್ಕನ್ನು ಬದಲಾಯಿಸುತ್ತದೆ ✓

B. ಪೆನ್ಸಿಲ್ ಬೆಳಕನ್ನು ಹೀರಿಕೊಳ್ಳುತ್ತದೆ ಮತ್ತು ಅದನ್ನು ಬೇರೆ ಕೋನದಲ್ಲಿ ಹೊರಹಾಕುತ್ತದೆ

C. ನೀರು ಪೆನ್ಸಿಲ್ ಅನ್ನು ದಪ್ಪವಾಗಿ ಕಾಣುವಂತೆ ಮಾಡುತ್ತದೆ

D. ಬೆಳಕು ಪೆನ್ಸಿಲ್‌ನಿಂದ ಪ್ರತಿಫಲಿಸುತ್ತದೆ ಮತ್ತು ನಿಮ್ಮ ಕಣ್ಣುಗಳಿಗೆ ಹಿಂತಿರುಗುತ್ತದೆ

**Q18** Reproductive System

ಒಂದು ಕೊಳದಲ್ಲಿ ಹೆಣ್ಣು ಕಪ್ಪೆಯೊಂದು ಇಡುವ ಜೆಲ್ಲಿ ತರಹದ ಮೊಟ್ಟೆಗಳ ದೊಡ್ಡ ಗುಚ್ಛವೊಂದು ಇರುತ್ತವೆ. ಕಪ್ಪೆಗಳಲ್ಲಿ ಫಲೀಕರಣದ ಸಂಭಾವ್ಯ ವಿಧಾನ ಯಾವುದು?

A. ವಿಜ್ಞಾನಿಗಳಿಂದ ಪ್ರನಾಳೀಯ ಫಲೀಕರಣ

B. ನೀರಿನಲ್ಲಿ ಬಾಹ್ಯ ಫಲೀಕರಣ ✓

C. ಜೆಲ್ಲಿ ತರಹದ ಮೊಟ್ಟೆಗಳ ಅಲೈಂಗಿಕ ಮೊಗ್ಗುವಿಕೆ

D. ಕೊಳದ ಸಸ್ಯಗಳ ಒಳಗಿನ ಆಂತರಿಕ ಫಲೀಕರಣ

**Q19** Respiratory System

ಜೀವಿಗಳು ಆಮ್ಲಜನಕವನ್ನು ಸೇವಿಸಿ, ಜೀವಕೋಶದ ಚಟುವಟಿಕೆಗಳಿಗಾಗಿ ಆಹಾರವನ್ನು ವಿಭಜಿಸಲು ಅದನ್ನು ಬಳಸಿಕೊಳ್ಳುವ ಪ್ರಕ್ರಿಯೆಯನ್ನು ಏನೆಂದು ಕರೆಯುತ್ತಾರೆ?

A. ಬಾಷ್ಪೀಕರಣ

B. ದ್ಯುತಿಸಂಶ್ಲೇಷಣೆ

C. ಉಸಿರಾಟ ✓

D. ಹುದುಗುವಿಕೆ

**Q20** Soaps & Detergents

ಸಾಬೂನು ರಚನೆಗೆ ಸಾಬೂನೀಕರಣವು ಹೇಗೆ ಸಂಬಂಧಿಸಿದೆ?

A. ಸಾಬೂನೀಕರಣವು ದೀರ್ಘ ಸರಪಳಿ ಕಾರ್ಬಾಕ್ಸಿಲಿಕ್ ಆಮ್ಲಗಳ ಸೋಡಿಯಂ ಅಥವಾ ಪೊಟ್ಯಾಸಿಯಮ್ ಲವಣಗಳನ್ನು ಉತ್ಪತ್ತಿ ಮಾಡುತ್ತದೆ, ಅವು ಸಾಬೂನುಗಳಾಗಿವೆ ✓

B. ಸಾಬೂನೀಕರಣವು ಶುಚೀಕರಣಕ್ಕಾಗಿ ಎಥೆನಾಲ್ ಅನ್ನು ತಯಾರಿಸುತ್ತದೆ

C. ಸಾಬೂನೀಕರಣವು ಸುವಾಸನೆಯಲ್ಲಿ ಬಳಸುವ ಎಸ್ಟರ್‌ಗಳನ್ನು ಮಾತ್ರ ಉತ್ಪಾದಿಸುತ್ತದೆ

D. ಸಾಬೂನೀಕರಣವು ಸಾಬೂನು ಉತ್ಪಾದನೆಗೆ ಸಂಬಂಧಿಸಿಲ್ಲ

**Q21** Types (Combination, Decomposition, etc.)

ಈ ಕ್ರಿಯೆಯನ್ನು ಪರಿಗಣಿಸಿ:

$Na_2SO_4(aq) + BaCl_2(aq) \rightarrow BaSO_4(s) + 2NaCl(aq)$

ಈ ಕ್ರಿಯೆಯನ್ನು ದ್ವಿಸ್ಥಾನಪಲ್ಲಟ ಕ್ರಿಯೆ ಎಂದು ವರ್ಗೀಕರಿಸುವುದನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ಸಮರ್ಥಿಸುತ್ತದೆ?

A. ಶಾಖವು ಸಂಯುಕ್ತವು ಉತ್ಪನ್ನಗಳಾಗಿ ವಿಭಜಿಸಲು ಕಾರಣವಾಗುತ್ತದೆ

B. ಒಂದು ಲೋಹವು ಇನ್ನೊಂದನ್ನು ಸಂಯುಕ್ತದಿಂದ ಸ್ಥಾನಪಲ್ಲಟಗೊಳಿಸುತ್ತದೆ

C. ಪ್ರತಿವರ್ತಕಗಳು ಸಂಯೋಜನೆಗೊಂಡು ಒಂದೇ ಉತ್ಪನ್ನವನ್ನು ರೂಪಿಸುತ್ತವೆ

D. ಅಯಾನುಗಳ ವಿನಿಮಯವು ಎರಡು ಹೊಸ ಸಂಯುಕ್ತಗಳನ್ನು ಉತ್ಪಾದಿಸುತ್ತದೆ ✓

Blackbook Vocabulary — Now in the App! ▶ Download Now on Google Play

**Q22** Types (Combination, Decomposition, etc.)

ಒಬ್ಬ ವಿದ್ಯಾರ್ಥಿಯು ನೀಲಿ ಬಣ್ಣದ ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಒಂದು ಕಬ್ಬಿಣದ ಮೊಳೆಯನ್ನು ಅದ್ದುತ್ತಾನೆ. 30 ನಿಮಿಷಗಳ ನಂತರ, ನೀಲಿ ಬಣ್ಣವು ಮಸುಕಾಗುತ್ತದೆ ಮತ್ತು ಮೊಳೆಯ ಮೇಲೆ ಕೆಂಪು-ಕಂದು ಬಣ್ಣದ ನಿಕ್ಷೇಪವು ರೂಪುಗೊಳ್ಳುತ್ತದೆ. ಈ ಕೆಂಪು-ಕಂದು ನಿಕ್ಷೇಪವು ಮೂಡಲು _______ ಕಾರಣವಾಗಿದೆ.

- A. ತಾಮ್ರದ ಸಲ್ಫೇಟ್ ಕಬ್ಬಿಣದ ಆಕ್ಸೈಡ್ (ತುಕ್ಕು) ಆಗಿ ಪರಿವರ್ತನೆಗೊಳ್ಳುವುದು
- B. ತಾಮ್ರದ ಸಲ್ಫೇಟ್ Cu+ಆಗಿ ಪರಿವರ್ತನೆಗೊಳ್ಳುವುದು
- C. Fe ಯು ತಾಮ್ರದ ಆಕ್ಸೈಡ್ ಆಗಿ ಪರಿವರ್ತನೆ ಆಗುತ್ತಿರುವುದು
- D. ತಾಮ್ರದ ಸಲ್ಫೇಟ್ ಲೋಹೀಯ ತಾಮ್ರವಾಗಿ ಪರಿವರ್ತನೆಗೊಳ್ಳುವುದು ✓

**Q23** Ultrasound & Applications

ಆಭರಣಗಳಂತಹ ಸೂಕ್ಷ್ಮ ವಸ್ತುಗಳನ್ನು ಸ್ವಚ್ಛಗೊಳಿಸಲು ಅಲ್ಟ್ರಾಸೌಂಡ್ ತರಂಗಗಳನ್ನು ಏಕೆ ಬಳಸಲಾಗುತ್ತದೆ?

- A. ಅವು ಕಾಂತತ್ವದೊಂದಿಗೆ ಕೊಳಕಿನ ಕಣಗಳನ್ನು ಆಕರ್ಷಿಸುತ್ತವೆ
- B. ಅವು ವಿಶೇಷ ರಾಸಾಯನಿಕಗಳನ್ನು ಬಳಸಿ ಕೊಳೆಯನ್ನು ಕರಗಿಸುತ್ತವೆ
- C. ಅವು ಕಲೆಗಳನ್ನು ತೆಗೆದುಹಾಕಲು ಆಭರಣಗಳನ್ನು ಬಿಸಿಮಾಡುತ್ತವೆ
- D. ಅವು ಸಣ್ಣ ಕಂಪನಗಳನ್ನು ಉಂಟುಮಾಡುತ್ತವೆ, ಆ ಕಂಪನಗಳು ಕೊಳೆಯನ್ನು ಹೊರಹಾಕುತ್ತವೆ ✓

**Q24** Work, Energy & Power

ಒಂದು ವೇಳೆ ಸ್ಥಿರ ಬಲವು ಬದಲಾಗದೆ ಇರುವಾಗ ವಸ್ತುವಿನ ಸ್ಥಾನಪಲ್ಲಟವು ದ್ವಿಗುಣಗೊಂಡರೆ, ಬಲ–ಸ್ಥಾನಪಲ್ಲಟ ನಕ್ಷೆಯ ಅಡಿಯಲ್ಲಿರುವ ವಿಸ್ತೀರ್ಣವು ________ ಆಗುತ್ತದೆ.

- A. ಮೂಲ ವಿಸ್ತೀರ್ಣದ ನಾಲ್ಕು ಪಟ್ಟು ಆಗುತ್ತದೆ
- B. ಮೂಲ ವಿಸ್ತೀರ್ಣದ ಎರಡು ಪಟ್ಟು ಆಗುತ್ತದೆ ✓
- C. ಬದಲಾಗದೆ ಉಳಿಯುತ್ತದೆ
- D. ಮೂಲ ವಿಸ್ತೀರ್ಣದ ಅರ್ಧದಷ್ಟು ಆಗುತ್ತದೆ

**Q25** Work, Energy & Power

ಒಂದು ಯಂತ್ರವು 10 W ಶಕ್ತಿ(power)ಯನ್ನು ಹೊಮ್ಮಿಸುತ್ತದೆ. ಇದು ಏನನ್ನು ಸೂಚಿಸುತ್ತದೆ?

- A. ಇದು ಪ್ರತಿ ನಿಮಿಷಕ್ಕೆ 10 J ಕೆಲಸವನ್ನು ಮಾಡುತ್ತದೆ
- B. ಇದು 10 N ಬಲವನ್ನು ಪ್ರಯೋಗಿಸುತ್ತದೆ
- C. ಇದು ಪ್ರತಿ ಸೆಕೆಂಡಿಗೆ 10 J ಕೆಲಸವನ್ನು ಮಾಡುತ್ತದೆ ✓
- D. ಇದು 10 J ಶಕ್ತಿಯನ್ನು ಸಂಗ್ರಹಿಸುತ್ತದೆ

Blackbook Vocabulary — Now in the App! ▶ Download Now on Google Play

## General Science

25 Questions • Answer Key

**Q1** Atomic Structure & Models

ದ್ರವ್ಯರಾಶಿ ಸಂಖ್ಯೆಯ ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ?

- A. ಅದು ಯಾವಾಗಲೂ ಪರಮಾಣು ಸಂಖ್ಯೆಗಿಂತ ಹೆಚ್ಚಾಗಿರುತ್ತದೆ ✓
- B. ಅದು ಯಾವಾಗಲೂ ಪರಮಾಣು ಸಂಖ್ಯೆಗೆ ಸಮನಾಗಿರುತ್ತದೆ
- C. ಅದು ಪರಮಾಣು ಸಂಖ್ಯೆಗೆ ಸಂಬಂಧಿಸಿಲ್ಲ
- D. ಅದು ಯಾವಾಗಲೂ ಪರಮಾಣು ಸಂಖ್ಯೆಗಿಂತ ಕಡಿಮೆಯಿರುತ್ತದೆ

**Q2** Atoms & Molecules

16 g ಆಮ್ಲಜನಕವನ್ನು 2 g ಜಲಜನಕದೊಂದಿಗೆ ಸಂಯೋಜಿಸಿದಾಗ, 18 g ನೀರು ರೂಪುಗೊಳ್ಳುತ್ತದೆ. ಈ ಅವಲೋಕನವು ಈ ಕೆಳಗಿನ ಯಾವುದರ ಅನುಗುಣವಾಗಿದೆ?

- A. ಅವಗಾಡ್ರೊನ ನಿಯಮ
- B. ದ್ರವ್ಯರಾಶಿಯ ಸಂರಕ್ಷಣೆಯ ನಿಯಮ ✓
- C. ಬಹು ಅನುಪಾತಗಳ ನಿಯಮ
- D. ಗೇ-ಲುಸಾಕ್ ನ ನಿಯಮ

**Q3** Basic Organic Chemistry

ಈ ಕೆಳಗಿನ ಯಾವ ಇಂಗಾಲದ ಸಂಯುಕ್ತವು ಪ್ರಕಾಶಮಾನವಲ್ಲದ ಜ್ವಾಲೆಯೊಂದಿಗೆ ಉರಿಯುವ ಸಾಧ್ಯತೆ ಹೆಚ್ಚು?

- A. ಎಥೆನಾಲ್ ✓
- B. ಸೀಮೆಎಣ್ಣೆ
- C. ಇದ್ದಿಲು
- D. ಕರ್ಪೂರ

**Q4** Biology

ಪೋಷಣೆ, ಉಸಿರಾಟ, ಸಾಗಾಣಿಕೆ ಮತ್ತು ವಿಸರ್ಜನೆ ಮುಂತಾದ ಜೀವ ಕ್ರಿಯೆಗಳು ಸಜೀವಿಗಳಿಗೆ ಏಕೆ ಅತ್ಯಗತ್ಯವಾಗಿವೆ ಎಂಬುದನ್ನು ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ವಿವರಿಸುತ್ತದೆ?

- A. ಅವು ದ್ಯುತಿಸಂಶ್ಲೇಷಣೆಯನ್ನು (photosynthesis) ನಿರ್ವಹಿಸಲು ಸಸ್ಯಗಳಲ್ಲಿ ಮಾತ್ರ ಸಂಭವಿಸುತ್ತವೆ.
- B. ಅವು ಪರಸ್ಪರ ಪ್ರಭಾವ ಬೀರದ ಸ್ವತಂತ್ರ ಪ್ರಕ್ರಿಯೆಗಳಾಗಿವೆ.
- C. ಅವು ಕೇವಲ ಬೆಳವಣಿಗೆ ಮತ್ತು ಸಂತಾನೋತ್ಪತ್ತಿಗೆ ಅಗತ್ಯವಾಗಿವೆ.
- D. ಅವು ಸಮತೋಲನೆಯನ್ನು ನಿರ್ವಹಿಸುತ್ತವೆ ಮತ್ತು ಶಕ್ತಿಯನ್ನು ಒದಗಿಸುತ್ತವೆ. ✓

**Q5** Classification of Organisms

ಒಂದು ಆನುವಂಶಿಕ ಅಧ್ಯಯನದ ನಂತರ, ಹಿಂದೆ ಗುಂಪು ಮಾಡಲಾದ ಎರಡು ಬ್ಯಾಕ್ಟೀರಿಯಾಗಳು ಹೆಚ್ಚು ವಿಭಿನ್ನವಾದ DNA ಯನ್ನು ಹೊಂದಿರುವುದು ಕಂಡುಬಂದಿದೆ. ಆಧುನಿಕ ವರ್ಗೀಕರಣದ ಪ್ರಕಾರ, ಈ ಕೆಳಗಿನವುಗಳಲ್ಲಿ ಯಾವುದು ಹೆಚ್ಚು ಸಂಭವನೀಯ ಪರಿಣಾಮವಾಗಿದೆ?

- A. ಅವುಗಳನ್ನು ಪ್ರತ್ಯೇಕ ವಲಯಗಳು ಅಥವಾ ಗುಂಪುಗಳಾಗಿ ಮರುವರ್ಗೀಕರಿಸಬಹುದು ✓
- B. ಅವು ಒಂದೇ ಸಾಂಪ್ರದಾಯಿಕ ಗುಂಪಿನಲ್ಲಿ ಉಳಿದಿವೆ
- C. ಅವುಗಳನ್ನು ಒಂದೇ ಪ್ರಭೇದವಾಗಿ ವಿಲೀನಗೊಳಿಸಲಾಗಿದೆ
- D. ಅವುಗಳ ಹೋಲಿಕೆಯನ್ನು ಸಾಂಪ್ರದಾಯಿಕ ಗುಣಲಕ್ಷಣಗಳಿಂದ ದೃಢಪಡಿಸಲಾಗುತ್ತದೆ

**Q6** Current Electricity (Ohm's Law, Circuits)

ಒಬ್ಬ ವಿದ್ಯಾರ್ಥಿಯು ಎರಡು ಸರ್ಕ್ಯೂಟ್‌ಗಳನ್ನು ವ್ಯವಸ್ಥೆಗೊಳಿಸುತ್ತಾನೆ: ಸರ್ಕ್ಯೂಟ್ X ಗೆ ತೆಳುವಾದ, ಉದ್ದವಾದ ತಾಮ್ರದ ತಂತಿಯನ್ನು ಬಳಸುತ್ತಾನೆ ಮತ್ತು ಸರ್ಕ್ಯೂಟ್ Y ಗೆ ದಪ್ಪ, ಕಡಿಮೆ ಉದ್ದದ ತಾಮ್ರದ ತಂತಿಯನ್ನು ಬಳಸುತ್ತಾನೆ. ಎರಡನ್ನೂ ಸಹ ಒಂದೇ ರೀತಿಯ ಬ್ಯಾಟರಿಗಳಿಗೆ ಸಂಪರ್ಕಿಸಲಾಗಿದೆ. ಯಾವ ಸರ್ಕ್ಯೂಟ್ ಹೆಚ್ಚಿನ ರೋಧವನ್ನು ಹೊಂದಿರುತ್ತದೆ ಮತ್ತು ಏಕೆ?

- A. ಸರ್ಕ್ಯೂಟ್ X, ಏಕೆಂದರೆ ರೋಧವು ಉದ್ದಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ ಮತ್ತು ಅಡ್ಡ-ಛೇದದ ವಿಸ್ತೀರ್ಣಕ್ಕೆ ಅನುಗುಣವಾಗಿ ಕಡಿಮೆಯಾಗುತ್ತದೆ ✓
- B. ಸರ್ಕ್ಯೂಟ್ Y, ಏಕೆಂದರೆ ರೋಧವು ಉದ್ದಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ ಮತ್ತು ಅಡ್ಡ-ಛೇದದ ವಿಸ್ತೀರ್ಣಕ್ಕೆ ಅನುಗುಣವಾಗಿ ಕಡಿಮೆಯಾಗುತ್ತದೆ
- C. ಸರ್ಕ್ಯೂಟ್ X, ಏಕೆಂದರೆ ರೋಧವು ಉದ್ದಕ್ಕೆ ಅನುಗುಣವಾಗಿ ಕಡಿಮೆಯಾಗುತ್ತದೆ ಮತ್ತು ಅಡ್ಡ-ಛೇದದ ವಿಸ್ತೀರ್ಣಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ
- D. ಸರ್ಕ್ಯೂಟ್ Y, ಏಕೆಂದರೆ ರೋಧವು ಉದ್ದಕ್ಕೆ ಅನುಗುಣವಾಗಿ ಕಡಿಮೆಯಾಗುತ್ತದೆ ಮತ್ತು ಅಡ್ಡ-ಛೇದದ ವಿಸ್ತೀರ್ಣಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ

**Q7** Ecosystem & Food Chain

ಒಂದು ಪರಿಸರ ವ್ಯವಸ್ಥೆಯಲ್ಲಿ, ವಿಭಜಕಗಳು ವಹಿಸುವ ಪಾತ್ರವೇನು?

- A. ಅವು ಆಹಾರವನ್ನು ದ್ಯುತಿಸಂಶ್ಲೇಷಣೆಯ ಮೂಲಕ ಸಂಶ್ಲೇಷಿಸುತ್ತವೆ
- B. ಅವು ನಿರ್ಜೀವ ಸಾವಯವ ವಸ್ತುವನ್ನು ವಿಭಜಿಸುತ್ತವೆ ✓
- C. ಅವು ಮಣ್ಣಿನಲ್ಲಿ ನೀರಿನ ಮಟ್ಟವನ್ನು ನಿಯಂತ್ರಿಸುತ್ತವೆ
- D. ಅವು ಮಾಂಸಾಹಾರಿಗಳಿಗೆ ನೇರವಾಗಿ ಶಕ್ತಿಯನ್ನು ವರ್ಗಾಯಿಸುತ್ತವೆ

Blackbook Vocabulary — Now in the App! ▶ Download Now on Google Play

**Q8** Household Wiring & Safety

ಗೃಹಬಳಕೆಯ ಸರ್ಕ್ಯೂಟ್‌ಗಳಲ್ಲಿ ಪ್ರಮುಖವಾಗಿ ಯಾವ ಕಾರಣಕ್ಕಾಗಿ ವಿದ್ಯುತ್ ಫ್ಯೂಸ್‌ಗಳನ್ನು ಬಳಸಲಾಗುತ್ತದೆ?

A. ಸರ್ಕ್ಯೂಟ್‌ನಲ್ಲಿ ವೋಲ್ಟೇಜ್ ಅನ್ನು ಕಡಿಮೆ ಮಾಡುವುದು

B. ಅತಿಯಾದ ವಿದ್ಯುತ್ ಪ್ರವಾಹ ಉಂಟಾದಲ್ಲಿ ಸರ್ಕ್ಯೂಟ್ ಅನ್ನು ಅಡ್ಡಿಪಡಿಸುವುದು ✓

C. ಅಗತ್ಯವಿದ್ದಾಗ ಹೆಚ್ಚುವರಿ ವಿದ್ಯುತ್ ಪೂರೈಸುವುದು

D. ನಂತರದ ಬಳಕೆಗಾಗಿ ವಿದ್ಯುತ್ ಶಕ್ತಿಯನ್ನು ಸಂಗ್ರಹಿಸುವುದು

**Q9** Light & Optics

ವಾತಾವರಣದ ಕಣಗಳ ಗಾತ್ರವು ಸೂರ್ಯನ ಬೆಳಕಿನ ಚದುರುವಿಕೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

A. ಅನಿಯಮಿತ ಕಣಗಳು ಹಳದಿ ಬೆಳಕನ್ನು ಮಾತ್ರ ಹೆಚ್ಚು ಚದುರಿಸುತ್ತವೆ

B. ದೊಡ್ಡ ಕಣಗಳು ಕೆಂಪು ಬೆಳಕನ್ನು ಮಾತ್ರ ಪರಿಣಾಮಕಾರಿಯಾಗಿ ಚದುರುತ್ತವೆ

C. ಸಣ್ಣ ಕಣಗಳು ಕಡಿಮೆ ತರಂಗಾಂತರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಚದುರುತ್ತವೆ ✓

D. ಮಧ್ಯಮ ಕಣಗಳು ಹಸಿರು ಬೆಳಕನ್ನು ಮಾತ್ರ ಪರಿಣಾಮಕಾರಿಯಾಗಿ ಚದುರಿಸುತ್ತವೆ

**Q10** Mechanics

ಒಂದು ಕಾರು 5 ಸೆಕೆಂಡುಗಳ ಕಾಲ 20 m/s ಸ್ಥಿರ ಜವದಲ್ಲಿ ಚಲಿಸುತ್ತದೆ. ಈ ಸಮಯದಲ್ಲಿ ಕಾರು ಕ್ರಮಿಸಿದ ಒಟ್ಟು ದೂರ ಎಷ್ಟು?

A. 4 ಮೀಟರ್ ಗಳು

B. 100 ಮೀಟರ್ ಗಳು ✓

C. 400 ಮೀಟರ್ ಗಳು

D. 25 ಮೀಟರ್ ಗಳು

**Q11** Mirrors & Lenses

ಒಬ್ಬ ವಿದ್ಯಾರ್ಥಿಯು 10 cm ಸಂಗಮ ದೂರವಿರುವ ಒಂದು ನಿಮ್ನ ದರ್ಪಣದ ಮುಂದೆ 15 cm ದೂರದಲ್ಲಿ ಒಂದು ವಸ್ತುವನ್ನು ಇರಿಸುತ್ತಾನೆ. ಒಂದು ವೇಳೆ ರೂಪುಗೊಂಡ ಬಿಂಬವು ನೈಜವಾಗಿದ್ದರೆ, ದರ್ಪಣದಿಂದ ಉಂಟಾದ ವರ್ಧನೆ ಎಷ್ಟು?

A. −2 ✓

B. + 2

C. −1

D. + 1

**Q12** Mirrors & Lenses

ಒಂದು ಪ್ರಯೋಗದ ಸಮಯದಲ್ಲಿ, ಒಬ್ಬ ವಿದ್ಯಾರ್ಥಿಯು ಪೀನ ಮಸೂರದ ಎರಡು ಪಟ್ಟು ಸಂಗಮದೂರದಲ್ಲಿ ಒಂದು ಮೇಣದಬತ್ತಿಯನ್ನು ಇರಿಸುತ್ತಾನೆ ಮತ್ತು ಬಿಂಬದ ಸ್ಥಾನ ಮತ್ತು ಸ್ವರೂಪವನ್ನು ದಾಖಲಿಸುತ್ತಾನೆ. ಈ ವ್ಯವಸ್ಥೆಯಿಂದ ಈ ಕೆಳಗಿನ ಯಾವ ಸನ್ನಿವೇಶವು ಉಂಟಾಗಬಹುದು?

A. ನೈಜ, ತಲೆಕೆಳಗಾದ ಮತ್ತು ಅದೇ ಗಾತ್ರದ ಬಿಂಬವು ಎರಡು ಪಟ್ಟು ಸಂಗಮ ದೂರದಲ್ಲಿ ರೂಪುಗೊಳ್ಳುತ್ತದೆ

B. ವಸ್ತುವಿನ ಬದಿಯಲ್ಲಿಯೇ ಮಿಥ್ಯ, ನೇರ ಮತ್ತು ದೊಡ್ಡ ಬಿಂಬವು ಕಾಣಿಸಿಕೊಳ್ಳುತ್ತದೆ

C. ಸಂಗಮ ಬಿಂದು ಮತ್ತು ಎರಡು ಪಟ್ಟು ಸಂಗಮ ದೂರದ ನಡುವೆ ತಲೆಕೆಳಗಾದ, ನೈಜ ಮತ್ತು ಕುಗ್ಗಿದ ಬಿಂಬವು ರೂಪುಗೊಳ್ಳುತ್ತದೆ ✓

D. ನೇರ, ನೈಜ ಮತ್ತು ದೊಡ್ಡದಾದ ಬಿಂಬವು ಎರಡು ಪಟ್ಟು ಸಂಗಮದೂರದಲ್ಲಿ ರೂಪುಗೊಳ್ಳುತ್ತದೆ

**Q13** Mixtures, Solutions, Colloids

ಈ ಕೆಳಗಿನವುಗಳಲ್ಲಿ ಯಾವುದು ಕಲಿಲ ದ್ರಾವಣದ ಗುಣಲಕ್ಷಣವಾಗಿದೆ?

A. ಶೋಧಿಸುವಿಕೆಯ ಮೂಲಕ ಘಟಕಗಳನ್ನು ಬೇರ್ಪಡಿಸಬಹುದು

B. ಕಣಗಳು ನಿಜವಾದ ದ್ರಾವಣಗಳಿಗಿಂತ ಚಿಕ್ಕದಾಗಿರುತ್ತವೆ

C. ಕಣಗಳನ್ನು ಬರಿಗಣ್ಣಿನಿಂದ ನೋಡಬಹುದು

D. ಕಣಗಳು ನಿಂತುಕೊಂಡು ತಳಭಾಗದಲ್ಲಿ ನೆಲೆಗೊಳ್ಳುವುದಿಲ್ಲ ✓

**Q14** Nervous System & Brain

ಮಾಹಿತಿಯನ್ನು ಸ್ವೀಕರಿಸುವ ನರಕೋಶದ ಮೊದಲ ಭಾಗ ಯಾವುದು?

A. ಆಕ್ಸಾನ್ ತುದಿ

B. ಆಕ್ಸಾನ್

C. ಡೆಂಡ್ರೈಟ್ ✓

D. ಕೋಶ ಕಾಯ

**Q15** Nervous System & Brain

- B. ಅನಂತದಲ್ಲಿ
- C. $F_2$ ಮತ್ತು $2F_2$ ನಡುವೆ
- D. $2F_2$ ನಲ್ಲಿ ✓

**Q14** Newton's Laws of Motion

ಒಂದು ಹಗ್ಗ ಜಗ್ಗಾಟದಲ್ಲಿ, A ತಂಡವು 300 N ಬಲದಿಂದ B ತಂಡವನ್ನು ಎಳೆಯುತ್ತದೆ. ನ್ಯೂಟನ್‌ನ ಮೂರನೇ ನಿಯಮದ ಪ್ರಕಾರ, B ತಂಡವು A ತಂಡದ ಮೇಲೆ ಯಾವ ಬಲವನ್ನು ಪ್ರಯೋಗಿಸುತ್ತದೆ?

- A. ಅದೇ ದಿಕ್ಕಿನಲ್ಲಿ 150 N
- B. ಅದೇ ದಿಕ್ಕಿನಲ್ಲಿ 300 N
- C. ವಿರುದ್ಧ ದಿಕ್ಕಿನಲ್ಲಿ 600 N
- D. ವಿರುದ್ಧ ದಿಕ್ಕಿನಲ್ಲಿ 300 N ✓

Blackbook Vocabulary — Now in the App! ► Download Now on Google Play
generated by rank.qmaths.in

**Q15** Periodic Table & Classification

ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಸರಿಯಾಗಿ ಹೊಂದಿಕೆಯಾಗುತ್ತದೆ?

- A. Pb – ಸೀಸ ✓
- B. Ag – ಆರ್ಗಾನ್
- C. Fe – ಫ್ಲೋರಿನ್
- D. Au – ಅಲ್ಯೂಮಿನಿಯಂ

**Q16** Plant Hormones

ಸಸ್ಯಗಳಲ್ಲಿ ಸ್ಪರ್ಶ ಬಿಂದುವಿನಿಂದ ದೂರದಲ್ಲಿ ಚಲನೆಯು ಸಂಭವಿಸುತ್ತದೆ ಎಂಬ ಅಂಶವು ಸಸ್ಯಗಳ ಸಮನ್ವಯತೆಯನ್ನು ಕುರಿತು ಏನನ್ನು ಸೂಚಿಸುತ್ತದೆ?

- A. ಬೆಳವಣಿಗೆಯ ಪ್ರಚೋದನೆ
- B. ನೀರಿನ ಹೀರಿಕೊಳ್ಳುವಿಕೆ
- C. ದ್ಯುತಿಸಂಶ್ಲೇಷಣೆ
- D. ಸಂಕೇತ ಪ್ರಸರಣ ✓

**Q17** Plant Kingdom (Divisions)

ವಿದ್ಯಾರ್ಥಿಯೊಬ್ಬನು ತೇವಭರಿತ ಕಾಡಿನಲ್ಲಿ ಬಂಡೆಗಳ ಮೇಲೆ ಬೆಳೆಯುತ್ತಿರುವ ಹಸಿರು ಹೊದಿಕೆಗಳನ್ನು ಗಮನಿಸುತ್ತಾನೆ. ಇವುಗಳು ರೈಜಾಯ್ಡ್ (rhizoid) ತರಹದ ರಚನೆಗಳನ್ನು ಹೊಂದಿವೆಯಾದರೂ, ನಿಜವಾದ ಬೇರುಗಳನ್ನು ಹೊಂದಿರುವುದಿಲ್ಲ. ಹಾಗಾದರೆ, ಈ ಸಸ್ಯಗಳು ಬಹುಶಃ ಯಾವ ವರ್ಗಕ್ಕೆ ಸೇರಿರಬಹುದು?

- A. ಟೆರಿಡೋಫೈಟಾ (Pteridophyta)
- B. ಜಿಮ್ನೋಸ್ಪರ್ಮ್ (Gymnosperm)
- C. ಥ್ಯಾಲೊಫೈಟಾ (Thallophyta)
- D. ಬ್ರಯೋಫೈಟಾ (Bryophyta) ✓

**Q18** Plant Tissues & Transport

ಸಸ್ಯಗಳಲ್ಲಿ ಸುಕ್ರೋಸ್ ಅನ್ನು ಸಕ್ರಿಯವಾಗಿ ಫ್ಲೋಯಂ ಅಂಗಾಂಶಕ್ಕೆ ಸೇರಿಸಿದ ನಂತರ ನೀರು ಫ್ಲೋಯಂ ಅಂಗಾಂಶಕ್ಕೆ ಚಲಿಸಲು ಪ್ರಾಥಮಿಕ ಕಾರಣವೇನು?

- A. ಅಭಿಸರಣಾ ಒತ್ತಡದಲ್ಲಿನ ಹೆಚ್ಚಳವು ಫ್ಲೋಯಂಗೆ ನೀರನ್ನು ಸೆಳೆಯುತ್ತದೆ ✓
- B. ಫ್ಲೋಯಂ ಮತ್ತು ಕ್ಸೈಲಂ ಅಂಗಾಂಶಗಳ ನಡುವಿನ ಒತ್ತಡವು ಸಮನಾಗುತ್ತದೆ
- C. ಬೇರುಗಳ ಒತ್ತಡದ ಸೃಷ್ಟಿಯಿಂದಾಗಿ ನೀರು ಫ್ಲೋಯಂ ಕಡೆಗೆ ಚಲಿಸುತ್ತದೆ
- D. ಹೆಚ್ಚಿದ ATP ಬಳಕೆಯು ಫ್ಲೋಯಂನಲ್ಲಿನ ತಾಪಮಾನವನ್ನು ಹೆಚ್ಚಿಸುತ್ತದೆ

**Q19** Properties & Tests

ಸೋಡಿಯಂ ಕಾರ್ಬೋನೇಟ್ ಮತ್ತು ದುರ್ಬಲಗೊಳಿಸಿದ HCl ಗಳ ಕ್ರಿಯೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.

- A. ಜಲಜನಕ ಬಿಡುಗಡೆಯಾಗುತ್ತದೆ
- B. ಇಂಗಾಲದ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ ✓
- C. ಕಾರ್ಬನ್ ಮಾನಾಕ್ಸೈಡ್ ಬಿಡುಗಡೆಯಾಗುತ್ತದೆ
- D. ಕ್ಲೋರಿನ್ ಬಿಡುಗಡೆಯಾಗುತ್ತದೆ

**Q20** Properties & Tests

ಒಂದು ಲೋಹವು ಸಾರರಿಕ್ತ ಆಮ್ಲದೊಂದಿಗೆ ವರ್ತಿಸಿದಾಗ, ಜಲಜನಕ ಅನಿಲವು ಬಿಡುಗಡೆಯಾಗುತ್ತದೆ. ಜಲಜನಕ ಅನಿಲದೊಂದಿಗೆ ರೂಪುಗೊಂಡ ಸಂಯುಕ್ತವನ್ನು ಏನೆಂದು ಕರೆಯುತ್ತಾರೆ?

- A. ಲವಣ ✓
- B. ನೀರು
- C. ಆಕ್ಸೈಡ್
- D. ಪ್ರತ್ಯಾಮ್ಲ

**Q21** Properties & Tests

ಒಬ್ಬ ವಿದ್ಯಾರ್ಥಿಯು ಆಕಸ್ಮಿಕವಾಗಿ ಪ್ರಯೋಗಾಲಯದ ಮೇಜಿನ ಮೇಲೆ ಸ್ವಲ್ಪ ಪ್ರಮಾಣದ ದುರ್ಬಲ ಸಲ್ಫ್ಯೂರಿಕ್ ಆಮ್ಲವನ್ನು ಚೆಲ್ಲುತ್ತಾನೆ. ಆಮ್ಲವನ್ನು ತಟಸ್ಥಗೊಳಿಸಲು ಸೋಡಿಯಮ್ ಬೈಕಾರ್ಬೋನೇಟ್ ಪುಡಿಯನ್ನು ಸೇರಿಸಲು ಶಿಕ್ಷಕರು ಸಲಹೆ ನೀಡುತ್ತಾರೆ.
ಹಾಗಾದರೆ ಯಾವ ಉತ್ಪನ್ನವು ತಟಸ್ಥೀಕರಣ ಕ್ರಿಯೆ ಸಂಭವಿಸಿದೆ ಎಂದು ಖಚಿತಪಡಿಸುತ್ತದೆ?

- A. ಜಲಜನಕ ಅನಿಲದ ರಚನೆ
- B. ಇಂಗಾಲದ ಡೈಆಕ್ಸೈಡ್ ಮತ್ತು ಲವಣದ ರಚನೆ ✓
- C. ಆಮ್ಲಜನಕ ಅನಿಲದ ರಚನೆ
- D. ಲೋಹದ ಆಕ್ಸೈಡ್‌ನ ರಚನೆ

**Q22** Respiratory System

ತಂಬಾಕು ಉತ್ಪನ್ನಗಳ ಸೇವನೆಯು ಈ ಕೆಳಗಿನ ಯಾವ ಅಂಗದ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತದೆ?

- A. ಶ್ವಾಸಕೋಶಗಳು ✓
- B. ಮೆದುಳು
- C. ಕರುಳು
- D. ಮೇದೋಜೀರಕ ಗ್ರಂಥಿ

Blackbook Vocabulary — Now in the App! ▶ Download Now on Google Play

**Q23** Ultrasound & Applications

ಬಾವಲಿಗಳಿಂದ ಉತ್ಪತ್ತಿಯಾಗುವ ಶಬ್ದವು ಮನುಷ್ಯರಿಗೆ ಏಕೆ **ಕೇಳುವುದಿಲ್ಲ**?

A. ಬಾವಲಿಗಳ ಶಬ್ದಗಳ ಆವರ್ತನವು 20 Hz ಗಿಂತ ಕಡಿಮೆ ಇರುತ್ತದೆ.

B. ಬಾವಲಿಗಳ ಶಬ್ದಗಳ ಆವರ್ತನವು 20,000 Hz ಗಿಂತ ಹೆಚ್ಚು ಇರುತ್ತದೆ. ✓

C. ಶಬ್ದವು ನೀರಿನಲ್ಲಿ ಮಾತ್ರ ಚಲಿಸುತ್ತದೆ.

D. ಶಬ್ದವು ಮನುಷ್ಯರಿಗೆ ತುಂಬಾ ಜೋರಾಗಿದೆ.

**Q24** Work, Energy & Power

ಒಬ್ಬ ಈಜುಗಾರನು ಡೈವಿಂಗ್ ಬೋರ್ಡ್‌ನಿಂದ ಈಜುಕೊಳಕ್ಕೆ ಜಿಗಿಯುತ್ತಾನೆ. ನೀರನ್ನು ಪ್ರವೇಶಿಸುವ ಹಿಂದಿನ ಕ್ಷಣದ ಬಗ್ಗೆ, ಶಕ್ತಿ ಸಂರಕ್ಷಣಾ ನಿಯಮದ (Law of conservation of energy) ಯಾವ ಹೇಳಿಕೆಯು ಅತ್ಯಂತ ಸೂಕ್ತವಾಗಿ ಅನ್ವಯಿಸುತ್ತದೆ?

A. ಈಜುಗಾರನು ಕಳೆದುಕೊಂಡ ಪ್ರಚ್ಛನ್ನ ಶಕ್ತಿಯು ಆತ ಗಳಿಸಿದ ಚಲನ ಶಕ್ತಿಗೆ ಸಮಾನವಾಗಿರುತ್ತದೆ ✓

B. ಬೀಳುವ ಸಮಯದಲ್ಲಿ ಈಜುಗಾರನು ತನ್ನ ಶಕ್ತಿಯನ್ನು ಸುತ್ತಮುತ್ತಲಿನ ಪರಿಸರದಲ್ಲಿ ಕಳೆದುಕೊಳ್ಳುತ್ತಾನೆ

C. ಬೀಳುವ ಸಮಯದಲ್ಲಿ ಈಜುಗಾರನ ಒಟ್ಟು ಶಕ್ತಿಯು ಹೆಚ್ಚಾಗುತ್ತದೆ

D. ಇಡೀ ಪ್ರಕ್ರಿಯೆಯಲ್ಲಿ ಈಜುಗಾರನ ಪ್ರಚ್ಛನ್ನ ಶಕ್ತಿ ಒಂದೇ ಆಗಿರುತ್ತದೆ

**Q25** Work, Energy & Power

ಹೊಳೆಯುವ ಬಲ್ಬ್ ಯಾವ ರೂಪದ ಶಕ್ತಿಯನ್ನು ಹೊರಸೂಸುತ್ತದೆ?

A. ಬೆಳಕಿನ ಶಕ್ತಿ ✓

B. ಗುರುತ್ವಾಕರ್ಷಣ ಶಕ್ತಿ

C. ರಾಸಾಯನಿಕ ಶಕ್ತಿ

D. ಧ್ವನಿ ಶಕ್ತಿ

Blackbook Vocabulary — Now in the App! ► Download Now on Google Play

generated by rank.qmaths.in

## General Science

25 Questions • Answer Key

**Q1** Atomic Structure & Models

ರುದರ್ಫೋರ್ಡ್ ಅವರ α- ಕಣ ಚದುರುವಿಕೆಯ ಪ್ರಯೋಗದಲ್ಲಿ, ಪರಮಾಣುವಿನ ಹೆಚ್ಚಿನ ಭಾಗವು ಖಾಲಿ ಜಾಗವಾಗಿದೆ ಎಂಬ ತೀರ್ಮಾನಕ್ಕೆ ಬರಲು ಕಾರಣ:

- A. ಪರಮಾಣುಗಳಲ್ಲಿನ ಎಲೆಕ್ಟ್ರಾನುಗಳು ವಿದ್ಯುದೀಯವಾಗಿ ತಟಸ್ಥವಾಗಿದ್ದವು
- B. ಹೆಚ್ಚಿನ α-ಕಣಗಳನ್ನು ಫಾಯ್ಲ್ ಹೀರಿಕೊಳ್ಳುತ್ತದೆ
- C. ಕೆಲವು α-ಕಣಗಳು ಮಾತ್ರ ವಿಚಲನೆಯನ್ನು ತೋರಿಸುತ್ತವೆ ✓
- D. ಚಿನ್ನದ ಪರಮಾಣುಗಳು ರಾಸಾಯನಿಕವಾಗಿ ಅಸ್ಥಿರವಾಗಿರುತ್ತವೆ

**Q2** Atoms & Molecules

ಈ ಕೆಳಗಿನವುಗಳಲ್ಲಿ ಯಾವುದರ ಆಣ್ವಿಕ ದ್ರವ್ಯರಾಶಿಯು 44 u ಆಗಿರುತ್ತದೆ?

- A. N2
- B. NH3
- C. H2O
- D. CO2 ✓

**Q3** Basic Organic Chemistry

$CH_3$-$C(CH_3)_2$-$CH_2$-$CH_3$ ಸಂಯುಕ್ತದ IUPAC ಹೆಸರೇನು?

- A. 3,3-ಡೈಮೀಥೈಲ್‌ಬ್ಯುಟೇನ್
- B. 2,3-ಡೈಮೀಥೈಲ್‌ಬ್ಯುಟೇನ್
- C. 2,2-ಡೈಮೀಥೈಲ್‌ಬ್ಯುಟೇನ್ ✓
- D. 1,2-ಡೈಮೀಥೈಲ್‌ಬ್ಯುಟೇನ್

**Q4** Biodiversity & Conservation

ಭಾರತೀಯ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಕಂಡುಬರುವ ನೀಲಗಿರಿ ತಹರ್ ಅನ್ನು ರಕ್ಷಿಸಲು ಸಂರಕ್ಷಣಾ ಜೀವಶಾಸ್ತ್ರಜ್ಞರು ಒಂದು ತಂತ್ರವನ್ನು ವಿನ್ಯಾಸಗೊಳಿಸುತ್ತಿದ್ದಾರೆ. ಅದರ ವರ್ಗೀಕರಣದ ಆಧಾರದ ಮೇಲೆ ಅದರ ಸಂರಕ್ಷಣೆಗೆ ಯಾವ ವಿಧಾನವು ಹೆಚ್ಚು ಸೂಕ್ತವಾಗಿದೆ?

- A. ಇತರ ಪ್ರದೇಶಗಳಿಗೆ ಪ್ರಭೇದಗಳನ್ನು ಸ್ಥಳಾಂತರಿಸುವುದು
- B. ಪಶ್ಚಿಮ ಘಟ್ಟಗಳಲ್ಲಿನ ಅದರ ಸ್ಥಳೀಯ ವಾಸಸ್ಥಳದ ಮೇಲೆ ಗಮನ ಹರಿಸುವುದು ✓
- C. ಸಾಮಾನ್ಯ ವನ್ಯಜೀವಿ ಮೀಸಲು ಪ್ರದೇಶಗಳನ್ನು ಸೃಷ್ಟಿಸುವುದು
- D. ಬೇರೆಡೆ ವ್ಯಾಪಕವಾಗಿ ಹರಡಿರುವ ಪ್ರಭೇದಗಳಿಗೆ ಆದ್ಯತೆ ನೀಡುವುದು

**Q5** Cell Structure & Organelles

ಒಂದು ನಿರ್ದಿಷ್ಟ ದ್ರಾವಣದಲ್ಲಿ ಸಸ್ಯ ಕೋಶವು ಊದಿಕೊಳ್ಳುವುದಿಲ್ಲ ಅಥವಾ ಕುಗ್ಗುವುದಿಲ್ಲ ಎಂದು ಸಂಶೋಧಕರು ಕಂಡುಕೊಂಡರೆ, ಅವರು ದ್ರಾವಣವು ____ ಎಂದು ತೀರ್ಮಾನಿಸಬಹುದು.

- A. ಕಡಿಮೆಸಾರತೆಯ
- B. ಶುದ್ಧ ನೀರು
- C. ಸಾರೀಕೃತ
- D. ಸಮಸಾರತೆಯ ✓

**Q6** Cell Structure & Organelles

ಬ್ಯಾಕ್ಟೀರಿಯಾದ ಜೀವಕೋಶದಲ್ಲಿ, ________ ಎಂದು ಕರೆಯಲಾಗುವ ಭಾಗದಲ್ಲಿ ಆನುವಂಶಿಕ ವಸ್ತುವು ಸುತ್ತಲಿನ ಪೊರೆಯಿಲ್ಲದೆ ಕಂಡುಬರುತ್ತದೆ.

- A. ಕೋಶದ್ರವ್ಯ
- B. ಸೂಕ್ಷ್ಮ ಕುಹರ
- C. ನ್ಯೂಕ್ಲಿಯೋಯ್ಡ್ ✓
- D. ನ್ಯೂಕ್ಲಿಯೋಲಸ್

**Q7** Circulatory System (Heart, Blood)

ಒಬ್ಬ ಸಂಶೋಧಕರು ತ್ವರಿತ ಪರಿಣಾಮಕ್ಕಾಗಿ ಔಷಧಿಯನ್ನು ನೇರವಾಗಿ ಒಂದು ಅಂಗದ ಜೀವಕೋಶಗಳಿಗೆ ನೀಡಬೇಕಾಗಿದೆ. ಸುತ್ತಮುತ್ತಲಿನ ಜೀವಕೋಶಗಳಿಗೆ ಅತ್ಯುತ್ತಮ ವಿಸರಣೆಗಾಗಿ ಯಾವ ರಕ್ತನಾಳವನ್ನು ಗುರಿಯಾಗಿರಿಸಿಕೊಂಡು ಔಷಧಿಯನ್ನು ನೀಡಬೇಕು?

- A. ಕವಾಟಗಳ ಇರುವಿಕೆಯ ಕಾರಣದಿಂದಾಗಿ ಅಭಿಧಮನಿಗಳು
- B. ರಕ್ತವನ್ನು ಸಂಗ್ರಹಿಸುವ ಕಾರಣದಿಂದಾಗಿ ಅಭಿಧಮನಿಗಳು
- C. ದಪ್ಪ ಸ್ಥಿತಿಸ್ಥಾಪಕ ಭಿತ್ತಿಗಳ ಕಾರಣದಿಂದಾಗಿ ಅಪಧಮನಿಗಳು
- D. ಏಕಕೋಶ ದಪ್ಪ ಭಿತ್ತಿಗಳ ಕಾರಣದಿಂದಾಗಿ ಲೋಮನಾಳಗಳು ✓

**Q8** Digestive System

ಜೀರ್ಣಕ್ರಿಯೆಯ ಸಮಯದಲ್ಲಿ ಬಾಯಿಯಲ್ಲಿರುವ ಲಾಲಾರಸದ ಮುಖ್ಯ ಕಾರ್ಯವೇನು?

- A. ಇದು ಪಿಷ್ಟವನ್ನು ಸಕ್ಕರೆಯಾಗಿ ವಿಭಜಿಸುತ್ತದೆ ✓
- B. ಇದು ಪೋಷಕಾಂಶಗಳನ್ನು ಹೀರಿಕೊಳ್ಳುತ್ತದೆ
- C. ಇದು ಎಲ್ಲಾ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತದೆ
- D. ಇದು ಆಹಾರವನ್ನು ಜಠರಕ್ಕೆ ಸಾಗಿಸುತ್ತದೆ

Blackbook Vocabulary — Now in the App! ▶ Download Now on Google Play
generated by rank.qmaths.in

**Q9** Ecology & Environment

_______ ಅನ್ನು ಹೊರತುಪಡಿಸಿ, ಈ ಕೆಳಗಿನ ಎಲ್ಲವೂ ಸಹ ಭೂಮಿಯ ಸ್ವಾಭಾವಿಕ ವ್ಯವಸ್ಥೆಗಳನ್ನು ಪುನಃಸ್ಥಾಪಿಸುವ ಮಾರ್ಗಗಳಾಗಿವೆ.

A. ಮರಗಳನ್ನು ನೆಡುವುದು ಮತ್ತು ಸುಸ್ಥಿರ ಕೃಷಿ ಮಾಡುವುದು

B. ಪಳೆಯುಳಿಕೆ ಇಂಧನದ ಬಳಕೆಯನ್ನು ಹೆಚ್ಚಿಸುವುದು ✓

C. ಸೌರ ಶಕ್ತಿ ಮತ್ತು ಪವನ ಶಕ್ತಿಯನ್ನು ಬಳಸುವುದು

D. ನೀರನ್ನು ಉಳಿಸುವುದು ಮತ್ತು ತ್ಯಾಜ್ಯವನ್ನು ಮರುಬಳಕೆ ಮಾಡುವುದು

**Q10** Ecosystem & Food Chain

ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**ಹೇಳಿಕೆ 1:** ಪರಿಸರ ವ್ಯವಸ್ಥೆಯಲ್ಲಿನ ಆಹಾರ ಸರಪಳಿಗಳು ಆಹಾರ ಜಾಲವನ್ನು ರೂಪಿಸಲು ಪರಸ್ಪರ ಜೋಡಿತವಾಗಿವೆ.

**ಹೇಳಿಕೆ 2:** ಆಹಾರ ಜಾಲಗಳು ಜೀವಿಗಳ ಪರಸ್ಪರ ಅವಲಂಬನೆಯನ್ನು ತೋರ್ಪಡಿಸುತ್ತವೆ.

A. ಎರಡೂ ಹೇಳಿಕೆಗಳು ಸರಿಯಾಗಿವೆ ✓

B. ಹೇಳಿಕೆ 1 ಸರಿಯಾಗಿದೆ ಮತ್ತು ಹೇಳಿಕೆ 2 ತಪ್ಪಾಗಿದೆ

C. ಹೇಳಿಕೆ 1 ತಪ್ಪಾಗಿದೆ ಮತ್ತು ಹೇಳಿಕೆ 2 ಸರಿಯಾಗಿದೆ

D. ಎರಡೂ ಹೇಳಿಕೆಗಳು ತಪ್ಪಾಗಿವೆ

**Q11** Extraction & Metallurgy

ತಾಮ್ರದ ವಿದ್ಯುದ್ವಿಭಜನೀಯ ಸಂಸ್ಕರಣದ ಸಮಯದಲ್ಲಿ, ಈ ಕೆಳಗಿನವುಗಳಲ್ಲಿ ಯಾವುದು ಘಟಕಗಳು ಮತ್ತು ಅವುಗಳ ಪಾತ್ರಗಳಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ?

| ಘಟಕ | ಸಂಸ್ಕರಣ ಪ್ರಕ್ರಿಯೆಯಲ್ಲಿನ ಪಾತ್ರ |
|---|---|
| A.ಶುದ್ಧ ತಾಮ್ರ | i. ಆನೋಡ್ |
| B. ಅಶುದ್ಧ ತಾಮ್ರ | ii. ಕ್ಯಾಥೋಡ್ |
| C. ಆಮ್ಲೀಯಗೊಳಿಸಿದ ತಾಮ್ರದ ಸಲ್ಫೇಟ್ | iii.ಎಲೆಕ್ಟ್ರೋಲೈಟ್ |

A. A - iii, B - i, C - ii

B. A - i, B - ii, C - iii

C. A - ii, B - i, C - iii ✓

D. A - ii, B - iii, C - i

**Q12** Household Wiring & Safety

ಒಂದು ಮನೆಯಲ್ಲಿರುವ ಎಲ್ಲಾ 5 A ಸಾಕೆಟ್‌ಗಳನ್ನು ಬದಲಾಯಿಸಿ 15 A ಸಾಕೆಟ್‌ಗಳನ್ನು ಅಳವಡಿಸಿದರೆ ಮತ್ತು ಪ್ರತಿಯೊಂದಕ್ಕೂ ಅನೇಕ ಹೈ-ಪವರ್ ಉಪಕರಣಗಳನ್ನು ಸಂಪರ್ಕಿಸಿದರೆ ಯಾವ ಸಂಭವನೀಯ ಅಪಾಯ ಎದುರಾಗಬಹುದು ಮತ್ತು ಏಕೆ?

A. ಇದು ಮನೆಯಲ್ಲಿ ವಿದ್ಯುತ್ ಶಕ್ತಿಯಿಂದ ಉಂಟಾಗುವ ಅಪಾಯಗಳನ್ನು ಕಡಿಮೆ ಮಾಡುತ್ತದೆ

B. ಇದು ಎಲ್ಲಾ ಉಪಕರಣಗಳು ಕಡಿಮೆ ವೋಲ್ಟೇಜ್‌ನಲ್ಲಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸುತ್ತದೆ

C. ಇದು ಅತಿಯಾದ ವಿದ್ಯುತ್ ಪ್ರವಾಹದಿಂದಾಗಿ ಉಂಟಾಗುವ ಓವರ್‌ಲೋಡ್ ಮತ್ತು ಶಾರ್ಟ್ ಸರ್ಕ್ಯೂಟ್ ಇಂದ ಉಂಟಾಗುವ ಅಪಾಯವನ್ನು ಹೆಚ್ಚಿಸುತ್ತದೆ ✓

D. ಇದು ಯಾವುದೇ ಸಂದರ್ಭಗಳಲ್ಲಿ ಫ್ಯೂಸ್ ಕಾರ್ಯನಿರ್ವಹಿಸುವುದನ್ನು ತಡೆಯುತ್ತದೆ

**Q13** Human Eye & Defects

ಮಾನವನ ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯವನ್ನು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಉತ್ತಮ ದೃಷ್ಟಿಗಾಗಿ ಕಣ್ಣುರೆಪ್ಪೆಯ ಸ್ಥಾನದ ಹೊಂದಾಣಿಕೆ

B. ಬೆಳಕಿನ ತೀವ್ರತೆಗೆ ಅನುಗುಣವಾಗಿ ಗಾತ್ರವನ್ನು ಬದಲಾಯಿಸುವ ಕಣ್ಣಿನ ಪಾಪೆಯ ಸಾಮರ್ಥ್ಯ

C. ಚಲಿಸುವ ವಸ್ತುಗಳನ್ನು ಅನುಸರಿಸಲು ಕಣ್ಣುಗುಡ್ಡೆಯ ಚಲನೆ

D. ಕಣ್ಣಿನ ಮಸೂರವು ವಿಭಿನ್ನ ದೂರದಲ್ಲಿರುವ ವಸ್ತುಗಳ ಮೇಲೆ ಕೇಂದ್ರೀಕರಿಸಲು ತನ್ನ ಸಂಗಮದೂರವನ್ನು ಬದಲಾಯಿಸುವ ಸಾಮರ್ಥ್ಯ ✓

**Q14** Hydrocarbons (Methane, Ethane, etc.)

ಈ ಕೆಳಗಿನ ಯಾವ ಸಂಯುಕ್ತಗಳ ಜೋಡಿಯು ಒಂದೇ ರೀತಿಯ ಆಣ್ವಿಕ ಸೂತ್ರವನ್ನು ಹೊಂದಿದ್ದರೂ ಸಹ ಬೇರೆ ಬೇರೆ ರಾಸಾಯನಿಕ ಗುಣಲಕ್ಷಣಗಳನ್ನು ತೋರಿಸುತ್ತದೆ?

A. ಈಥೇನ್ ಮತ್ತು ಈಥೀನ್ (Ethane and ethene)

B. ಎಥನಾಲ್ ಮತ್ತು ಎಥನೋಯಿಕ್ ಆಮ್ಲ (Ethanol and ethanoic acid)

C. ಬ್ಯೂಟೇನ್ ಮತ್ತು ಐಸೊಬ್ಯೂಟೇನ್ (Butane and isobutane) ✓

D. ಪ್ರೊಪೆನಾಲ್ ಮತ್ತು ಮೆಥನಾಲ್ (Propanol and methanol)

Blackbook Vocabulary — Now in the App! ► Download Now on Google Play

**Q15** Magnetic Effects of Current

ಒಬ್ಬ ವಿದ್ಯಾರ್ಥಿಯು ವಿದ್ಯುತ್ ಪ್ರವಹಿಸುವ ಒಂದು ನೇರ ವಾಹಕದ ಸಮೀಪದಲ್ಲಿ ದಿಕ್ಸೂಚಿಯನ್ನು ಇರಿಸಿದಾಗ ಸೂಜಿಯು ವಿಚಲನವಾಗುವುದನ್ನು ಗಮನಿಸುತ್ತಾನೆ. ಈ ವೀಕ್ಷಣೆಯು ವಾಹಕದ ಸುತ್ತಲಿನ ಪ್ರದೇಶದ ಬಗ್ಗೆ ಏನನ್ನು ಸೂಚಿಸುತ್ತದೆ?

A. ವಾಹಕದ ಸುತ್ತ ಶಾಖ ಉತ್ಪತ್ತಿಯಾಗುತ್ತದೆ

B. ಈ ಪ್ರದೇಶವು ಗುರುತ್ವಾಕರ್ಷಣೆಯಿಂದ ಸಕ್ರಿಯವಾಗುತ್ತದೆ

C. ವಾಹಕದ ಸುತ್ತ ಒಂದು ಕಾಂತೀಯ ಕ್ಷೇತ್ರವಿರುತ್ತದೆ ✓

D. ವಾಹಕದ ಸುತ್ತ ವಿದ್ಯುತ್ ಕ್ಷೇತ್ರವು ಉಂಟಾಗುತ್ತದೆ

**Q16** Mechanics

ಏಕರೂಪದ ವೇಗೋತ್ಕರ್ಷದೊಂದಿಗೆ ಚಲಿಸುವ ಒಂದು ಕಾಯದ ವೇಗ-ಕಾಲ ನಕ್ಷೆಯು ಮೇಲ್ಮುಖವಾಗಿ ಓರೆಯಾಗಿರುವ ಒಂದು ಸರಳ ರೇಖೆಯಾಗಿದೆ. ಎರಡು ಸಮಯ ಬಿಂದುಗಳ ನಡುವಿನ ಈ ರೇಖೆಯ ಅಡಿಯಲ್ಲಿರುವ ಸ್ಥಳವು ಏನನ್ನು ಪ್ರತಿನಿಧಿಸುತ್ತದೆ?

A. ಆ ಸಮಯದ ಮಧ್ಯಂತರದಲ್ಲಿ ಆಗಿರುವ ಕಾಯದ ಸರಾಸರಿ ವೇಗ

B. ಆ ಸಮಯದ ಮಧ್ಯಂತರದಲ್ಲಿ ಆಗಿರುವ ಕಾಯದ ವೇಗೋತ್ಕರ್ಷ

C. ಆ ಸಮಯದ ಮಧ್ಯಂತರದಲ್ಲಿ ಆಗಿರುವ ವೇಗದಲ್ಲಿನ ಒಟ್ಟು ಬದಲಾವಣೆ

D. ಆ ಸಮಯದ ಮಧ್ಯಂತರದಲ್ಲಿ ಆಗಿರುವ ಕಾಯದ ಸ್ಥಾನಪಲ್ಲಟ ✓

**Q17** Mechanics

ವೇಗ-ಕಾಲ ನಕ್ಷೆಯನ್ನು ವ್ಯಾಖ್ಯಾನಿಸುವಾಗ, ನಿರ್ದಿಷ್ಟ ಸಮಯದ ಮಧ್ಯಂತರದಲ್ಲಿ ನಕ್ಷೆಯ ಅಡಿಯಲ್ಲಿರುವ ಪ್ರದೇಶವು ಯಾವ ಭೌತಿಕ ಪರಿಮಾಣವನ್ನು ಪ್ರತಿನಿಧಿಸುತ್ತದೆ?

A. ಕಾರಿನ ವೇಗೋತ್ಕರ್ಷ

B. ಪ್ರಯಾಣಿಸಿದ ದೂರ (ಅಥವಾ ಸ್ಥಾನಪಲ್ಲಟ) ✓

C. ವೇಗದಲ್ಲಿನ ಬದಲಾವಣೆ

D. ಕಾರಿನ ಜವ

**Q18** Mirrors & Lenses

ಸಂಚಾರ ಕಣ್ಗಾವಲು ಕ್ಯಾಮೆರಾವು 2 m ವಕ್ರತಾ ತ್ರಿಜ್ಯವನ್ನು ಹೊಂದಿರುವ ಒಂದು ಪೀನ ದರ್ಪಣವನ್ನು ಬಳಸುತ್ತದೆ. ದರ್ಪಣದಿಂದ 3 m ದೂರದಲ್ಲಿರುವ ಒಂದು ಕಾರಿನ ಬಿಂಬವು ಎಲ್ಲಿ ಕಾಣಿಸಿಕೊಳ್ಳುತ್ತದೆ?

A. ದರ್ಪಣದ ಮುಂದೆ 0.12 m

B. ದರ್ಪಣದ ಮುಂದೆ 3 m

C. ದರ್ಪಣದ ಹಿಂದೆ 0.75 m ✓

D. ದರ್ಪಣದ ಹಿಂದೆ 3 m

**Q19** Mirrors & Lenses

ಒಂದು ನಿಮ್ನ ಕನ್ನಡಿಯ ಪ್ರಧಾನ ಸಂಗಮದ ಮೂಲಕ ಹಾದುಹೋಗುವ ಒಂದು ಕಿರಣವು, ಪ್ರತಿಫಲನದ ನಂತರ:

A. ಧ್ರುವದಲ್ಲಿ ಒಮ್ಮುಖಗೊಳ್ಳುತ್ತದೆ

B. ಪ್ರಧಾನ ಅಕ್ಷಕ್ಕೆ ಸಮಾಂತರವಾಗಿ ನಿರ್ಗಮಿಸುತ್ತದೆ ✓

C. ಕನ್ನಡಿಯಿಂದ ದೂರದಲ್ಲಿ ವಿಮುಖವಾಗುತ್ತದೆ

D. ವಕ್ರತಾ ಕೇಂದ್ರದ ಮೂಲಕ ಹಿಂದಕ್ಕೆ ಪ್ರತಿಫಲಿಸುತ್ತದೆ

**Q20** Mixtures, Solutions, Colloids

ಈ ಕೆಳಗಿನವುಗಳಲ್ಲಿ ಯಾವುದು ಅಸಮರೂಪದ ಮಿಶ್ರಣವನ್ನು ಹೆಚ್ಚು ನಿಖರವಾಗಿ ಪ್ರತಿನಿಧಿಸುತ್ತದೆ?

A. ಸಕ್ಕರೆ ಮತ್ತು ನೀರಿನ ದ್ರಾವಣ

B. ಅಸಿಟಿಕ್ ಆಮ್ಲ ಮತ್ತು ನೀರಿನ ದ್ರಾವಣ

C. ಸೋಡಿಯಂ ಕ್ಲೋರೈಡ್ ಮತ್ತು ನೀರು

D. ಮರಳು ಮತ್ತು ನೀರಿನ ದ್ರಾವಣ ✓

**Q21** Properties & Tests

ಇಂಗಾಲದ ಡೈಆಕ್ಸೈಡ್ ಅನಿಲವನ್ನು ಸುಣ್ಣದ ನೀರಿನ ಮೂಲಕ (ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ದ್ರಾವಣ) ಹಾಯಿಸಿದಾಗ, ಅದು ಯಾವ ಬಿಳಿ ಅವಕ್ಷೇಪವನ್ನು ಉತ್ಪಾದಿಸುತ್ತದೆ?

A. ಕ್ಯಾಲ್ಸಿಯಂ ಕಾರ್ಬೋನೇಟ್ ✓

B. ಕ್ಯಾಲ್ಸಿಯಂ ಆಕ್ಸೈಡ್

C. ಕ್ಯಾಲ್ಸಿಯಂ ಸಲ್ಫೇಟ್

D. ಕ್ಯಾಲ್ಸಿಯಂ ಹೈಡ್ರೋಜನ್ ಕಾರ್ಬೋನೇಟ್

**Q22** Reactivity Series

ಒಂದು ಧಾತುವು ತನ್ನ ಸಂಯುಕ್ತದಿಂದ ಮತ್ತೊಂದು ಧಾತುವನ್ನು ಸ್ಥಾನಪಲ್ಲಟಗೊಳಿಸಬಹುದೇ ಎಂದು ಯಾವ ಪ್ರಾಥಮಿಕ ಅಂಶ ನಿರ್ಧರಿಸುತ್ತದೆ?

A. ಪರಮಾಣು ದ್ರವ್ಯರಾಶಿಗಳಲ್ಲಿನ ವ್ಯತ್ಯಾಸ

B. ಭೌತಿಕ ಸ್ಥಿತಿಯಲ್ಲಿನ ವ್ಯತ್ಯಾಸ

C. ಒಳಗೊಂಡಿರುವ ಧಾತುಗಳ ಸಾಪೇಕ್ಷ ಕ್ರಿಯಾಶೀಲತೆ ✓

D. ದ್ರಾವಣ ಸಾಂದ್ರತೆಯಲ್ಲಿನ ವ್ಯತ್ಯಾಸ

Blackbook Vocabulary — Now in the App! ▶ Download Now on Google Play

generated by rank.qmaths.in

**Q23** Respiratory System

ಗಂಟಲಿನಲ್ಲಿರುವ ಈ ಕೆಳಗಿನ ಯಾವ ರಚನೆಯು ಮಾನವರಲ್ಲಿ ಶ್ವಾಸಮಾರ್ಗ ಕುಸಿತವನ್ನು ತಡೆಯಲು ಕಾರಣವಾಗಿವೆ?

A. ಅನ್ನನಾಳ
B. ಮೃದ್ವಸ್ಥಿ ಉಂಗುರಗಳು ✓
C. ಗಂಟಲಕುಹರ (Pharynx)
D. ಧ್ವನಿಪೆಟ್ಟಿಗೆ (Larynx)

**Q24** Work, Energy & Power

ಒಂದು ಟ್ರಾಲಿಯನ್ನು 40 N ನ ಸ್ಥಿರ ಬಲದಿಂದ ನೇರ ಮಾರ್ಗದಲ್ಲಿ ಎಳೆಯಲಾಗುತ್ತದೆ. ಒಂದು ವೇಳೆ ಟ್ರಾಲಿಯ ಮೇಲೆ ನಡೆದ ಕೆಲಸವು 240 J ಆಗಿದ್ದರೆ, ಟ್ರಾಲಿಯು ಕ್ರಮಿಸಿದ ದೂರ ಎಷ್ಟು?

A. 4 m
B. 2 m
C. 6 m ✓
D. 12 m

**Q25** Work, Energy & Power

ಒಂದು ವೇಳೆ 1 N ಬಲವು ಒಂದು ವಸ್ತುವನ್ನು ಬಲದ ರೇಖೆಯ ಉದ್ದಕ್ಕೂ 1 m ಸ್ಥಾನಪಲ್ಲಟಗೊಳಿಸಿದರೆ, ನಡೆದ ಕೆಲಸವು _____ಆಗಿರುತ್ತದೆ.

A. 1 J ✓
B. 0.5 J
C. 0.1 J
D. 10 J

Blackbook Vocabulary — Now in the App! ▶ Download Now on Google Play

generated by rank.qmaths.in

## General Science

25 Questions • Answer Key

**Q1** Animal Kingdom (Phyla Overview)

ಪುನರ್ವಸತಿ ಸಮಯದಲ್ಲಿ, ಬೆನ್ನುಮೂಳೆಯ ಹಾನಿಯನ್ನು ಹೊಂದಿರುವ ರೋಗಿಗೆ ಅಂಗಗಳ ನಡುವಿನ ಸಮನ್ವಯದಲ್ಲಿ ತೊಂದರೆಯಾಗುತ್ತದೆ. ಈ ತೊಡಕಿಗೆ ಬೆನ್ನುಮೂಳೆಯ ಯಾವ ವೈಶಿಷ್ಟ್ಯವು ಕಾರಣವಾಗಿದೆ?

- A. ಸಂಕೀರ್ಣ ಅಂಗಾಂಗ ವ್ಯವಸ್ಥೆಯ ಏಕೀಕರಣ ✓
- B. ಸರಳ ಬಾಹ್ಯ ಅಂಗ ಅನುಬಂಧಗಳು
- C. ರಕ್ಷಣಾತ್ಮಕ ಏಕ ಪದರದ ಚರ್ಮ
- D. ಮೂಲಭೂತ ಸ್ವತಂತ್ರ ಕೋಶ ಸಮೂಹಗಳು

**Q2** Atomic Structure & Models

ಈ ಕೆಳಗಿನವುಗಳಲ್ಲಿ ಯಾವುದು ಪ್ರೋಟಾನ್ ಅನ್ನು ಸರಿಯಾಗಿ ವಿವರಿಸುತ್ತದೆ?

- A. ಋಣಾತ್ಮಕ ಆವೇಶದ ಕಣ
- B. ತಟಸ್ಥ ಕಣ
- C. ದ್ರವ್ಯರಾಶಿ ಇಲ್ಲದ ಕಣ
- D. ಧನಾತ್ಮಕ ಆವೇಶದ ಕಣ ✓

**Q3** Atomic Structure & Models

ಈ ಕೆಳಗಿನವುಗಳಲ್ಲಿ ಯಾವುದು ಸಮಸ್ಥಾನೀಯಗಳ ವಿಶಿಷ್ಟ ಗುಣಲಕ್ಷಣಗಳನ್ನು ಅತ್ಯುತ್ತಮವಾಗಿ ಪ್ರತಿನಿಧಿಸುತ್ತದೆ?

- A. ಸಮಸ್ಥಾನೀಯಗಳ ರಾಸಾಯನಿಕ ಮತ್ತು ಭೌತಿಕ ಗುಣಲಕ್ಷಣಗಳೆರಡೂ ಒಂದೇ ರೀತಿ ಇರುತ್ತವೆ
- B. ಸಮಸ್ಥಾನೀಯಗಳ ರಾಸಾಯನಿಕ ಗುಣಲಕ್ಷಣಗಳು ವಿಭಿನ್ನವಾಗಿರುತ್ತವೆ ಆದರೆ ಅವುಗಳ ಭೌತಿಕ ಗುಣಲಕ್ಷಣಗಳು ಒಂದೇ ರೀತಿ ಇರುತ್ತವೆ
- C. ಸಮಸ್ಥಾನೀಯಗಳ ರಾಸಾಯನಿಕ ಮತ್ತು ಭೌತಿಕ ಗುಣಲಕ್ಷಣಗಳೆರಡೂ ಭಿನ್ನವಾಗಿರುತ್ತವೆ
- D. ಸಮಸ್ಥಾನೀಯಗಳ ರಾಸಾಯನಿಕ ಗುಣಲಕ್ಷಣಗಳು ಒಂದೇ ರೀತಿ ಇರುತ್ತವೆ, ಆದರೆ ಅವುಗಳ ಭೌತಿಕ ಗುಣಲಕ್ಷಣಗಳು ವಿಭಿನ್ನವಾಗಿರುತ್ತವೆ ✓

**Q4** Basic Organic Chemistry

–$CH_2$– ಘಟಕದಿಂದ ಭಿನ್ನವಾಗಿರುವ ಸಂಯುಕ್ತಗಳು ಯಾವ ರೀತಿಯ ರಾಸಾಯನಿಕ ಗುಂಪಿಗೆ ಸೇರಿವೆ?

- A. ಅಯಾನಿಕ ಸಂಯುಕ್ತವಸ್ತು
- B. ಅನುರೂಪ ಶ್ರೇಣಿಗಳು ✓
- C. ಕ್ರಿಯಾ ಗುಂಪು
- D. ರಚನಾತ್ಮಕ ಸಮಾಂಗಿ

**Q5** Cell Biology

ಈ ಸಾದೃಶ್ಯವನ್ನು ಪೂರ್ಣಗೊಳಿಸಿ.
ಹೈಪೋಟೋನಿಕ್ ದ್ರಾವಣ : ಜೀವಕೋಶ ಊದಿಕೊಳ್ಳುತ್ತದೆ ::
ಹೈಪರ್ಟೋನಿಕ್ ದ್ರಾವಣ : _______.

- A. ಜೀವಕೋಶವು ಹಾಗೆಯೇ ಉಳಿಯುತ್ತದೆ
- B. ಜೀವಕೋಶವು ಗಟ್ಟಿಯಾಗುತ್ತದೆ
- C. ಜೀವಕೋಶವು ಕುಗ್ಗುತ್ತದೆ ✓
- D. ಜೀವಕೋಶವು ವಿಭಜನೆಯಾಗುತ್ತದೆ

**Q6** Cell Structure & Organelles

ಪ್ರಾಣಿ ಜೀವಕೋಶಗಳಲ್ಲಿ, ವಾಯುವಿಕ ಉಸಿರಾಟದ ಸಮಯದಲ್ಲಿ ಆಮ್ಲಜನಕವನ್ನು ಬಳಸಿಕೊಂಡು ಮಾಡಲಾಗುವ ಪೈರುವೇಟ್ ವಿಭಜನೆಯು _______ ನಲ್ಲಿ ಸಂಭವಿಸುತ್ತದೆ.

- A. ರೈಬೋಸೋಮ್
- B. ಮೈಟೋಕಾಂಡ್ರಿಯ ✓
- C. ನ್ಯೂಕ್ಲಿಯಸ್
- D. ಕೋಶದ್ರವ್ಯ

**Q7** Chemical Bonding (Ionic, Covalent)

ಸಹವೇಲೆನ್ಸಿಯ ಸಂಯುಕ್ತಗಳು ಸಾಮಾನ್ಯವಾಗಿ ಕಡಿಮೆ ಕರಗುವ ಬಿಂದುಗಳನ್ನು ಹೊಂದಿರುವುದನ್ನು ಈ ಕೆಳಗಿನ ಯಾವ ಹೇಳಿಕೆಯು ವಿವರಿಸುತ್ತದೆ?

- A. ಲೋಹಿಯ ಬಂಧ
- B. ಪ್ರಬಲ ಅಯಾನಿಕ ಆಕರ್ಷಣೆಗಳು
- C. ದುರ್ಬಲ ಅಂತರಾಣ್ವಿಕ ಬಲಗಳು ✓
- D. ಮುಕ್ತ ಎಲೆಕ್ಟ್ರಾನ್‌ಗಳು

**Q8** Current Electricity (Ohm's Law, Circuits)

ಒಂದು ಸರ್ಕ್ಯೂಟ್‌ನಲ್ಲಿ, $R_1$ ಮತ್ತು $R_2$ ಎಂಬ ಎರಡು ರೋಧಕಗಳನ್ನು ಸಮಾನಾಂತರವಾಗಿ ಸಂಪರ್ಕಿಸಲಾಗಿದೆ. $R_1 = 4\ \Omega$ ಮತ್ತು $R_2 = 12\ \Omega$ ಆಗಿದ್ದರೆ, ಮತ್ತು ಸಮಾಂತರ ಸಂಯೋಜನೆಯ ಒಟ್ಟು ವೋಲ್ಟೇಜ್ 6V ಆಗಿದ್ದರೆ, ಸರ್ಕ್ಯೂಟ್ ನಲ್ಲಿ ಹರಿಯುವ ಒಟ್ಟು ವಿದ್ಯುತ್ ಪ್ರವಾಹ ಎಷ್ಟು?

- A. 10 A
- B. 2 A ✓
- C. 8 A
- D. 1.5 A

Blackbook Vocabulary — Now in the App! ▶ Download Now on Google Play

**Q9** Current Electricity (Ohm's Law, Circuits)

ಒಂದುವೇಳೆ ಒಂದು ಬ್ಯಾಟರಿಗೆ ಒಂದು ರೋಧಕವನ್ನು ಸಂಪರ್ಕಿಸಿದರೆ ಮತ್ತು ಅದನ್ನು ದೀರ್ಘಕಾಲ ಬಳಸಿದರೆ, ವಿದ್ಯುತ್ ಪ್ರವಾಹ ಮತ್ತು ರೋಧವು ಸ್ಥಿರವಾಗಿದ್ದರೆ, ಈ ಕೆಳಗಿನ ಯಾವುದು ಹೆಚ್ಚಾಗುತ್ತದೆ?

- **A.** ರೋಧಕದಲ್ಲಿ ಉತ್ಪತ್ತಿಯಾಗುವ ಒಟ್ಟು ಶಾಖ ✓
- **B.** ಪ್ರತಿ ಏಕಮಾನ ಸಮಯಕ್ಕೆ ಉಂಟಾಗುವ ವಿದ್ಯುದಾವೇಶ
- **C.** ರೋಧಕದ ರೋಧ
- **D.** ರೋಧಕದಲ್ಲಿ ಇರುವ ವಿಭವಾಂತರ

**Q10** Mechanics

ಏಕರೂಪದ ವೇಗದಲ್ಲಿ ಚಲಿಸುವ ಒಂದು ಕಾರಿನ ವೇಗ-ಕಾಲ ನಕ್ಷೆಯು t=0 s ನಲ್ಲಿ ಪ್ರಾರಂಭವಾಗಿ t=10 s ನಲ್ಲಿ ಕೊನೆಗೊಳ್ಳುತ್ತದೆ ಹಾಗೂ ಯಾವಾಗಲೂ 5 m/s ನಲ್ಲಿ ಇರುತ್ತದೆ. ಹಾಗಾದರೆ ನಕ್ಷೆಯ ಆಕಾರವೇನು?

- **A.** 5 m/s ಗಿಂತ ಮೇಲಿರುವ ಒಂದು ವಕ್ರರೇಖೆ
- **B.** 5 m/s ನಲ್ಲಿರುವ ಒಂದು ಸರಳ ಸಮತಲ ರೇಖೆ ✓
- **C.** 5 ರಿಂದ 0 m/s ಗೆ ಬೀಳುತ್ತಿರುವ ಒಂದು ಸರಳ ರೇಖೆ
- **D.** 0 ರಿಂದ 5 m/s ಗೆ ಏರುತ್ತಿರುವ ಒಂದು ಸರಳ ರೇಖೆ

**Q11** Mechanics

ಒಂದು ರಕ್ಷಣಾ ತಂಡವು ಭಾರವಾದ ಕಾಂಕ್ರೀಟ್ ಚಪ್ಪಡಿಯನ್ನು ಎತ್ತಲು ಉದ್ದನೆಯ ಉಕ್ಕಿನ ಸಲಾಕೆಯನ್ನು ಸನ್ನೆಗೋಲು ಆಗಿ ಬಳಸುತ್ತದೆ. ಅಗತ್ಯವಿರುವ ಬಲವನ್ನು ಕಡಿಮೆ ಮಾಡಲು, ಆನಿಕೆಯನ್ನು (fulcrum) ಅನ್ನು ಎಲ್ಲಿ ಇರಿಸಬೇಕು?

- **A.** ಚಪ್ಪಡಿ ಮತ್ತು ಯತ್ನ ಎರಡರಿಂದಲೂ ದೂರದಲ್ಲಿ
- **B.** ಬಲವನ್ನು ಪ್ರಯೋಗಿಸುವ ಬಿಂದುವಿನ ಸಮೀಪದಲ್ಲಿ
- **C.** ಎತ್ತಲಾಗುತ್ತಿರುವ ಚಪ್ಪಡಿಯ ಸಮೀಪದಲ್ಲಿ ✓
- **D.** ಚಪ್ಪಡಿಯ ಮತ್ತು ಯತ್ನದ ನಡುವೆ ನಿಖರವಾಗಿ ಮಧ್ಯದಲ್ಲಿ

**Q12** Mirrors & Lenses

ಕೇಂದ್ರೀಕರಿಸುವ ಮಸೂರಕ್ಕಾಗಿ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ತಪ್ಪಾಗಿದೆ?

- **A.** ಕೇಂದ್ರೀಕರಿಸುವ ಮಸೂರವು ಸೂರ್ಯನ ಬೆಳಕನ್ನು ಕೇಂದ್ರೀಕರಿಸಿ ಕಾಗದದ ಮೇಲೆ ತೀಕ್ಷ್ಣವಾದ ಪ್ರಕಾಶಮಾನವಾದ ಚುಕ್ಕೆಯನ್ನು ರೂಪಿಸುತ್ತದೆ.
- **B.** ಸೂರ್ಯನಿಂದ ಬರುವ ಬೆಳಕು, ಕೇಂದ್ರೀಕರಿಸುವ ಮಸೂರವನ್ನು ತಲುಪುವ ಮೊದಲು, ಸಮಾನಾಂತರ ಕಿರಣಗಳನ್ನು ಒಳಗೊಂಡಿರುತ್ತದೆ.
- **C.** ಕೇಂದ್ರೀಕರಿಸುವ ಮಸೂರದಿಂದ ಕಾಗದದ ಮೇಲೆ ರೂಪುಗೊಂಡ ಪ್ರಕಾಶಮಾನವಾದ ಚುಕ್ಕೆಯು ಸೂರ್ಯನ ಮಿಥ್ಯಾ ಪ್ರತಿಬಿಂಬವಾಗಿದೆ. ✓
- **D.** ಕೇಂದ್ರೀಕರಿಸುವ ಮಸೂರದಿಂದಾಗಿ ಒಂದು ಬಿಂದುವಿನಲ್ಲಿ ಸೂರ್ಯನ ಬೆಳಕಿನ ಸಾಂದ್ರತೆಯು ಶಾಖವನ್ನು ಉತ್ಪಾದಿಸುತ್ತದೆ.

**Q13** Mixtures, Solutions, Colloids

ಸಮರೂಪದ ಮಿಶ್ರಣಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಯು ಸರಿಯಾಗಿದೆ?

- **A.** ದ್ರಾವಣದ ಕಣಗಳು ಚಿಕ್ಕದಾಗಿರುತ್ತವೆ ಮತ್ತು ಬರಿಗಣ್ಣಿನಿಂದ ನೋಡಲು ಸಾಧ್ಯವಿಲ್ಲ ✓
- **B.** ಮಿಶ್ರಣದ ಘಟಕಗಳನ್ನು ಸೋಸುವಿಕೆಯ ಮೂಲಕ ಬೇರ್ಪಡಿಸಬಹುದು
- **C.** ಅವು ಟಿಂಡಾಲ್ ಪರಿಣಾಮವನ್ನು ತೋರ್ಪಡಿಸುತ್ತವೆ
- **D.** ದ್ರಾವ್ಯ ಕಣಗಳನ್ನು ಕದಲಿಸದೆ ಹಾಗೆಯೇ ಬಿಟ್ಟಾಗ ಅವು ತಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ

**Q14** Nervous System & Brain

ನರಕೋಶದ ಯಾವ ಭಾಗವು ಪರಿಸರದಿಂದ ಮಾಹಿತಿಯನ್ನು ಸ್ವೀಕರಿಸುತ್ತದೆ?

- **A.** ನರಕೋಶ ಸಂಗಮ
- **B.** ನ್ಯೂಕ್ಲಿಯಸ್
- **C.** ಡೆಂಡ್ರೈಟ್ ✓
- **D.** ಆಕ್ಸಾನ್

**Q15** Newton's Laws of Motion

ಬಲದ ಸೂತ್ರದ ಸರಿಯಾದ ಅನ್ವಯಿಕೆಯನ್ನು ತೋರಿಸುವ ಸನ್ನಿವೇಶ ಯಾವುದು?

- **A.** 5 kg ಯ ಒಂದು ವಸ್ತುವು 2 m/s2ದರದಲ್ಲಿ ವೇಗೋತ್ಕರ್ಷಗೊಳ್ಳುತ್ತದೆ ಮತ್ತು 10 N ನಷ್ಟು ಬಲವನ್ನು ಹಾಕಲಾಗಿದೆ ✓
- **B.** 2 kg ಯ ಒಂದು ವಸ್ತುವು 5 m/s2ದರದಲ್ಲಿ ವೇಗೋತ್ಕರ್ಷಗೊಳ್ಳುತ್ತದೆ ಮತ್ತು 15 N ನಷ್ಟು ಬಲವನ್ನು ಹಾಕಲಾಗಿದೆ
- **C.** 4 kg ಯ ಒಂದು ವಸ್ತುವು 3 m/s2ದರದಲ್ಲಿ ವೇಗೋತ್ಕರ್ಷಗೊಳ್ಳುತ್ತದೆ ಮತ್ತು 20 N ನಷ್ಟು ಬಲವನ್ನು ಹಾಕಲಾಗಿದೆ
- **D.** 10 kg ಯ ಒಂದು ವಸ್ತುವು 1 m/s2ದರದಲ್ಲಿ ವೇಗೋತ್ಕರ್ಷಗೊಳ್ಳುತ್ತದೆ ಮತ್ತು 5 N ನಷ್ಟು ಬಲವನ್ನು ಹಾಕಲಾಗಿದೆ

Blackbook Vocabulary — Now in the App! ▶ Download Now on Google Play

generated by rank.qmaths.in

**Q16** Physical & Chemical Properties

ಈ ಕೆಳಗಿನ ಯಾವ ಹೇಳಿಕೆಯು ಗಾಳಿಯಲ್ಲಿ ಬಿಸಿಯಾದಾಗ ವಿವಿಧ ಲೋಹಗಳ ನಡವಳಿಕೆಯನ್ನು ಸರಿಯಾಗಿ ವಿವರಿಸುತ್ತದೆ?

A. ಬೆಳ್ಳಿ ಮತ್ತು ಚಿನ್ನ ಗಾಳಿಯಲ್ಲಿ ಉರಿಯುತ್ತವೆ ಮತ್ತು ದಪ್ಪ ಆಕ್ಸೈಡ್ ಲೇಪನಗಳನ್ನು ರೂಪಿಸುತ್ತವೆ.

B. ಪೊಟ್ಯಾಸಿಯಮ್ ಮತ್ತು ಸೋಡಿಯಂ ಆಮ್ಲಜನಕದೊಂದಿಗೆ ಎಷ್ಟು ತೀವ್ರವಾಗಿ ಪ್ರತಿಕ್ರಿಯಿಸುತ್ತವೆ ಎಂದರೆ ಅವು ಬೆಂಕಿಯನ್ನು ಹಿಡಿಯುತ್ತವೆ. ✓

C. ಎಲ್ಲಾ ಲೋಹಗಳು ಒಂದೇ ತೀವ್ರತೆಯಿಂದ ಗಾಳಿಯಲ್ಲಿ ಉರಿಯುತ್ತವೆ ಮತ್ತು ಲೋಹದ ಆಕ್ಸೈಡ್ಗಳನ್ನು ರೂಪಿಸುತ್ತವೆ.

D. ಲೋಹದ ಆಕ್ಸೈಡ್ಗಳನ್ನು ಉತ್ಪಾದಿಸುವ ಜ್ವಾಲೆಯೊಂದಿಗೆ ಕಬ್ಬಿಣ ಮತ್ತು ತಾಮ್ರವು ಉರಿಯುತ್ತದೆ.

**Q17** Plant Kingdom (Divisions)

ಎರಡು ನಾಳೀಯ ಸಸ್ಯಗಳು: ಒಂದು ಶಂಕುಗಳಲ್ಲಿ ಬೀಜಗಳನ್ನು ಉತ್ಪಾದಿಸುತ್ತದೆ, ಇನ್ನೊಂದು ಹಣ್ಣುಗಳಲ್ಲಿ ಬೀಜಗಳನ್ನು ಹೊಂದಿರುತ್ತದೆ. ಈ ಕೆಳಗಿನ ಯಾವ ಹೇಳಿಕೆಯು ಈ ಗುಂಪುಗಳನ್ನು ನಿಖರವಾಗಿ ಪ್ರತ್ಯೇಕಿಸುತ್ತದೆ?

A. ಮೊದಲನೆಯದು ಅನಾವೃತ ಬೀಜಸಸ್ಯ, ಎರಡನೆಯದು ಆವೃತ ಬೀಜಸಸ್ಯ ✓

B. ಮೊದಲನೆಯದು ಶೈವಲ ಸಸ್ಯ, ಎರಡನೆಯದು ಅನಾವೃತ ಬೀಜಸಸ್ಯ

C. ಮೊದಲನೆಯದು ಪುಚ್ಛಸಸ್ಯ, ಎರಡನೆಯದು ಶೈವಲ ಸಸ್ಯ

D. ಮೊದಲನೆಯದು ಆವೃತ ಬೀಜಸಸ್ಯ, ಎರಡನೆಯದು ಪುಚ್ಛಸಸ್ಯ

**Q18** Plant Tissues & Transport

ಈ ಸಾದೃಶ್ಯವನ್ನು ಪೂರ್ಣಗೊಳಿಸಿ.
ನೀರಿನಲ್ಲಿ ಡೈ: ವಿಸರಣೆ : ನೀರನ್ನು ಹೀರಿಕೊಳ್ಳುವ ಬೇರುಗಳು : ________.

A. ಪರಾಸರಣ ✓

B. ದ್ಯುತಿಸಂಶ್ಲೇಷಣೆ

C. ಸೋಸುವಿಕೆ

D. ಆವಿಯಾಗುವಿಕೆ

**Q19** Pollution (Air, Water, Soil, Noise)

ಕಾಂಪೋಸ್ಟ್ ಗೊಬ್ಬರ ತಯಾರಿಸುವುದು ಪರಿಸರಕ್ಕೆ ಹೇಗೆ ಪ್ರಯೋಜನಕಾರಿಯಾಗಿದೆ?

A. ಇದು ಜೈವಿಕವಾಗಿ ವಿಘಟನೀಯ ತ್ಯಾಜ್ಯವನ್ನು ಉತ್ಪಾದಿಸುತ್ತದೆ

B. ಇದು ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯವನ್ನು ಹೆಚ್ಚಿಸುತ್ತದೆ

C. ಇದು ಸಾವಯವ ತ್ಯಾಜ್ಯವನ್ನು ಉಪಯುಕ್ತ ಗೊಬ್ಬರವಾಗಿ ಪರಿವರ್ತಿಸುತ್ತದೆ ✓

D. ಇದು ವಿಷಕಾರಿ ಅನಿಲಗಳನ್ನು ಬಿಡುಗಡೆ ಮಾಡುತ್ತದೆ

**Q20** Pollution (Air, Water, Soil, Noise)

ಆಹಾರದಿಂದ ಕೀಟನಾಶಕಗಳ ಉಳಿಕೆಗಳನ್ನು, ತೊಳೆಯುವ ಮೂಲಕ ತೆಗೆದುಹಾಕಲು ಸಾಧ್ಯವಿಲ್ಲ ಏಕೆ?

A. ಏಕೆಂದರೆ ಅವು ಅಂಗಾಂಶಗಳಲ್ಲಿ ಸಂಗ್ರಹವಾಗಿರುತ್ತವೆ ✓

B. ಏಕೆಂದರೆ ಅವು ಸುಲಭವಾಗಿ ಆವಿಯಾಗುತ್ತವೆ

C. ಏಕೆಂದರೆ ಅವು ಮೇಲ್ಮೈಯಲ್ಲಿ ಮಾತ್ರ ಇರುತ್ತವೆ

D. ಏಕೆಂದರೆ ಅವು ನೀರಿನಲ್ಲಿ ಕರಗುತ್ತವೆ

**Q21** Reflection & Refraction

ಬಿಳಿ ಬೆಳಕು ಒಂದು ಪಟ್ಟಕದ ಮೂಲಕ ಹಾದುಹೋಗುವಾಗ ವಿಭಿನ್ನ ಬಣ್ಣಗಳಾಗಿ ವಿಭಜನೆಯಾಗುತ್ತದೆ ಆದರೆ ಒಂದು ಗಾಜಿನ ಚಪ್ಪಡಿಯ ಮೂಲಕ ಹಾದುಹೋಗುವಾಗ ಏಕೆ ವಿಭಜನೆಯಾಗುವುದಿಲ್ಲ?

A. ಏಕೆಂದರೆ ಪಟ್ಟಕವು ಚಪ್ಪಡಿಗಿಂತ ತೆಳ್ಳಗಾಗಿರುತ್ತದೆ

B. ಏಕೆಂದರೆ ಪಟ್ಟಕವು ವಿಭಿನ್ನ ವಸ್ತುವಿನಿಂದ ಮಾಡಲ್ಪಟ್ಟಿದೆ

C. ಏಕೆಂದರೆ ಪಟ್ಟಕವು ಸಮಾಂತರವಲ್ಲದ ಬಾಹುಗಳನ್ನು ಹೊಂದಿರುತ್ತದೆ ✓

D. ಏಕೆಂದರೆ ಪಟ್ಟಕವು ಪಾರದರ್ಶಕವಾಗಿರುತ್ತದೆ

**Q22** Types (Combination, Decomposition, etc.)

ದ್ವಿ ಸ್ಥಾನಪಲ್ಲಟ ಕ್ರಿಯೆಯ ಮುಖ್ಯ ಲಕ್ಷಣವೇನು?

A. ಎರಡು ಧಾತುಗಳ ಸಂಯೋಜನೆ

B. ಆಮ್ಲದಿಂದ ಜಲಜನಕ ಹೊರತೆಗೆಯುವುದು

C. ಪ್ರತಿಕ್ರಿಯಾಕಾರಿಗಳ ನಡುವೆ ಅಯಾನುಗಳ ವಿನಿಮಯ ✓

D. ಒಂದು ವಸ್ತುವಿನಿಂದ ಆಮ್ಲಜನಕವನ್ನು ಪಡೆದುಕೊಳ್ಳುವುದು

**Q23** Wave Properties (Frequency, Wavelength)

ಎರಡು ಶಬ್ದಗಳು ಒಂದೇ ತರಂಗಾಂತರವನ್ನು ಹೊಂದಿದ್ದು, ಬೇರೆ ಬೇರೆ ಕಂಪನವಿಸ್ತಾರಗಳನ್ನು ಹೊಂದಿದ್ದರೆ, ಯಾವುದು ವಿಭಿನ್ನವಾಗಿರುತ್ತದೆ?

A. ಅವುಗಳ ಸ್ಥಾಯಿಗಳು ವಿಭಿನ್ನವಾಗಿರುತ್ತವೆ

B. ಅವುಗಳ ವೇಗಗಳು ವಿಭಿನ್ನವಾಗಿರುತ್ತವೆ

C. ಅವುಗಳ ತಾರಕತೆಗಳು ವಿಭಿನ್ನವಾಗಿರುತ್ತವೆ ✓

D. ಅವುಗಳ ದಿಕ್ಕುಗಳು ವಿಭಿನ್ನವಾಗಿರುತ್ತವೆ

**Q24** Work, Energy & Power

ಸಾಮರ್ಥ್ಯದ (power) ಕುರಿತಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ?

A. ಸಾಮರ್ಥ್ಯವು ಬಲದ ಮೇಲೆ ಮಾತ್ರ ಅವಲಂಬಿತವಾಗಿರುತ್ತದೆ

B. ಸಾಮರ್ಥ್ಯವು ಸಮಯವನ್ನು ಅವಲಂಬಿಸಿಲ್ಲ

C. ಸಾಮರ್ಥ್ಯ ಮತ್ತು ಕೆಲಸವು ಒಂದೇ SI ಏಕಮಾನವನ್ನು ಹೊಂದಿವೆ

D. ಸಾಮರ್ಥ್ಯವು ಕೆಲಸವು ಎಷ್ಟು ತ್ವರಿತವಾಗಿ ನಡೆದಿದೆ ಎಂಬುದನ್ನು ಅಳೆಯುತ್ತದೆ ✓

Blackbook Vocabulary — Now in the App! ▶ Download Now on Google Play

**Q25** pH Scale & Indicators

ಮೀಥೈಲ್ ಆರೇಂಜ್ ಯಾವ ಮಾಧ್ಯಮದಲ್ಲಿ ಕೆಂಪು ಬಣ್ಣಕ್ಕೆ ತಿರುಗುತ್ತದೆ?

A. ತಟಸ್ಥ ದ್ರಾವಣದಲ್ಲಿ

B. ಆಮ್ಲ ಮತ್ತು ಪ್ರತ್ಯಾಮ್ಲ ಎರಡರಲ್ಲೂ

C. ಆಮ್ಲದಲ್ಲಿ ಮಾತ್ರ ✓

D. ಪ್ರತ್ಯಾಮ್ಲದಲ್ಲಿ ಮಾತ್ರ

Blackbook Vocabulary — Now in the App! ► Download Now on Google Play

## General Science

25 Questions • Answer Key

**Q1** Atomic Structure & Models

ಈ ಕೆಳಗಿನವುಗಳಲ್ಲಿ ಯಾವುದು ಪರಮಾಣುವಿನ ದ್ರವ್ಯರಾಶಿ ಸಂಖ್ಯೆಯನ್ನು ಸರಿಯಾಗಿ ವ್ಯಾಖ್ಯಾನಿಸುತ್ತದೆ?

A. ಎಲೆಕ್ಟ್ರಾನ್‌ಗಳು ಮತ್ತು ನ್ಯೂಟ್ರಾನ್‌ಗಳ ಮೊತ್ತ

B. ಪ್ರೋಟಾನ್‌ಗಳು ಮತ್ತು ನ್ಯೂಟ್ರಾನ್‌ಗಳ ಮೊತ್ತ ✓

C. ಎಲೆಕ್ಟ್ರಾನ್‌ಗಳ ಸಂಖ್ಯೆ ಮಾತ್ರ

D. ಪ್ರೋಟಾನ್‌ಗಳ ಸಂಖ್ಯೆ ಮಾತ್ರ

**Q2** Atomic Structure & Models

ಒಬ್ಬ ವಿಜ್ಞಾನಿಯು ಅಪರಿಚಿತ ಪರಮಾಣುವನ್ನು ವಿಶ್ಲೇಷಿಸುತ್ತಿರುವುದನ್ನು ಊಹಿಸಿಕೊಳ್ಳಿ ಮತ್ತು ಅದು ದ್ರವ್ಯರಾಶಿ ಸಂಖ್ಯೆ 24 ಮತ್ತು ಪರಮಾಣು ಸಂಖ್ಯೆ 12 ಹೊಂದಿದೆ ಎಂದು ಭಾವಿಸಿ. ನ್ಯೂಕ್ಲಿಯರ್ ಕ್ರಿಯೆಯಿಂದಾಗಿ ಪರಮಾಣುವು ಎರಡು ನ್ಯೂಟ್ರಾನ್‌ಗಳನ್ನು ಪಡೆದರೆ, ಅದರ ಹೊಸ ದ್ರವ್ಯರಾಶಿ ಸಂಖ್ಯೆ ಎಷ್ಟಾಗುತ್ತದೆ?

A. 14

B. 12

C. 26 ✓

D. 24

**Q3** Basic Organic Chemistry

ಸಾವಯವ ಸಂಯುಕ್ತ ಸಂಶ್ಲೇಷಣೆಯ ಜೀವಬಲ ಸಿದ್ಧಾಂತವನ್ನು ಫ್ರೆಡ್ರಿಕ್ ವೋಹ್ಲರ್ ಹೇಗೆ ಪ್ರಶ್ನಿಸುತ್ತಾರೆ?

A. ಇಂಗಾಲದ ಕ್ಯಾಟನೇಷನ್ ಗುಣವನ್ನು ಕಂಡುಹಿಡಿಯುವ ಮೂಲಕ

B. ಪ್ರಯೋಗಾಲಯದಲ್ಲಿ ಇಂಗಾಲದ ಡೈಆಕ್ಸೈಡ್ ಅನ್ನು ಸಂಶ್ಲೇಷಿಸುವ ಮೂಲಕ

C. ಅಮೋನಿಯಂ ಸೈನೇಟ್‌ನಿಂದ ಯೂರಿಯವನ್ನು ತಯಾರಿಸುವ ಮೂಲಕ ✓

D. ಸಜೀವ ವ್ಯವಸ್ಥೆಗಳಿಂದ ನೈಸರ್ಗಿಕ ವಸ್ತುಗಳನ್ನು ಹೊರತೆಗೆಯುವ ಮೂಲಕ

**Q4** Chemistry

ಲೋಹಗಳು ಮತ್ತು ಅವುಗಳ ಗುಣಲಕ್ಷಣಗಳ ಅಧ್ಯಯನವು ರಸಾಯನಶಾಸ್ತ್ರದ ಯಾವ ಶಾಖೆಗೆ ಸೇರುತ್ತದೆ?

A. ಜೀವರಸಾಯನಶಾಸ್ತ್ರ

B. ವಿಶ್ಲೇಷಣಾತ್ಮಕ ರಸಾಯನಶಾಸ್ತ್ರ

C. ಅಜೈವಿಕ ರಸಾಯನಶಾಸ್ತ್ರ ✓

D. ಭೌತಿಕ ರಸಾಯನಶಾಸ್ತ್ರ

**Q5** Circulatory System (Heart, Blood)

ಮಾನವರಲ್ಲಿ ಆಮ್ಲಜನಕಕ್ಕೆ ಹೆಚ್ಚು ಸಂಬಂಧಿಸಿದ ಉಸಿರಾಟದ ವರ್ಣದ್ರವ್ಯ ಯಾವುದು?

A. ಹಿಮೋಗ್ಲೋಬಿನ್ ✓

B. ಹಿಮೋಸಯಾನಿನ್

C. ಕ್ಲೋರೋಫಿಲ್

D. ಕೆರಾಟಿನ್

**Q6** Current Electricity (Ohm's Law, Circuits)

ಒಂದುವೇಳೆ ________________ ಆಗಿದ್ದರೆ, ವಿದ್ಯುನ್ಮಂಡಲದಲ್ಲಿನ ಎರಡು ಬಿಂದುಗಳ ನಡುವಿನ ವಿಭವಾಂತರವು 1 ವೋಲ್ಟ್ ಆಗಿರುತ್ತದೆ.

A. 1 ಕೂಲಮ್ ವಿದ್ಯುದಾವೇಶವನ್ನು ಚಲಿಸುವಂತೆ ಮಾಡಿದಾಗ 1 ಜೌಲ್ ಕೆಲಸವು ನಡೆದಿದ್ದರೆ ✓

B. 1 ಸೆಕೆಂಡಿಗೆ 1 ಆಂಪಿಯರ್ ವಿದ್ಯುತ್ ಪ್ರವಾಹ ಪ್ರವಹಿಸಿದರೆ

C. 1 ಸೆಕೆಂಡಿನಲ್ಲಿ 1 ಜೂಲ್ ಶಕ್ತಿಯು ಬಳಕೆಯಾದರೆ

D. 1 ಓಮ್ ರೋಧದ ಮೂಲಕ 1 ಕೂಲಮ್ ವಿದ್ಯುದಾವೇಶವು ಪ್ರವಹಿಸಿದರೆ

**Q7** Echo, Resonance, Doppler Effect

ಈ ಕೆಳಗಿನ ಯಾವ ಕ್ರಮವು ಒಂದು ದೊಡ್ಡ ಸಭಾಂಗಣದಲ್ಲಿನ ಅನುರಣನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕಡಿಮೆ ಮಾಡುತ್ತದೆ?

A. ಸಾಮಾನ್ಯ ಬಣ್ಣದಿಂದ ಗೋಡೆಗಳಿಗೆ ಬಣ್ಣ ಬಳಿಯುವುದು

B. ಸಭಾಂಗಣದಲ್ಲಿ ಕೆಲವು ಆಸನಗಳನ್ನು ತೆಗೆದುಹಾಕುವುದು

C. ಸಭಾಂಗಣಕ್ಕೆ ಹೆಚ್ಚು ಧ್ವನಿವರ್ಧಕಗಳನ್ನು ಸೇರಿಸುವುದು

D. ಸ್ಥಳದುದ್ದಕ್ಕೂ ಪರದೆಗಳು ಮತ್ತು ಜಮಖಾನೆಗಳನ್ನು ಅಳವಡಿಸುವುದು ✓

**Q8** Ecology & Environment

ಅರಣ್ಯದಲ್ಲಿ ಉಂಟಾಗುವ ದೀರ್ಘಕಾಲದ ಬರಗಾಲವು ಗಿಡಗಳ ವ್ಯಾಪಕ ಸಾವಿಗೆ ಕಾರಣವಾಗುತ್ತದೆ. ಭೂಮಿಯ ಅಂತರ್ಸಂಪರ್ಕಿತ ಗೋಳಗಳ ಆಧಾರದ ಮೇಲೆ, ಇದರ ಸಂಭಾವ್ಯ ಪರಿಣಾಮವು ಹೀಗಿರಬಹುದು:

A. ಗೋಳಗಳಾದ್ಯಂತ ಆಮ್ಲಜನಕದ ಸಮತೋಲನ ತೊಂದರೆಗೊಳಗಾಗುವುದು ✓

B. ಜೀವಗೋಳದಲ್ಲಿ ಸ್ಥಿರವಾದ ಇಂಗಾಲದ ಡೈಆಕ್ಸೈಡ್ ಮಟ್ಟಗಳು

C. ವಾತಾವರಣದಲ್ಲಿ ಆಮ್ಲಜನಕದ ಉತ್ಪಾದನೆಯಲ್ಲಿ ಹೆಚ್ಚಳ

D. ಬಂಡೆಗಳಲ್ಲಿ ಸಾರಜನಕದ ಮಟ್ಟಗಳಲ್ಲಿ ತಕ್ಷಣದ ಏರಿಕೆ

Blackbook Vocabulary — Now in the App! ► Download Now on Google Play

**Q9** Ecosystem & Food Chain

ಗುಲಾಬಿ ಗಿಡಗಳು, ಮಲ್ಲಿಗೆ ಗಿಡಗಳು, ಕೀಟಗಳು, ಹಾವು ಮತ್ತು ಪಕ್ಷಿಗಳನ್ನು ಹೊಂದಿರುವ ಉದ್ಯಾನ ಪರಿಸರ ವ್ಯವಸ್ಥೆಯಲ್ಲಿ, ಯಾವ ಗುಂಪು ಸೌರಶಕ್ತಿಯನ್ನು ಸೆರೆಹಿಡಿದು ಇತರ ಜೀವಿಗಳಿಗೆ ಆಹಾರವಾಗಿ ಪರಿವರ್ತಿಸುತ್ತದೆ?

A. ಗುಲಾಬಿ ಮತ್ತು ಮಲ್ಲಿಗೆ ಗಿಡಗಳು ✓

B. ಪಕ್ಷಿಗಳು

C. ಗುಲಾಬಿ ಗಿಡ ಮಾತ್ರ

D. ಕೀಟಗಳು

**Q10** Ecosystem & Food Chain

ಈ ಕೆಳಗಿನವುಗಳಲ್ಲಿ ಯಾವುದು ಆಹಾರ ಜಾಲವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಆಹಾರ ಸರಪಳಿಗಳಲ್ಲಿ ಬಹು ಪೋಷಣಾ ಸ್ತರಗಳಲ್ಲಿರುವ ವಿಘಟಕ ಜೀವಿಗಳ ಪಾತ್ರ

B. ವಿವಿಧ ಆಹಾರ ಸರಪಳಿಗಳಲ್ಲಿನ ಉತ್ಪಾದಕ ಜೀವಿಗಳ ನಡುವಿನ ಸಂಬಂಧ

C. ಹಲವಾರು ಆಹಾರ ಸರಪಳಿಗಳಲ್ಲಿನ ಪೋಷಣಾ ಸ್ತರಗಳ ನಡುವಿನ ಅಂತರಸಂಪರ್ಕಗಳು ✓

D. ಆಹಾರ ಸರಪಳಿಗಳಲ್ಲಿ ಶಕ್ತಿ ವರ್ಗಾವಣೆಯ ದ್ವಿದಿಶಾತ್ಮಕ ಮಾರ್ಗ

**Q11** Magnetic Effects of Current

ಫ್ಲೆಮಿಂಗ್ ಅವರ ಎಡಗೈ ನಿಯಮದಲ್ಲಿ, ಯಾವ ಬೆರಳು ಕಾಂತಕ್ಷೇತ್ರದ ದಿಕ್ಕನ್ನು ಪ್ರತಿನಿಧಿಸುತ್ತದೆ?

A. ಉಂಗುರದ ಬೆರಳು

B. ತೋರುಬೆರಳು ✓

C. ಮಧ್ಯದ ಬೆರಳು

D. ಹೆಬ್ಬೆರಳು

**Q12** Mechanics

ಒಬ್ಬ ವ್ಯಕ್ತಿಯು 5 ಮೀಟರ್ ಪೂರ್ವಕ್ಕೆ, ನಂತರ 12 ಮೀಟರ್ ಪಶ್ಚಿಮಕ್ಕೆ ಒಂದು ನೇರ ಹಾದಿಯಲ್ಲಿ ನಡೆದರೆ, ಈ ಕೆಳಗಿನ ಯಾವ ಮೌಲ್ಯವು ಆ ವ್ಯಕ್ತಿಯ ಸ್ಥಾನಪಲ್ಲಟದ ಪ್ರಮಾಣವನ್ನು ಪ್ರತಿನಿಧಿಸುತ್ತದೆ?

A. 17 ಮೀಟರ್

B. 7 ಮೀಟರ್ ✓

C. 5 ಮೀಟರ್

D. 12 ಮೀಟರ್

**Q13** Nervous System & Brain

ಆಹಾರವನ್ನು ನೋಡಿದಾಗ ಬರುವ ಜೊಲ್ಲು ಸುರಿಸುವಿಕೆಯು ಯಾವ ರೀತಿಯ ಕ್ರಿಯೆಗೆ ಉದಾಹರಣೆಯಾಗಿದೆ?

A. ಸ್ವಯಂಪ್ರೇರಿತ

B. ಅನೈಚ್ಛಿಕ ✓

C. ಯೋಜಿತ

D. ಸ್ವಯಂ-ಪ್ರಸಾರಿತ

**Q14** Newton's Laws of Motion

0.6 kg ತೂಕದ ಒಂದು ಸಾಕರ್ ಬಾಲ್ ಮತ್ತು 1.0 kg ಒಂದು ತೂಕದ ಬ್ಯಾಸ್ಕೆಟ್‌ಬಾಲ್ ಅನ್ನು ಒಂದೇ ವೇಗೋತ್ಕರ್ಷದೊಂದಿಗೆ ಒದೆಯಲಾಗುತ್ತದೆ. ನ್ಯೂಟನ್‌ನ ಎರಡನೇ ನಿಯಮದ ಪ್ರಕಾರ ಯಾವುದು ಹೆಚ್ಚಿನ ಬಲವನ್ನು ಅನುಭವಿಸುತ್ತದೆ?

A. ದ್ರವ್ಯರಾಶಿಯನ್ನು ಪರಿಗಣಿಸದೇ ಹೆಚ್ಚಿನ ವೇಗೋತ್ಕರ್ಷವನ್ನು ಹೊಂದಿರುವ ಬಾಲ್

B. ಎರಡೂ ಸಹ ಒಂದೇ ಬಲವನ್ನು ಅನುಭವಿಸುತ್ತವೆ

C. ಸಾಕರ್ ಬಾಲ್, ಏಕೆಂದರೆ ಅದು ಹಗುರವಾಗಿರುತ್ತದೆ

D. ಬ್ಯಾಸ್ಕೆಟ್‌ಬಾಲ್, ಏಕೆಂದರೆ ಅದು ಹೆಚ್ಚಿನ ದ್ರವ್ಯರಾಶಿಯನ್ನು ಹೊಂದಿದೆ ✓

**Q15** Physical & Chemical Properties

ಉಕ್ಕಿನಿಂದ ತಯಾರಿಸಿದ ಕೈಗಾರಿಕಾ ಯಂತ್ರಗಳು ಸಾಮಾನ್ಯವಾಗಿ ತೇವಾಂಶವುಳ್ಳ ಪರ್ಯಾವರಣಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಸಂಕ್ಷಾರಣವನ್ನು ಕಡಿಮೆ ಮಾಡಲು ಮತ್ತು ಯಂತ್ರದ ದೀರ್ಘಕಾಲಿಕ ಬಾಳಿಕೆಯನ್ನು ಖಚಿತಪಡಿಸಿಕೊಳ್ಳಲು ಈ ಕೆಳಗಿನ ಯಾವ ದಿನನಿತ್ಯದ ನಿರ್ವಹಣಾ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗಿದೆ?

A. ಒಣ ಟವೆಲ್‌ಗಳಿಂದ ಯಂತ್ರಗಳನ್ನು ಒರೆಸುವುದು

B. ತೆರೆದ ಭಾಗಗಳಿಗೆ ಲ್ಯೂಬ್ರಿಕೇಟ್ ಎಣ್ಣೆಯನ್ನು ಹಚ್ಚುವುದು ✓

C. ಕಾಗದದ ಹಾಳೆಗಳಿಂದ ಯಂತ್ರಗಳನ್ನು ಮುಚ್ಚುವುದು

D. ಯಂತ್ರಗಳ ಮೇಲೆ ನೀರು ಸಿಂಪಡಿಸುವುದು

**Q16** Plant Tissues & Transport

ಸಸ್ಯಗಳಲ್ಲಿರುವ ಯಾವ ಸರಳ ಶಾಶ್ವತ ಅಂಗಾಂಶವು ದ್ಯುತಿಸಂಶ್ಲೇಷಣೆ ಮತ್ತು ಆಹಾರದ ಸಂಗ್ರಹಣೆಗೆ ಮುಖ್ಯ ಕಾರಣವಾಗಿದೆ?

A. ಕೋಲಂಕೈಮ

B. ಫ್ಲೋಯಂ

C. ಸ್ಕ್ಲೀರಂಕೈಮ

D. ಪ್ಯಾರಂಕೈಮ ✓

Blackbook Vocabulary — Now in the App! ▶ Download Now on Google Play

**Q17** Plant Tissues & Transport

ಈ ಕೆಳಗಿನ ಯಾವ ಸಸ್ಯ ಅಂಗಾಂಶವು ಪರಿಪಕ್ವವಾಗಿದ್ದಾಗ ನಿರ್ಜೀವ ಸ್ಥಿತಿಯಲ್ಲಿದ್ದರೂ ಸಹ ನೀರು ಮತ್ತು ಖನಿಜಾಂಶಗಳ ಸಾಗಣೆಯಲ್ಲಿ ಕ್ರಿಯಾಶೀಲವಾಗಿರುತ್ತದೆ?

A. ಪ್ಯಾರೆಂಚೈಮಾ
B. ಕ್ಸೈಲಂ ✔
C. ಫ್ಲೋಯೆಂ
D. ಕೊಲೆಂಚೈಮಾ

**Q18** Pollution (Air, Water, Soil, Noise)

_____ ಹೊರತುಪಡಿಸಿ ಸಾರಜನಕ ರಸಗೊಬ್ಬರಗಳ ಮಿತಿಮೀರಿದ ಬಳಕೆಯಿಂದ ಉಂಟಾಗುವ ಪರಿಣಾಮಗಳೆಲ್ಲವೂ ಈ ಕೆಳಗಿನಂತಿವೆ.

A. ಆಮ್ಲಜನಕ ಬರಿದಾಗುವಿಕೆಯಿಂದ ಮೀನುಗಳು ಸಾಯುವುದು
B. ಜಲಮೂಲಗಳಲ್ಲಿ ಹೆಚ್ಚಿದ ಆಮ್ಲಜನಕ ✔
C. ಮಣ್ಣು ಮತ್ತು ನೀರಿನ ದರ್ಜೆ ಕಡಿಮೆಯಾಗುವಿಕೆ
D. ಪಾಚಿಗಳ ಅತಿಯಾದ ಬೆಳವಣಿಗೆ

**Q19** Reflection & Refraction

ಒಬ್ಬ ವಿದ್ಯಾರ್ಥಿಯು ನೀರಿನಲ್ಲಿ (ವಕ್ರೀಭವನ ಸೂಚ್ಯಂಕ 1.33) ಅರ್ಧ ಮುಳುಗಿರುವ ಒಂದು ಪೆನ್ಸಿಲ್ ಅನ್ನು ಗಮನಿಸುತ್ತಾನೆ ಮತ್ತು ಪೆನ್ಸಿಲ್ ವಕ್ರೀಭವನ ಸೂಚ್ಯಂಕ 1.5 ಅನ್ನು ಹೊಂದಿರುವ ತೋರಿಕೆಯ ಬಾಗುವಿಕೆಗಿಂತ ದ್ರವದಲ್ಲಿರುವಾಗ ತೋರಿಕೆಯ ಬಾಗುವಿಕೆಯು ಕಡಿಮೆ ಇರುವುದನ್ನು ಗಮನಿಸುತ್ತಾನೆ. ವಕ್ರೀಭವನ ಸೂಚ್ಯಂಕ ಮತ್ತು ಬೆಳಕಿನ ಬಾಗುವಿಕೆಯ ನಡುವಿನ ಸಂಬಂಧದ ಬಗ್ಗೆ ಇದು ಏನನ್ನು ಸೂಚಿಸುತ್ತದೆ?

A. ಎಲ್ಲಾ ದ್ರವಗಳಿಗೂ ಬಾಗುವಿಕೆಯು ಒಂದೇ ಆಗಿರುತ್ತದೆ
B. ವಕ್ರೀಭವನ ಸೂಚ್ಯಂಕವು ಬಾಗುವಿಕೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ
C. ಹೆಚ್ಚಿನ ವಕ್ರೀಭವನ ಸೂಚ್ಯಂಕವು ಬಾಗುವಿಕೆಯನ್ನು ಹೆಚ್ಚಿಸುತ್ತದೆ ✔
D. ಹೆಚ್ಚಿನ ವಕ್ರೀಭವನ ಸೂಚ್ಯಂಕವು ಬಾಗುವಿಕೆಯನ್ನು ಕಡಿಮೆ ಮಾಡುತ್ತದೆ

**Q20** Separation Techniques

ವಿಜ್ಞಾನಿಯೊಬ್ಬರು ಮರಳಿನೊಂದಿಗೆ ಬೆರೆತಿರುವ ಅಯೋಡಿನ್ ಮಿಶ್ರಣದಿಂದ ಶುದ್ಧ ಘನ ಅಯೋಡಿನ್ ಅನ್ನು ಪಡೆಯಲು ಬಯಸುತ್ತಾರೆ. ಇದಕ್ಕಾಗಿ ಅವರು ತಾಪಮಾನ ಬದಲಾವಣೆಯ ಯಾವ ಪ್ರಕ್ರಿಯೆಯನ್ನು ಬಳಸಬೇಕು?

A. ಹೆಪ್ಪುಗಟ್ಟುವಿಕೆ
B. ಉತ್ಪತನ ✔
C. ಸಾಂದ್ರೀಕರಣ
D. ಕರಗುವಿಕೆ

**Q21** Sound

ಈ ಕೆಳಗಿನ ಯಾವ ಹೇಳಿಕೆಯು ಶಬ್ದವು ನಿರ್ವಾತದ ಮೂಲಕ ಏಕೆ ಚಲಿಸುವುದಿಲ್ಲ ಎಂಬುದನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

A. ನಿರ್ವಾತದಲ್ಲಿರುವ ಶಬ್ದ ತರಂಗಗಳು ತಮ್ಮ ಸ್ಥಾಯಿಯನ್ನು ಕೇಳಿಸಲಾಗದ ಮಟ್ಟಕ್ಕೆ ಬದಲಾಯಿಸುತ್ತವೆ
B. ಶಬ್ದಕ್ಕೆ ಚಲಿಸಲು ಬೆಳಕು ಬೇಕಾಗುತ್ತದೆ, ಮತ್ತು ನಿರ್ವಾತದಲ್ಲಿ ಬೆಳಕು ಇರುವುದಿಲ್ಲ
C. ನಿರ್ವಾತದಲ್ಲಿ ಯಾವುದೇ ಅಡೆತಡೆಗಳಿಲ್ಲದ ಕಾರಣ ಶಬ್ದವು ವೇಗವಾಗಿ ಚಲಿಸುತ್ತದೆ
D. ಶಕ್ತಿಯನ್ನು ವರ್ಗಾಯಿಸಲು ಶಬ್ದಕ್ಕೆ ಕಣಗಳು ಬೇಕಾಗುತ್ತವೆ, ಆದರೆ ನಿರ್ವಾತದಲ್ಲಿ ಯಾವುದೇ ಕಣಗಳಿರುವುದಿಲ್ಲ ✔

**Q22** Types (Combination, Decomposition, etc.)

ಈ ಕೆಳಗಿನ ಯಾವ ಗೋಚರ ಬದಲಾವಣೆಯು, ತಾಮ್ರದ ಸಲ್ಫೇಟ್ ದ್ರಾವಣದೊಂದಿಗೆ ಕಬ್ಬಿಣವು ವರ್ತಿಸಿದಾಗ ಉಂಟಾಗುವ ಸ್ಥಾನಪಲ್ಲಟ ಕ್ರಿಯೆಯನ್ನು ಖಚಿತಪಡಿಸುತ್ತದೆ?

A. ದ್ರಾವಣದ ತಾಪಮಾನವು ಹಠಾತ್ತಾಗಿ ಇಳಿಯುತ್ತದೆ
B. ಬಣ್ಣರಹಿತ ಅನಿಲವು ತ್ವರಿತವಾಗಿ ಬಿಡುಗಡೆಯಾಗುತ್ತದೆ
C. ಬಿಳಿಯ ಪ್ರಕ್ಷೇಪವು ತಕ್ಷಣವೇ ರೂಪುಗೊಳ್ಳುತ್ತದೆ
D. ಕೆಂಪು ಮಿಶ್ರಿತ-ಕಂದು ಬಣ್ಣದ ತಾಮ್ರದ ಸಂಗ್ರಹಣೆಗಳು ಕಾಣಿಸಿಕೊಳ್ಳುತ್ತವೆ ✔

**Q23** Work, Energy & Power

ಒಂದು ವಸ್ತುವಿನ ಮೇಲೆ 300 N ಬಲವು ವರ್ತಿಸುತ್ತದೆ. ಒಂದು ವೇಳೆ ಬಲವು ಸ್ಥಿರವಾಗಿದ್ದು, ಸ್ಥಾನಪಲ್ಲಟವು ಮೂರು ಪಟ್ಟು ಹೆಚ್ಚಾದರೆ, ನಡೆದ ಕೆಲಸವು ____ ಆಗಿರುತ್ತದೆ.

A. ಒಂಬತ್ತು ಪಟ್ಟು ಆಗುತ್ತದೆ
B. ಮೂರನೇ ಒಂದರಷ್ಟಾಗುತ್ತದೆ
C. ಮೂರು ಪಟ್ಟು ಆಗುತ್ತದೆ ✔
D. ಹಾಗೆಯೇ ಉಳಿಯುತ್ತದೆ

**Q24** Work, Energy & Power

45 N ಬಲವು ಒಂದು ವಸ್ತುವನ್ನು ಬಲದ ದಿಕ್ಕಿನಲ್ಲಿ 3 m ಚಲಿಸುವಂತೆ ಮಾಡುತ್ತದೆ. ಹಾಗಾದರೆ ನಡೆದ ಕೆಲಸವನ್ನು ಲೆಕ್ಕಹಾಕಿರಿ.

A. 155 J
B. 135 J ✔
C. 145 J
D. 125 J

Blackbook Vocabulary — Now in the App! ▶ Download Now on Google Play

**Q25** pH Scale & Indicators

ಮಾನವ ದೇಹದಲ್ಲಿರುವ ಜಠರರಸದ ಅಂದಾಜು ಮೌಲ್ಯ ಎಷ್ಟು?

- **A.** 0.9 -1.2 ✓
- **B.** 10 - 11
- **C.** 7.0 - 7.4
- **D.** 6.5 - 6.8

Blackbook Vocabulary — Now in the App! ► Download Now on Google Play

generated by rank.qmaths.in

## General Science

25 Questions • Answer Key

**Q1** Atoms & Molecules

ರಂಜಕವು (phosphorus) ಹೊಂದಿರುವ ವೇಲೆನ್ಸಿಯನ್ನು ಕೆಳಗಿನ ಯಾವ ಹೇಳಿಕೆಯು ಸರಿಯಾಗಿ ವಿವರಿಸುತ್ತದೆ?

- A. ರಂಜಕವು ಮೂರು ವೇಲನ್ಸಿಯನ್ನು ಮಾತ್ರ ಹೊಂದಿರುತ್ತದೆ
- B. ರಂಜಕವು ಎರಡು ವೇಲನ್ಸಿಯನ್ನು ಮಾತ್ರ ಹೊಂದಿರುತ್ತದೆ
- C. ರಂಜಕವು ಐದು ವೇಲೆನ್ಸಿಯನ್ನು ಮಾತ್ರ ಹೊಂದಿರುತ್ತದೆ
- D. ರಂಜಕವು ಮೂರು ಅಥವಾ ಐದು ವೇಲೆನ್ಸಿಯನ್ನು ಹೊಂದಿರುತ್ತದೆ ✓

**Q2** Basic Organic Chemistry

$CH_3 - CH_2 - C(CH_3)_2 - CH_2 - CH_3$ ಸಂಯುಕ್ತದ IUPAC ಹೆಸರು _____ ಆಗಿದೆ.

- A. 3,3-ಡೈಮೀಥೈಲ್‌ಪೆಂಟೇನ್ ✓
- B. 2-ಮೀಥೈಲ್‌ಹೆಕ್ಸೇನ್
- C. 2,2-ಡೈಮೀಥೈಲ್‌ಪೆಂಟೇನ್
- D. 3-ಈಥೈಲ್‌ಪೆಂಟೇನ್

**Q3** Chemical Bonding (Ionic, Covalent)

ಈ ಕೆಳಗಿನವುಗಳಲ್ಲಿ ಧಾತುವಿನ ಯಾವ ಜೋಡಿಯು ಅಯಾನಿಕ್ ಬಂಧವನ್ನು ರಚಿಸುವ ಸಾಧ್ಯತೆ ಹೆಚ್ಚಿದೆ?

- A. ಸಾರಜನಕ ಮತ್ತು ಆಮ್ಲಜನಕ
- B. ಮೆಗ್ನೀಶಿಯಂ ಮತ್ತು ಕ್ಲೋರಿನ್ ✓
- C. ಜಲಜನಕ ಮತ್ತು ಇಂಗಾಲ
- D. ತಾಮ್ರ ಮತ್ತು ಕಬ್ಬಿಣ

**Q4** Circulatory System (Heart, Blood)

ದೇಹದ ವಿವಿಧ ಅಂಗಾಂಗ ವ್ಯೂಹಗಳ ಮಧ್ಯೆ ಸಂಪರ್ಕ ಏರ್ಪಡಿಸುವುದರಿಂದ ರಕ್ತವು ಒಂದು ಸಂಯೋಜಕ ಅಂಗಾಂಶವಾಗಿದೆ. ರಕ್ತ ಕಣಗಳು ನಿಲಂಬವಾಗಿರುವ ದ್ರವ ಮಾತೃಕೆ ಯಾವುದು?

- A. ಕಿರುತಟ್ಟೆಗಳು
- B. ಪ್ಲಾಸ್ಮಾ ✓
- C. ಕೋಶದ್ರವ್ಯ
- D. ಹಿಮೋಗ್ಲೋಬಿನ್

**Q5** Circulatory System (Heart, Blood)

ಜೀವಕೋಶದ ಹೊರಗಿನ ಹೆಚ್ಚುವರಿ ದ್ರವವನ್ನು ರಕ್ತಕ್ಕೆ ಹಿಂತಿರುಗಿಸಲಾಗದ ಸನ್ನಿವೇಶಕ್ಕೆ ಯಾವ ವ್ಯವಸ್ಥೆಯ ದೋಷವು ಹೆಚ್ಚಾಗಿ ಕಾರಣವಾಗಿದೆ?

- A. ನರಮಂಡಲ ವ್ಯೂಹ
- B. ಜೀರ್ಣಾಂಗ ವ್ಯೂಹ
- C. ರಕ್ತಪರಿಚಲನಾ ವ್ಯೂಹ
- D. ದುಗ್ಧರಸ ವ್ಯೂಹ ✓

**Q6** Current Electricity (Ohm's Law, Circuits)

ಒಂದು ವಸ್ತುವಿನ ರೋಧಕತೆ ಎಂದರೆ, _____ ಹೊಂದಿರುವ ಆ ವಸ್ತುವಿನ ವಾಹಕವು ಹೊಂದಿರುವ ರೋಧವಾಗಿದೆ.

- A. ಏಕಮಾನ ಉದ್ದ ಹಾಗೂ ಅರ್ಧ ಅಡ್ಡ ಛೇದ ವಿಸ್ತೀರ್ಣ
- B. ಅರ್ಧ ಉದ್ದ ಮತ್ತು ದ್ವಿಗುಣ ಅಡ್ಡ ಛೇದ ವಿಸ್ತೀರ್ಣ
- C. ದುಪ್ಪಟ್ಟು ಉದ್ದ ಮತ್ತು ಏಕಮಾನ ಅಡ್ಡ ಛೇದಕ ವಿಸ್ತೀರ್ಣ
- D. ಏಕಮಾನ ಉದ್ದ ಮತ್ತು ಏಕಮಾನ ಅಡ್ಡ-ಛೇದ ವಿಸ್ತೀರ್ಣ ✓

**Q7** Echo, Resonance, Doppler Effect

ಪ್ರತಿಧ್ವನಿಯನ್ನು (echo) ಸ್ಪಷ್ಟವಾಗಿ ಕೇಳಲು ಈ ಕೆಳಗಿನ ಯಾವ ಪರಿಸ್ಥಿತಿ ಅತ್ಯಗತ್ಯ?

- A. ಶಬ್ದದ ಮೂಲವು ಬಹಳ ಪ್ರಬಲವಾಗಿರಬೇಕು
- B. ಕೇಳುಗನು ಚಲಿಸುತ್ತಿರಬೇಕು
- C. ಪ್ರತಿಫಲಿಸುವ ಮೇಲ್ಮೈ ಮೃದುವಾಗಿರಬೇಕು
- D. ಸಮಯದ ಅಂತರವು ಕನಿಷ್ಠ 0.1 ಸೆಕೆಂಡುಗಳಾಗಿರಬೇಕು ✓

**Q8** Electromagnetic Spectrum

ಯಾವ ತರಂಗಾಂತರ ವ್ಯಾಪ್ತಿಯು ಮುಖ್ಯವಾಗಿ ಭೂಮಿಯ ಮೇಲ್ಮೈ ಬಿಸಿಯಾಗಲು ಕಾರಣವಾಗಿದೆ ಮತ್ತು ಹಸಿರುಮನೆ ಪರಿಣಾಮಕ್ಕೆ ತನ್ನ ಕೊಡುಗೆಯನ್ನು ನೀಡುತ್ತದೆ?

- A. ನೇರಳಾತೀತ ವಿಕಿರಣ
- B. ಅತಿಗೆಂಪು ವಿಕಿರಣ ✓
- C. ರೇಡಿಯೋ ತರಂಗಗಳು
- D. ಗೋಚರ ಬೆಳಕು

Blackbook Vocabulary — Now in the App! ▸ Download Now on Google Play

**Q9** Extraction & Metallurgy

ವಿದ್ಯುದ್ವಿಭಜನೀಯ ಶುದ್ಧೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

a. ತಾಮ್ರ, ಸತು ಮತ್ತು ನಿಕಲ್‌ಗಳನ್ನು ವಿದ್ಯುದ್ವಿಭಜನೀಯವಾಗಿ ಶುದ್ಧೀಕರಿಸಲಾಗುತ್ತದೆ.
b. ಈ ವಿಧಾನದಲ್ಲಿ, ಶುದ್ಧ ಲೋಹದ ತೆಳುವಾದ ಪಟ್ಟಿಯನ್ನು ಋಣಾಗ್ರವಾಗಿ ಬಳಸಲಾಗುತ್ತದೆ.
c. ಧನಾಗ್ರದ ಕೆಳಭಾಗದಲ್ಲಿ ಸಂಗ್ರಹಗೊಂಡಿರುವ ಕರಗದ ಕಲ್ಮಶಗಳನ್ನು ಧನಾಗ್ರ ಮಡ್ಡಿ ಎಂದು ಕರೆಯಲಾಗುತ್ತದೆ.

- A. a ಮತ್ತು b ಮಾತ್ರ
- B. a, b ಮತ್ತು c ಎಲ್ಲವೂ ✓
- C. b ಮತ್ತು c ಮಾತ್ರ
- D. a ಮತ್ತು c ಮಾತ್ರ

**Q10** Five Kingdom Classification

ವಿಜ್ಞಾನದ ಶಿಕ್ಷಕರೊಬ್ಬರು ಸೂಕ್ಷ್ಮದರ್ಶಕದ ಅಡಿಯಲ್ಲಿ ಒಂದು ಜೀವಿಯನ್ನು ಗುರುತಿಸುವಂತೆ ವಿದ್ಯಾರ್ಥಿಗಳನ್ನು ಕೇಳುತ್ತಾರೆ. ಆ ಜೀವಿಯು ಏಕಕೋಶೀಯವಾಗಿದ್ದು, ಗಡುಸಾದ ಕೋಶಭಿತ್ತಿಯನ್ನು ಹೊಂದಿದೆ ಮತ್ತು ದ್ಯುತಿಸಂಶ್ಲೇಷಣೆಯ ಮೂಲಕ ಆಮ್ಲಜನಕವನ್ನು ಉತ್ಪಾದಿಸುತ್ತದೆ. ಬಹುಶಃ ಯಾವ ಜೀವಿಯನ್ನು ಗಮನಿಸಲಾಗುತ್ತಿದೆ?

- A. ಅಮೀಬಾ
- B. ಪ್ಯಾರಮೀಸಿಯಂ
- C. ಯುಗ್ಲೆನಾ
- D. ಸೈನೋಬ್ಯಾಕ್ಟೀರಿಯಂ ✓

**Q11** Hydrocarbons (Methane, Ethane, etc.)

ಒಂದು ಆಲ್ಕೇನ್‌ನಲ್ಲಿನ ಇಂಗಾಲದ ಸರಪಳಿಯ ಉದ್ದವು ಹೆಚ್ಚಾದರೆ ಯಾವ ಗುಣದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ?

- A. ದಹ್ಯತೆ
- B. ಕುದಿಯುವ ಬಿಂದು ✓
- C. ವಿದ್ಯುತ್ ವಾಹಕತೆ
- D. ಬಣ್ಣ

**Q12** Magnetic Effects of Current

ಒಂದು ಪ್ರಯೋಗದಲ್ಲಿ ಒಂದು ನೇರವಾದ ವಿದ್ಯುತ್ ವಾಹಕ ತಂತಿಯ ಬಳಿ ಒಂದು ದಿಕ್ಸೂಚಿಯನ್ನು ಇರಿಸಲಾಗುತ್ತದೆ. ದಿಕ್ಸೂಚಿಯ ಮುಳ್ಳು ಏನನ್ನು ಸೂಚಿಸುತ್ತದೆ?

- A. ದಿಕ್ಸೂಚಿಯ ಮುಳ್ಳು ತಂತಿಯಿಂದ ತ್ರಿಜ್ಯೀಯವಾಗಿ ದೂರಕ್ಕೆ ತೋರಿಸುತ್ತದೆ
- B. ದಿಕ್ಸೂಚಿ ಮುಳ್ಳು ತಂತಿಗೆ ಸಮಾಂತರವಾಗಿ ಸರಿಹೊಂದಿಕೊಳ್ಳುತ್ತದೆ
- C. ದಿಕ್ಸೂಚಿಯ ಮುಳ್ಳು ತಂತಿಯ ಸುತ್ತಲಿನ ಕಾಂತೀಯ ಕ್ಷೇತ್ರದ ವೃತ್ತಕ್ಕೆ ಸ್ಪರ್ಶಕೀಯವಾಗಿ ಸರಿಹೊಂದಿಕೊಳ್ಳುತ್ತದೆ ✓
- D. ದಿಕ್ಸೂಚಿಯ ಮುಳ್ಳು ಯಾವುದೇ ಚಲನೆಯನ್ನು ತೋರಿಸುವುದಿಲ್ಲ

**Q13** Mirrors & Lenses

ಒಂದು ವೇಳೆ ವಸ್ತುವಿನ ಮೂರು ಪಟ್ಟು ಗಾತ್ರದ ಬಿಂಬವು ರೂಪುಗೊಂಡಿದ್ದರೆ ಮತ್ತು ಅದು ತಲೆಕೆಳಗಾಗಿದ್ದರೆ, 10 cm ಸಂಗಮ ದೂರವಿರುವ ನಿಮ್ನ ದರ್ಪಣಕ್ಕೆ ಸಂಬಂಧಿಸಿದಂತೆ ವಸ್ತುವಿನ ಸಂಭವನೀಯ ಸ್ಥಾನವೇನು?

- A. ದರ್ಪಣದಿಂದ 13.3 cm ದೂರದಲ್ಲಿ ಇರಿಸಲಾದ ವಸ್ತು ✓
- B. ದರ್ಪಣದಿಂದ 6.6 cm ದೂರದಲ್ಲಿ ಇರಿಸಲಾದ ವಸ್ತು
- C. ದರ್ಪಣದಿಂದ 20 cm ದೂರದಲ್ಲಿ ಇರಿಸಲಾದ ವಸ್ತು
- D. ದರ್ಪಣದಿಂದ 10 cm ದೂರದಲ್ಲಿ ಇರಿಸಲಾದ ವಸ್ತು

**Q14** Mixtures, Solutions, Colloids

ಕಲಿಲ ದ್ರಾವಣದ ಎರಡು ಪ್ರಮುಖ ಘಟಕಗಳು ಯಾವುವು?

- A. ಪ್ರತಿವರ್ತಕದ ಹಂತ ಮತ್ತು ಉತ್ಪನ್ನದ ಮಾಧ್ಯಮ
- B. ದ್ರಾವ್ಯ ಹಂತ ಮತ್ತು ದ್ರಾವಕ ಮಾಧ್ಯಮ
- C. ಚೆದರಿಕೆಯ ಹಂತ ಮತ್ತು ಚೆದರಿಕೆಯ ಮಾಧ್ಯಮ ✓
- D. ಲೋಹದ ಹಂತ ಮತ್ತು ಅಲೋಹ ಮಾಧ್ಯಮ

**Q15** Newton's Laws of Motion

ಈ ಕೆಳಗಿನ ಯಾವ ಸನ್ನಿವೇಶವು ನ್ಯೂಟನ್ ಅವರ ಚಲನೆಯ ಎರಡನೇ ನಿಯಮವನ್ನು ವಿವರಿಸುತ್ತದೆ?

- A. ಒಂದು ಮೇಜಿನ ಮೇಲೆ ನಿಶ್ಚಲ ಸ್ಥಿತಿಯಲ್ಲಿರುವ ಒಂದು ವಸ್ತು
- B. ಒಬ್ಬ ಈಜುಗಾರನು ನೀರನ್ನು ಹಿಂದಕ್ಕೆ ತಳ್ಳಿ ತಾನು ಮುಂದಕ್ಕೆ ಚಲಿಸುತ್ತಾನೆ
- C. ಒಂದು ಸಮತಟ್ಟಾದ ಮೇಲ್ಮೈ ಮೇಲೆ ಸ್ಥಿರವಾದ ಜವದಲ್ಲಿ ಉರುಳುತ್ತಿರುವ ಒಂದು ಚೆಂಡು
- D. ಒಂದು ಭಾರವಾದ ಟ್ರಕ್ ಗೆ ವೇಗೋತ್ಕರ್ಷ ಪಡೆದುಕೊಳ್ಳಲು ಒಂದು ಸಣ್ಣ ಕಾರಿಗಿಂತ ಹೆಚ್ಚಿನ ಬಲವು ಬೇಕಾಗುತ್ತದೆ ✓

Blackbook Vocabulary — Now in the App! ► Download Now on Google Play

**Q16** Newton's Laws of Motion

ಒಂದು ಕಾರನ್ನು ಕ್ರಮೇಣವಾಗಿ 1 m/s ವೇಗಕ್ಕೆ ತಳ್ಳಿದರೆ, ಚಲನೆಯ ಎರಡನೇ ನಿಯಮದ ಪ್ರಕಾರ ಅದರ ಸಂವೇಗದಲ್ಲಿನ ಬದಲಾವಣೆಯನ್ನು ಯಾವುದು ನಿರ್ಧರಿಸುತ್ತದೆ?

A. ಬದಲಾವಣೆಯನ್ನು ನಿರ್ಧರಿಸಲು ಬಲದ ಪರಿಮಾಣ ಮಾತ್ರ ಸಾಕಾಗುತ್ತದೆ

B. ಚಲನೆಯ ದಿಕ್ಕು ಮಾತ್ರ ಸಂವೇಗವನ್ನು ಬದಲಾಯಿಸುತ್ತದೆ

C. ಬಲದ ಪರಿಮಾಣ ಮತ್ತು ಬಲ ಪ್ರಯೋಗಿಸುವ ಸಮಯ ಎರಡೂ ಸಹ ಸಂವೇಗದಲ್ಲಿನ ಬದಲಾವಣೆಯನ್ನು ನಿರ್ಧರಿಸುತ್ತವೆ ✓

D. ಕಾರಿನ ದ್ರವ್ಯರಾಶಿ ಮಾತ್ರ ಸಂವೇಗದಲ್ಲಿನ ಬದಲಾವಣೆಯನ್ನು ನಿರ್ಧರಿಸುತ್ತದೆ

**Q17** Plant Hormones

ಗುರುತ್ವಾನುವರ್ತನೆಯು ಸಸ್ಯಗಳಲ್ಲಿ ಪರಿಣಾಮಕಾರಿ ಬೇರೂರಿಸುವಿಕೆಗೆ ಹೇಗೆ ಸಹಾಯಕವಾಗುತ್ತದೆ?

A. ಇದು ಸಸ್ಯದ ಬೇರುಗಳನ್ನು ಕೆಳಮುಖವಾಗಿ ಬೆಳೆಯಲು ನಿರ್ದೇಶಿಸುತ್ತದೆ, ಸಸ್ಯವನ್ನು ಗಟ್ಟಿಯಾಗಿ ನೆಲೆಯೂರಿಸಿ, ತೇವಾಂಶ ಹಾಗೂ ಪೋಷಕಾಂಶಗಳನ್ನು ಪಡೆಯಲು ಸಹಾಯ ಮಾಡುತ್ತದೆ ✓

B. ಇದು ಬೇರುಗಳನ್ನು ಸೂರ್ಯನ ಬೆಳಕಿನ ಕಡೆಗೆ ಬೆಳೆಯುವಂತೆ ಮಾಡುತ್ತದೆ

C. ಇದು ಬೇರುಗಳು ಕವಲೊಡೆಯುವುದನ್ನು ತಡೆಯುತ್ತದೆ

D. ಇದು ದ್ಯುತಿಸಂಶ್ಲೇಷಣೆಯ ಅಂಗಾಂಶಗಳನ್ನು ಮಣ್ಣಿನೊಳಗೆ ನಿರ್ದೇಶಿಸುತ್ತದೆ

**Q18** Plant Tissues & Transport

ಈ ಕೆಳಗಿನವುಗಳಲ್ಲಿ, ಕ್ಸೈಲಂನಲ್ಲಿ ಯಾವುದನ್ನು ಸಾಗಿಸಲಾಗುತ್ತದೆ?

A. ಅಮೈನೋ ಆಮ್ಲಗಳು

B. ನೀರು ಮತ್ತು ಖನಿಜಾಂಶಗಳು ✓

C. ಗ್ಲೂಕೋಸ್

D. ಪ್ರೋಟೀನ್‌ಗಳು

**Q19** Plant Tissues & Transport

ಮಣ್ಣಿನಿಂದ ನೀರು ಮತ್ತು ಖನಿಜಾಂಶಗಳನ್ನು ಹೀರಿಕೊಳ್ಳುವ ಪ್ರಕ್ರಿಯೆಯಲ್ಲಿ ಬೇರಿನ ರೋಮಗಳು ಸಸ್ಯಗಳಿಗೆ ಹೇಗೆ ಸಹಾಯ ಮಾಡುತ್ತದೆ?

A. ಅವು ಆಹಾರವನ್ನು ಸಂಶ್ಲೇಷಿಸುತ್ತವೆ

B. ಅವು ಯಾಂತ್ರಿಕ ಬೆಂಬಲವನ್ನು ನೀಡುತ್ತವೆ

C. ಅವು ಹೀರಿಕೊಳ್ಳುವ ಮೇಲ್ಮೈ ವಿಸ್ತೀರ್ಣವನ್ನು ಹೆಚ್ಚಿಸುತ್ತವೆ ✓

D. ಅವು ಆಹಾರವನ್ನು ಎಲೆಗಳಿಗೆ ಸಾಗಿಸುತ್ತವೆ

**Q20** Properties & Tests

ಒಬ್ಬ ವಿದ್ಯಾರ್ಥಿಯು ಅಸಿಟಿಕ್ ಆಮ್ಲವನ್ನು ಸೋಡಿಯಂ ಹೈಡ್ರಾಕ್ಸೈಡ್‌ನೊಂದಿಗೆ ಬೆರೆಸುತ್ತಾನೆ ಹಾಗೂ ಗುಳ್ಳೆಗಳು ಏಳುವುದನ್ನು ಗಮನಿಸಿದರೆ, ಈ ಅವಲೋಕನವನ್ನು ಯಾವುದು ವಿವರಿಸುತ್ತದೆ?

A. ಕಾರ್ಬೋನೇಟ್ ನಂತಹ ಮಾಲಿನ್ಯಕಾರಕವು ಅಸ್ತಿತ್ವದಲ್ಲಿದೆ ✓

B. ಕ್ರಿಯೆಯು ಈಗಾಗಲೇ ಪೂರ್ಣಗೊಂಡಿದೆ

C. ನೀರು ಏಕೈಕ ಉತ್ಪನ್ನವಾಗಿ ರೂಪುಗೊಳ್ಳುತ್ತದೆ

D. ಕ್ರಿಯೆಯು ತುಂಬಾ ನಿಧಾನವಾಗಿದೆ

**Q21** Skeletal & Muscular System

ಅಪರೂಪದ ಆನುವಂಶಿಕ ಅಸ್ವಸ್ಥತೆಯು ಒಂದು ನಿರ್ದಿಷ್ಟ ಸಂಯೋಜಕ ಅಂಗಾಂಶದ ಧೃಡವಾದ ಮಾತೃಕೆಯನ್ನು ಕಡಿಮೆ ಬಿರುಸಾಗಿಸುತ್ತದೆ, ಇದು ಆಗಾಗ್ಗೆ ಮೂಳೆ ಮುರಿತಗಳಿಗೆ ಕಾರಣವಾಗುತ್ತದೆ. ಈ ವೀಕ್ಷಣೆಗೆ ಹೆಚ್ಚಿನ ವಿವರಣೆ ಯಾವುದು?

A. ಮೃದ್ವಸ್ಥಿ ಮಾತೃಕೆಯಲ್ಲಿ ಪ್ರೋಟೀನ್‌ಗಳು ಮತ್ತು ಸಕ್ಕರೆಗಳ ನಷ್ಟ

B. COL1A1 ಅಥವಾ COL1A2 ವಂಶವಾಹಿಗಳಲ್ಲಿನ ರೂಪಾಂತರದಿಂದಾಗಿ ಟೈಪ್ I ಕೊಲೊಜನ್‌ನಲ್ಲಿ ದೋಷ ✓

C. ರಕ್ತ ಮಾತೃಕೆಯಲ್ಲಿ ಪ್ಲಾಸ್ಮಾ ಪ್ರೋಟೀನ್‌ಗಳಲ್ಲಿನ ಇಳಿಕೆ

D. ಮೂಳೆ ಮಾತೃಕೆಯಲ್ಲಿ ಕ್ಯಾಲ್ಸಿಯಂ ಮತ್ತು ರಂಜಕದ ಸಂಯುಕ್ತಗಳಲ್ಲಿ ಇಳಿಕೆ

**Q22** Types (Combination, Decomposition, etc.)

CaO(s) + H2O(l) → Ca(OH)2(aq) + ಉಷ್ಣ : ಇದು ಯಾವ ವಿಧದ ರಾಸಾಯನಿಕ ಕ್ರಿಯೆಯನ್ನು ಪ್ರತಿನಿಧಿಸುತ್ತದೆ?

A. ಸ್ಥಾನಪಲ್ಲಟ ಕ್ರಿಯೆ

B. ಸಂಯೋಗ ಕ್ರಿಯೆ ✓

C. ವಿಭಜನ ಕ್ರಿಯೆ

D. ದ್ವಿಸ್ಥಾನಪಲ್ಲಟ ಕ್ರಿಯೆ

**Q23** Wave Properties (Frequency, Wavelength)

ಟ್ಯೂನಿಂಗ್ ಫೋರ್ಕ್ ಕಂಪನಗೊಂಡು ಶಬ್ದವನ್ನು ಉಂಟುಮಾಡಿದಾಗ, ಸುತ್ತಮುತ್ತಲಿನ ಗಾಳಿಯಲ್ಲಿ ಯಾವ ರೀತಿಯ ತರಂಗಗಳು ಸೃಷ್ಟಿಯಾಗುತ್ತವೆ?

A. ವೃತ್ತಕಾರವಾಗಿ ಚಲಿಸುವ ಮೇಲ್ಮೈ ತರಂಗ.

B. ಏರಿಳಿತಗಳನ್ನು ಹೊಂದಿರುವ ಅಡ್ಡ ತರಂಗ.

C. ಸಂಕೋಚನಗಳು ಮತ್ತು ವಿರಳನ ಕ್ರಿಯೆಗಳನ್ನು ಹೊಂದಿರುವ ನೀಳ ತರಂಗಗಳು ✓

D. ಶಕ್ತಿಯು ಚಲಿಸುತ್ತದೆ ಆದರೆ ಕಣಗಳು ಚಲಿಸುವುದಿಲ್ಲ.

Blackbook Vocabulary — Now in the App! ▶ Download Now on Google Play

generated by rank.qmaths.in

**Q24** Work, Energy & Power

ಒಂದು ವಸ್ತುವು ಪೂರ್ವಕ್ಕೆ ಚಲಿಸುತ್ತಿದೆ. ಯಾವ ಶಕ್ತಿಯು ಅದರ ಮೇಲೆ ಖಂಡಿತವಾಗಿಯೂ ಋಣಾತ್ಮಕ ಕೆಲಸವನ್ನು ಮಾಡುತ್ತದೆ?

A. ಕೆಳಮುಖವಾಗಿ ವರ್ತಿಸುತ್ತಿರುವ ಬಲ

B. ಪೂರ್ವಕ್ಕೆ ವರ್ತಿಸುತ್ತಿರುವ ಬಲ

C. ಪಶ್ಚಿಮಕ್ಕೆ ವರ್ತಿಸುತ್ತಿರುವ ಬಲ ✓

D. ಮೇಲ್ಮುಖವಾಗಿ ವರ್ತಿಸುತ್ತಿರುವ ಬಲ

**Q25** Work, Energy & Power

ಒಂದು ವಸ್ತುವನ್ನು ನೆಲದಿಂದ ಒಂದು ನಿರ್ದಿಷ್ಟ ಎತ್ತರದಲ್ಲಿ ಇರಿಸಲಾಗುತ್ತದೆ. ಅದರ ಸ್ಥಾನದಿಂದಾಗಿ ಅದು ಯಾವ ರೀತಿಯ ಶಕ್ತಿಯನ್ನು ಹೊಂದಿರುತ್ತದೆ?

A. ರಾಸಾಯನಿಕ ಶಕ್ತಿ

B. ಉಷ್ಣ ಶಕ್ತಿ

C. ಚಲನ ಶಕ್ತಿ

D. ಪ್ರಚ್ಛನ್ನ ಶಕ್ತಿ ✓

Blackbook Vocabulary — Now in the App! ► Download Now on Google Play

generated by rank.qmaths.in

## General Science

25 Questions • Answer Key

**Q1** Atomic Structure & Models

ಥಾಮ್ಸನ್‌ನ ಪರಮಾಣುವಿನ ಪ್ಲಮ್-ಪುಡ್ಡಿಂಗ್ ಮಾದರಿಯಲ್ಲಿ ಒಣದ್ರಾಕ್ಷಿಗಳು ಏನನ್ನು ಪ್ರತಿನಿಧಿಸುತ್ತವೆ?

A. ಪರಮಾಣುಗಳಲ್ಲಿ ಇರುವ ಪ್ರೋಟಾನುಗಳು ಮತ್ತು ನ್ಯೂಟ್ರಾನುಗಳು

B. ಧನಾತ್ಮಕ ಆವೇಶದ ಗೋಳದಲ್ಲಿ ಹುದುಗಿರುವ ಎಲೆಕ್ಟ್ರಾನ್‌ಗಳು ✓

C. ಪರಮಾಣುವಿನಾದ್ಯಂತ ನ್ಯೂಟ್ರಾನ್‌ಗಳು ಹರಡಿಕೊಂಡಿರುವುದು

D. ಪರಮಾಣುವಿನ ವಿವಿಧ ಕಕ್ಷೆಗಳಲ್ಲಿ ಇರುವ ಎಲೆಕ್ಟ್ರಾನ್‌ಗಳು

**Q2** Basic Organic Chemistry

ಸಾಮಾನ್ಯವಾಗಿ ಈ ಕೆಳಗಿನವುಗಳಲ್ಲಿ ಯಾವುದು, ಇಂಗಾಲದ ಹೆಚ್ಚಿನ ಸಹವೇಲೆನ್ಸಿ ಸಂಯುಕ್ತಗಳೊಂದಿಗೆ ಸಂಬಂಧ ಹೊಂದಿರುವ ಲಕ್ಷಣ **ಅಲ್ಲ**?

A. ಇಂಗಾಲವು ಇಂಗಾಲದ ಇತರ ಪರಮಾಣುಗಳೊಂದಿಗೆ ಸಹವೇಲೆನ್ಸಿ ಬಂಧಗಳನ್ನು ರೂಪಿಸುವುದು

B. ಅವು ಕಡಿಮೆ ಕರಗುವ ಬಿಂದುಗಳನ್ನು ಹೊಂದಿರುವುದು

C. ಅವು ಕಡಿಮೆ ಕುದಿಯುವ ಬಿಂದುಗಳನ್ನು ಹೊಂದಿರುವುದು

D. ಅವು ಉತ್ತಮ ವಿದ್ಯುತ್ ವಾಹಕಗಳಾಗಿರುವುದು ✓

**Q3** Basic Organic Chemistry

ಆಮ್ಲ ವೇಗವರ್ಧಕದ ಉಪಸ್ಥಿತಿಯಲ್ಲಿ ಎಥನೋಯಿಕ್ ಆಮ್ಲವು ಎಥೆನಾಲ್‌ನೊಂದಿಗೆ ವರ್ತಿಸಿದಾಗ ಯಾವ ವಿಧದ ಕ್ರಿಯೆಯು ಸಂಭವಿಸುತ್ತದೆ?

A. ದಹನ ಕ್ರಿಯೆ

B. ಸಾಬೂನೀಕರಣ ಕ್ರಿಯೆ

C. ತಟಸ್ಥೀಕರಣ ಕ್ರಿಯೆ

D. ಎಸ್ಟರೀಕರಣ ಕ್ರಿಯೆ ✓

**Q4** Cell Biology

ಈ ಕೆಳಗಿನ ಯಾವ ಜೋಡಿಯು ಗ್ರೀಕ್ ಮೂಲಕ್ಕೆ ಅದರ ಅರ್ಥದೊಂದಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ?

A. ಕ್ಯಾರಿಯನ್ (Karyon)— ಗೋಡೆ

B. ಪ್ರೊ (Pro) — ಸತ್ಯ

C. ಕ್ರೋಮಾ (Chroma) — ಹಸಿರು

D. ಲ್ಯೂಕೋಸ್ (Leukos) — ಬಿಳಿ ✓

**Q5** Cell Structure & Organelles

ನ್ಯೂಕ್ಲಿಯಸ್ ಮತ್ತು ಪ್ಲಾಸ್ಟಿಡ್ ಗಳನ್ನು ಹೊರತುಪಡಿಸಿ, ಈ ಕೆಳಗಿನ ಯಾವ ಅಂಗಕವು ತನ್ನದೇ ಆದ ಡಿ.ಎನ್.ಎ ಅನ್ನು ಹೊಂದಿರುತ್ತದೆ?

A. ರೈಬೋಸೋಮ್

B. ಗಾಲ್ಗಿ ಉಪಕರಣ

C. ಲೈಸೋಸೋಮ್

D. ಮೈಟೊಕಾಂಡ್ರಿಯನ್ ✓

**Q6** Circulatory System (Heart, Blood)

ದೇಹದ ಅಂಗಾಂಶಗಳೊಂದಿಗೆ ಅನಿಲಗಳು ಮತ್ತು ಪೋಷಕಾಂಶಗಳ ತ್ವರಿತ ವಿನಿಮಯಕ್ಕೆ ಯಾವ ರೀತಿಯ ರಕ್ತನಾಳವು ಸೂಕ್ತವಾಗಿರುತ್ತದೆ?

A. ಅಪಧಮನಿಗಳು

B. ಅಭಿಧಮನಿಗಳು

C. ಲೋಮನಾಳಗಳು ✓

D. ದುಗ್ಧನಾಳಗಳು

**Q7** Current Electricity (Ohm's Law, Circuits)

ಸರಣಿ ಕ್ರಮದ ಸಂಯೋಜನೆಗೆ ಹೋಲಿಸಿದರೆ ರೋಧಕಗಳ ಸಮಾಂತರ ಸಂಯೋಜನೆಯು ಈ ಕೆಳಗಿನ ಯಾವ ಗುಣಲಕ್ಷಣದಿಂದ ವಿಶಿಷ್ಟವಾಗಿದೆ?

A. ಒಟ್ಟು ರೋಧವು ರೋಧಕಗಳ ಮೊತ್ತಕ್ಕೆ ಸಮನಾಗಿರುತ್ತದೆ

B. ಪ್ರತಿ ರೋಧಕದ ಮೂಲಕ ಹರಿಯುವ ವಿದ್ಯುತ್ ಪ್ರವಾಹವು ಒಂದೇ ಆಗಿರುತ್ತದೆ

C. ಪ್ರತಿಯೊಂದು ರೋಧಕವು ಒಂದೇ ವೋಲ್ಟೇಜ್ ಅನ್ನು ಪಡೆಯುತ್ತದೆ ✓

D. ಎಲ್ಲಾ ರೋಧಕಗಳು ಏಕರೂಪವಾಗಿರಬೇಕು

**Q8** Current Electricity (Ohm's Law, Circuits)

ಸರ್ಕ್ಯೂಟ್ ರೇಖಾಚಿತ್ರದಲ್ಲಿ ಪರ್ಯಾಯವಾಗಿ ಅನೇಕ ಉದ್ದ ಮತ್ತು ಸಣ್ಣ ರೇಖೆಗಳ ಚಿಹ್ನೆಗಳಿಂದ ಈ ಕೆಳಗಿನ ಯಾವ ಘಟಕವನ್ನು ಅತ್ಯುತ್ತಮವಾಗಿ ಪ್ರತಿನಿಧಿಸಲಾಗುತ್ತದೆ?

A. ವಿದ್ಯುತ್ ಬಲ್ಬ್

B. ವಿದ್ಯುತ್ ಕೋಶ

C. ಬ್ಯಾಟರಿ ಅಥವಾ ವಿದ್ಯುತ್ ಕೋಶಗಳ ಸಂಯೋಜನೆ ✓

D. R ರೋಧ ಹೊಂದಿರುವ ಒಂದು ರೋಧಕ

Blackbook Vocabulary — Now in the App! ▶ Download Now on Google Play

generated by rank.qmaths.in

**Q9** Ecosystem & Food Chain

ಆಹಾರ ಜಾಲಗಳು ಪರಿಸರ ವ್ಯವಸ್ಥೆಯ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತವೆ, ಏಕೆಂದರೆ ಅವುಗಳು:

- A. ಅವು ಸ್ಪರ್ಧೆಯನ್ನು ಹೆಚ್ಚಿಸುತ್ತವೆ
- B. ಅವು ಪರ್ಯಾಯ ಆಹಾರ ಮೂಲಗಳನ್ನು ಒದಗಿಸುತ್ತವೆ ✓
- C. ಭಕ್ಷಕಗಳ ಸಂಖ್ಯೆಯನ್ನು ಕಡಿಮೆಮಾಡುತ್ತವೆ
- D. ಅವು ಶಕ್ತಿಯ ಹರಿವನ್ನು ನಿಲ್ಲಿಸುತ್ತವೆ

**Q10** Ecosystem & Food Chain

ಆಹಾರ ಸರಪಳಿಯಲ್ಲಿ ಜೈವಿಕ ವರ್ಧನೆಯಿಂದ ಉನ್ನತ ಮಟ್ಟದ ಭಕ್ಷಕ ಜೀವಿಗಳು ಏಕೆ ಹೆಚ್ಚು ತೊಂದರೆಗೊಳಗಾಗುತ್ತವೆ?

- A. ಅವು ಪರಿಸರ ವ್ಯವಸ್ಥೆಯಲ್ಲಿ ಅತ್ಯಂತ ಕಡಿಮೆ ಜೀವಿತಾವಧಿಯನ್ನು ಹೊಂದಿವೆ
- B. ಅವು ಮಿಕ್ಕವುಗಳಿಗೆ ಹೋಲಿಸಿದರೆ ಕಡಿಮೆ ಪ್ರಮಾಣದ ಆಹಾರವನ್ನು ಸೇವಿಸುತ್ತವೆ
- C. ಅವು ಪ್ರಾಥಮಿಕ ಉತ್ಪಾದಕಗಳಾದ್ದರಿಂದ ವಿಷಕಾರಿ ಅಂಶಗಳಿಗೆ ಮೊದಲು ಸಂಪರ್ಕಕ್ಕೆ ಬರುತ್ತವೆ
- D. ಅವು ಆಹಾರ ಸರಪಳಿಯ ಮೂಲಕ ಹೆಚ್ಚಿನ ಪ್ರಮಾಣದ ವಿಷವನ್ನು ಸಂಗ್ರಹಿಸುತ್ತವೆ ✓

**Q11** Hydrocarbons (Methane, Ethane, etc.)

ವೇಗವರ್ಧಕದ ಉಪಸ್ಥಿತಿಯಲ್ಲಿ ಆಲ್ಕೀನ್‌ಗೆ ಜಲಜನಕವನ್ನು ($H_2$) ಸೇರಿಸಿದಾಗ ಏನಾಗುತ್ತದೆ?

- A. ಆಲ್ಕೀನ್ ಆಲ್ಕೇನ್ ಆಗಿ ಪರಿವರ್ತನೆಗೊಳ್ಳುತ್ತದೆ ✓
- B. ಆಲ್ಕೀನ್ ಆದೇಶನಕ್ಕೆ ಒಳಗಾಗುತ್ತದೆ
- C. ಆಲ್ಕೀನ್ ಆಲ್ಕೋಹಾಲ್ ಅನ್ನು ರೂಪಿಸುತ್ತದೆ
- D. ಆಲ್ಕೀನ್ ವಿಭಜನೆಯಾಗುತ್ತದೆ

**Q12** Important Salts & Their Uses

ಅಡುಗೆ ಸೋಡಾವನ್ನು ಸಾಮಾನ್ಯವಾಗಿ ಅಗ್ನಿಶಾಮಕಗಳಲ್ಲಿ ಬಳಸಲಾಗುತ್ತದೆ. ಏಕೆಂದರೆ ಅದು ಬಿಸಿ ಮಾಡಿದಾಗ ಒಂದು ನಿರ್ದಿಷ್ಟ ಅನಿಲವನ್ನು ಬಿಡುಗಡೆ ಮಾಡುತ್ತದೆ. ಹಾಗಾದರೆ ಬಿಡುಗಡೆಯಾಗುವ ಆ ಅನಿಲ ಯಾವುದಾಗಿದೆ ಮತ್ತು ಅದು ಬೆಂಕಿಯನ್ನು ನಂದಿಸಲು ಹೇಗೆ ಸಹಾಯ ಮಾಡುತ್ತದೆ?

- A. ಅದು ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ ಮತ್ತು ಆಮ್ಲಜನಕವು ಬೆಂಕಿಯನ್ನು ನಂದಿಸುತ್ತದೆ ಮತ್ತು ಹರಡುವುದನ್ನು ತಡೆಯುತ್ತದೆ
- B. ಅದು ಸಾರಜನಕವನ್ನು ಬಿಡುಗಡೆ ಮಾಡುತ್ತದೆ, ಸಾರಜನಕವು ಉರಿಯುತ್ತಿರುವ ವಸ್ತುವನ್ನು ತಂಪಾಗಿಸುತ್ತದೆ
- C. ಅದು ಇಂಗಾಲದ ಡೈಆಕ್ಸೈಡ್ ಅನ್ನು ಬಿಡುಗಡೆ ಮಾಡುತ್ತದೆ, ಇಂಗಾಲದ ಡೈಆಕ್ಸೈಡ್ ಆಮ್ಲಜನಕವನ್ನು ಸ್ಥಾನಪಲ್ಲಟಗೊಳಿಸುತ್ತದೆ ಮತ್ತು ದಹನವನ್ನು ನಿಲ್ಲಿಸುತ್ತದೆ ✓
- D. ಅದು ಸಲ್ಫರ್ ಡೈಆಕ್ಸೈಡ್ ಅನ್ನು ಬಿಡುಗಡೆ ಮಾಡುತ್ತದೆ, ಸಲ್ಫರ್ ಡೈಆಕ್ಸೈಡ್ ಬೆಂಕಿಯ ಜ್ವಾಲೆಗಳೊಂದಿಗೆ ವರ್ತಿಸುತ್ತದೆ

**Q13** Light & Optics

ಬೆಳಗಿನ ಜಾವದಲ್ಲಿ ಸೌರ ಫಲಕಗಳು ಏಕೆ ಕಡಿಮೆ ಕಾರ್ಯಕ್ಷಮತೆಯನ್ನು ಹೊಂದಿವೆ ಎಂದು ಒಬ್ಬ ವಿದ್ಯಾರ್ಥಿಯನ್ನು ಕೇಳಲಾಯಿತು. ಈ ಅವಲೋಕನವನ್ನು ವಿವರಿಸುವ ವಿದ್ಯುತ್ಕಾಂತೀಯ ಗುಣ ಯಾವುದು?

- A. ಗಾಳಿಯಲ್ಲಿ ಬೆಳಕಿನ ವೇಗವು ಕಡಿಮೆ ಇರುತ್ತದೆ
- B. ತರಂಗಾಂತರ (Wavelength) ವಿತರಣೆಯ ಬದಲಾವಣೆಗಳು
- C. ಅಲ್ಪ ಕೋನದಲ್ಲಿ (low angle) ಸೂರ್ಯನ ಬೆಳಕು ಕಡಿಮೆ ತೀವ್ರತೆಯನ್ನು ಹೊಂದಿರುತ್ತದೆ ✓
- D. ಭೂಮಿಯ ತಿರುಗುವಿಕೆಯು ಬೆಳಕಿನ ತೀವ್ರತೆಯನ್ನು ಹೆಚ್ಚಿಸುತ್ತದೆ

**Q14** Mechanics

ಒಂದು ಸರಳ ರೇಖೆಯ ದೂರ-ಕಾಲ ನಕ್ಷೆಯಲ್ಲಿ ಎರಡು ಬಿಂದುಗಳ ನಡುವಿನ ಅಂತರವು 120 ಮೀಟರ್‌ಗಳು ಮತ್ತು ಅನುಗುಣವಾದ ಸಮಯದ ಮಧ್ಯಂತರವು 4 ಸೆಕೆಂಡುಗಳಾಗಿದ್ದರೆ, ಏಕರೂಪ ಜವ ಎಷ್ಟು?

- A. 24 m/s
- B. 30 m/s ✓
- C. 60 m/s
- D. 15 m/s

**Q15** Mechanics

ಈ ಕೆಳಗಿನ ಯಾವುದು ಏಕರೂಪದ ವೃತ್ತಾಕಾರದ ಚಲನೆಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ವಕ್ರಾಕಾರದ ಪಥದಲ್ಲಿ ಬದಲಾಗುತ್ತಿರುವ ವೇಗದಲ್ಲಿ ಚಲಿಸುತ್ತಿರುವ ಒಂದು ವಸ್ತು
- B. ವೃತ್ತಾಕಾರದ ಮಾರ್ಗದಲ್ಲಿ ಸ್ಥಿರವಾದ ವೇಗದಲ್ಲಿ ಚಲಿಸುತ್ತಿರುವ ಒಂದು ವಸ್ತು ✓
- C. ಸರಳ ರೇಖೆಯಲ್ಲಿ ಸ್ಥಿರವಾದ ವೇಗದಲ್ಲಿ ಚಲಿಸುತ್ತಿರುವ ಒಂದು ವಸ್ತುವು
- D. ವೃತ್ತಾಕಾರದ ಪಥದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಒಂದು ವಸ್ತು

**Q16** Mirrors & Lenses

ವಿಜ್ಞಾನ ಪ್ರದರ್ಶನದ ಯೋಜನೆಯು ಹಜಾರವನ್ನು ಮೇಲ್ವಿಚಾರಣೆ ಮಾಡಲು ಪೀನ ದರ್ಪಣವನ್ನು ಬಳಸುತ್ತದೆ. ಒಬ್ಬ ವ್ಯಕ್ತಿಯು ದರ್ಪಣದಿಂದ ವಿವಿಧ ದೂರಗಳಲ್ಲಿ ನಿಂತಿದ್ದರೆ, ಅವರ ಸ್ಥಾನವನ್ನು ಪರಿಗಣಿಸದೆ ರೂಪುಗೊಂಡ ಬಿಂಬಗಳ ಬಗ್ಗೆ ಯಾವುದು ಸ್ಥಿರವಾಗಿರುತ್ತದೆ?

- A. ಬಿಂಬಗಳು ಯಾವಾಗಲೂ ವರ್ಧಿತ ಮತ್ತು ದರ್ಪಣದ ಹಿಂದೆ ಇರುತ್ತವೆ
- B. ಬಿಂಬಗಳು ಯಾವಾಗಲೂ ವಿಸ್ತರಿತವಾಗಿರುತ್ತದೆ ಮತ್ತು ನೈಜವಾಗಿರುತ್ತವೆ
- C. ಬಿಂಬಗಳು ಯಾವಾಗಲೂ ನೈಜ ಮತ್ತು ತಲೆಕೆಳಗಾಗಿರುತ್ತವೆ
- D. ಬಿಂಬಗಳು ಯಾವಾಗಲೂ ಕುಗ್ಗಿರುತ್ತದೆ ಮತ್ತು ಮಿಥ್ಯವಾಗಿರುತ್ತವೆ ✓

Blackbook Vocabulary — Now in the App! ► Download Now on Google Play

**Q17** Mirrors & Lenses

ಒಬ್ಬ ವಿದ್ಯಾರ್ಥಿಯು ಮಸೂರದಿಂದ ರೂಪುಗೊಂಡ ಬಿಂಬವು ವಸ್ತುವಿನ ಗಾತ್ರದ ಎರಡು ಪಟ್ಟು ಇದೆ ಮತ್ತು ಅದು ನೈಜವಾಗಿದೆ ಎಂದು ಗಮನಿಸುತ್ತಾನೆ. ಹಾಗಾದರೆ ಮಸೂರಕ್ಕೆ ಸಂಬಂಧಿಸಿದಂತೆ ವಸ್ತುವನ್ನು ಎಲ್ಲಿ ಇರಿಸಲಾಗಿದೆ?

A. 2F ನಲ್ಲಿ
B. F ಮತ್ತು 2F ನಡುವೆ ✓
C. 2F ಮತ್ತು ಅನಂತದ ನಡುವೆ
D. F ನಲ್ಲಿ

**Q18** Mirrors & Lenses

ಗೋಳಾಕಾರದ ಮಸೂರಗಳ ಸಂಕೇತ ಸಂಪ್ರದಾಯದಲ್ಲಿ ವಸ್ತುವಿನ ದೂರವನ್ನು ಹೇಗೆ ಅಳೆಯಲಾಗುತ್ತದೆ?

A. ಅದನ್ನು ದೃಕ್ ಕೇಂದ್ರದಿಂದ ವಸ್ತುವಿನ ಸ್ಥಾನದ ಕಡೆಗೆ ಅಳೆಯಲಾಗುತ್ತದೆ ✓
B. ಅದನ್ನು ಸಂಗಮಬಿಂದುವಿನಿಂದ ಬಿಂಬದ ಸ್ಥಾನದ ಕಡೆಗೆ ಅಳೆಯಲಾಗುತ್ತದೆ
C. ಅದನ್ನು ದೃಕ್ ಕೇಂದ್ರದಿಂದ ಬಿಂಬದ ಸ್ಥಾನದ ಕಡೆಗೆ ಅಳೆಯಲಾಗುತ್ತದೆ
D. ಅದನ್ನು ಸಂಗಮಬಿಂದುವಿನಿಂದ ವಸ್ತುವಿನ ಸ್ಥಾನದ ಕಡೆಗೆ ಅಳೆಯಲಾಗುತ್ತದೆ

**Q19** Physical & Chemical Properties

ಕ್ಯಾಲ್ಸಿಯಂ ನೀರಿನೊಂದಿಗೆ ವರ್ತಿಸಿದಾಗ ಯಾವ ಅನಿಲವು ಬಿಡುಗಡೆಯಾಗುತ್ತದೆ?

A. ಆಮ್ಲಜನಕ
B. ಇಂಗಾಲದ ಡೈಆಕ್ಸೈಡ್
C. ಸಾರಜನಕ
D. ಜಲಜನಕ ✓

**Q20** Plant Kingdom (Divisions)

ಎರಡು ಮಾದರಿಗಳಿವೆ: ಒಂದು ನೀರಿನಲ್ಲಿ ವಾಸಿಸುವ ವ್ಯತ್ಯಾಸ – ತೋರಿಸದ ದೇಹವನ್ನು ಹೊಂದಿದೆ, ಇನ್ನೊಂದು ನಿಜವಾದ ಬೇರುಗಳು, ಕಾಂಡಗಳು ಮತ್ತು ಎಲೆಗಳನ್ನು ಹೊಂದಿದೆ. ಹಾಗಾದರೆ, ಇವುಗಳನ್ನು ಅವುಗಳ ವರ್ಗಗಳೊಂದಿಗೆ ಸರಿಯಾಗಿ ಹೊಂದಿಸುವ ಆಯ್ಕೆ ಯಾವುದು?

A. ಟೆರಿಡೊಫೈಟಾ ಮತ್ತು ಜಿಮ್ನೋಸ್ಪರ್ಮ್
B. ಬ್ರಯೋಫೈಟಾ ಮತ್ತು ಥ್ಯಾಲೊಫೈಟಾ
C. ಬ್ರಯೋಫೈಟಾ ಮತ್ತು ಆಂಜಿಯೋಸ್ಪರ್ಮ್
D. ಥ್ಯಾಲೊಫೈಟಾ ಮತ್ತು ಟೆರಿಡೊಫೈಟಾ ✓

**Q21** Pollution (Air, Water, Soil, Noise)

ಈ ಕೆಳಗಿನವುಗಳಲ್ಲಿ ಯಾವ ಜೋಡಿಯು ಕ್ರಮವಾಗಿ ಜೈವಿಕವಾಗಿ ವಿಘಟನೆಯಾಗುವ ಮತ್ತು ಜೈವಿಕವಾಗಿ ವಿಘಟನೆಯಾಗದ ವಸ್ತುಗಳನ್ನು ಸರಿಯಾಗಿ ಪ್ರತಿನಿಧಿಸುತ್ತದೆ?

A. ಪ್ಲಾಸ್ಟಿಕ್ - ಹತ್ತಿ
B. ಲೋಹ - ಆಹಾರ ತ್ಯಾಜ್ಯ
C. ಗಾಜು - ಎಲೆಗಳು
D. ಕಾಗದ - ಪ್ಲಾಸ್ಟಿಕ್ ✓

**Q22** Separation Techniques

ಎರಡು ದ್ರವಗಳಿಗೆ ಬೇರ್ಪಡಿಸುವ ಆಲಿಕೆಯನ್ನು ಬಳಸುವ ಮೊದಲು ಯಾವ ಅಂಶವನ್ನು ಪರಿಗಣಿಸಬೇಕು?

A. ದ್ರವಗಳು ವಿಭಿನ್ನ ಬಣ್ಣಗಳನ್ನು ಹೊಂದಿರಬೇಕು
B. ದ್ರವಗಳು ಕಟುವಾದ ವಾಸನೆಗಳನ್ನು ಹೊಂದಿರಬೇಕು
C. ಎರಡೂ ದ್ರವಗಳು ಹೆಚ್ಚಿನ ಕುದಿಯುವ ಬಿಂದುವನ್ನು ಹೊಂದಿರುತ್ತವೆ
D. ದ್ರವವು ಮಿಶ್ರಣವಾಗದೆ ಇರಬೇಕು ✓

**Q23** Types (Combination, Decomposition, etc.)

ಹೈಡ್ರೋಕ್ಲೋರಿಕ್ ಆಮ್ಲವು ಸೋಡಿಯಂ ಹೈಡ್ರಾಕ್ಸೈಡ್‌ನೊಂದಿಗೆ ವರ್ತಿಸಿ ಸೋಡಿಯಂ ಕ್ಲೋರೈಡ್ ಮತ್ತು ನೀರನ್ನು ರೂಪಿಸಿದ ಸಂದರ್ಭದಲ್ಲಿ ಯಾವ ವಿಧದ ಕ್ರಿಯೆಯನ್ನು ಪ್ರಮುಖವಾಗಿ ಪ್ರದರ್ಶಿಸುತ್ತದೆ?

A. ದ್ವಿಸ್ಥಾನಪಲ್ಲಟ ಕ್ರಿಯೆ ✓
B. ರೆಡಾಕ್ಸ್ ಕ್ರಿಯೆ
C. ಸ್ಥಾನಪಲ್ಲಟ ಕ್ರಿಯೆ
D. ಸಂಯೋಗ ಕ್ರಿಯೆ

**Q24** Work, Energy & Power

ಈ ಕೆಳಗಿನ ಯಾವುದು ರಾಸಾಯನಿಕ ಶಕ್ತಿಗೆ ಉದಾಹರಣೆಯಾಗಿದೆ?

A. ತಿರುಗುವ ಚಕ್ರದಿಂದ ಉಂಟಾಗುವ ಶಕ್ತಿ
B. ಆಹಾರದಲ್ಲಿ ಸಂಗ್ರಹವಾಗಿರುವ ಶಕ್ತಿ ✓
C. ಚಲಿಸುವ ವಸ್ತುಗಳಿಂದ ಉಂಟಾಗುವ ಶಕ್ತಿ
D. ಹಿಗ್ಗಿಸಿದ ರಬ್ಬರ್ ಪಟ್ಟಿಯಿಂದ ಉಂಟಾಗುವ ಶಕ್ತಿ

Blackbook Vocabulary — Now in the App! ▶ Download Now on Google Play

**Q25** Work, Energy & Power

0.5 kg ದ್ರವ್ಯರಾಶಿಯಿರುವ ಒಂದು ಕಲ್ಲು 8 m/s ವೇಗದಲ್ಲಿ ಚಲಿಸುತ್ತಿದೆ. ಅದರ ಚಲನ ಶಕ್ತಿಯು ________ ಇರುತ್ತದೆ.

A. 16 J ✓

B. 64 J

C. 32 J

D. 128 J

Blackbook Vocabulary — Now in the App! ► Download Now on Google Play

## General Science

25 Questions • Answer Key

**Q1** Atomic Structure & Models

ನೀಡಿರುವ ಸಮಸ್ಥಾನೀಯ ಅನುಪಾತ ಮತ್ತು ದ್ರವ್ಯರಾಶಿಗಳ ಆಧಾರದ ಮೇಲೆ ಕ್ಲೋರಿನ್ ಪರಮಾಣುವಿನ ಸರಾಸರಿ ಪರಮಾಣು ದ್ರವ್ಯರಾಶಿಯು ___ ಆಗಿದೆ.

A. 37 u
B. 35.5 u ✓
C. 36 u
D. 34.5 u

**Q2** Atoms & Molecules

ರಾಸಾಯನಿಕ ಸೂತ್ರಗಳನ್ನು ರಚಿಸುವಾಗ ವೇಲೆನ್ಸಿಯ ಪ್ರಾಮುಖ್ಯತೆಯು ಈ ಕೆಳಗಿನ ವಿಷಯದಲ್ಲಿರುತ್ತದೆ:

A. ಬಂಧಗೊಳ್ಳುವ ಕೋನಗಳನ್ನು ಮಾತ್ರ ಬಳಸಿಕೊಂಡು ಆಣ್ವಿಕ ರಚನಾವಿನ್ಯಾಸವನ್ನು (geometry) ಕಂಡುಹಿಡಿಯುವುದು
B. ಅನಿಲೀಕೃತ ಸ್ಥಿತಿಯಲ್ಲಿ ಪರಮಾಣುಗಳ ಕ್ರಿಯಾಶೀಲತೆಯ ದರವನ್ನು ಅಳೆಯುವುದು
C. ಧಾತುಗಳ ಪರಮಾಣುಗಳು ಪರಸ್ಪರ ಹೇಗೆ ಸಂಯೋಜನೆಗೊಳ್ಳುತ್ತವೆ ಎಂಬುದನ್ನು ನಿರ್ಧರಿಸುವುದು ✓
B. ಸೋಡಿಯಂ ಕಾರ್ಬೋನೇಟ್ ✓

C. ಸೋಡಿಯಂ ಕ್ಲೋರೈಡ್

D. ಸೋಡಿಯಂ ಸಲ್ಫೇಟ್

**Q11** Magnetic Effects of Current

ಸೊಲೆನಾಯ್ಡ್‌ನ ಒಂದು ತುದಿ ಉತ್ತರ ಧ್ರುವದಂತೆ ಮತ್ತು ಇನ್ನೊಂದು ತುದಿ ದಕ್ಷಿಣ ಧ್ರುವದಂತೆ ಏಕೆ ವರ್ತಿಸುತ್ತದೆ?

A. ವಿದ್ಯುತ್ ಪ್ರವಾಹವು ದಂಡ ಕಾಂತಕ್ಕೆ ಇದೇ ರೀತಿಯ ಕಾಂತೀಯ ಪರಿಣಾಮವನ್ನು ಸೃಷ್ಟಿಸುತ್ತದೆ ✓

B. ನಿರೋಧನವು ಧ್ರುವಗಳನ್ನು ಸೃಷ್ಟಿಸುತ್ತದೆ

C. ಸೊಲೆನಾಯ್ಡ್‌ನಲ್ಲಿ ಯಾವುದೇ ವಿದ್ಯುತ್ ಪ್ರವಾಹ ಇರುವುದಿಲ್ಲ

D. ಸೊಲೆನಾಯ್ಡ್ ಸ್ವಾಭಾವಿಕವಾಗಿ ಕಾಂತೀಯವಾಗಿರುತ್ತದೆ

**Q12** Magnetic Effects of Current

ವಿದ್ಯುತ್ ಪ್ರವಹಿಸುತ್ತಿರುವ ಒಂದು ನೇರ ವಾಹಕದಿಂದ ದೂರ ಹೋದಂತೆ ದಿಕ್ಸೂಚಿಯ ಸೂಚಿಯ ವಿಚಲನವು ಕಡಿಮೆಯಾಗುತ್ತದೆ ಎಂದು ಒಬ್ಬ ವಿದ್ಯಾರ್ಥಿಯು ಗಮನಿಸುತ್ತಾನೆ. ಈ ವೀಕ್ಷಣೆಗೆ ಹೆಚ್ಚಾಗಿ ಕಾರಣವೇನು?

A. ಭೂಮಿಯ ಕಾಂತೀಯ ಕ್ಷೇತ್ರವು ದೂರ ಹೆಚ್ಚಾದಂತೆ ಪ್ರಬಲವಾಗುತ್ತದೆ

B. ವಾಹಕದಿಂದ ದೂರವು ಹೆಚ್ಚಾದಂತೆ ಕಾಂತಕ್ಷೇತ್ರದ ಬಲವು ಕಡಿಮೆಯಾಗುತ್ತದೆ ✓

C. ವಾಹಕದಲ್ಲಿನ ವಿದ್ಯುತ್ ಪ್ರವಾಹವು ದೂರ ಹೆಚ್ಚಾದಂತೆ ಕಡಿಮೆಯಾಗುತ್ತದೆ

D. ತಂತಿಯ ಆಕಾರವು ಕಡಿಮೆ ದೂರದಲ್ಲಿ ಮಾತ್ರ ಕಾಂತಕ್ಷೇತ್ರದ ಬಲದ ಮೇಲೆ ಪರಿಣಾಮ ಬೀರುತ್ತದೆ

**Q13** Mechanics

ಚಲನೆಯಲ್ಲಿರುವ ಒಂದು ವಸ್ತುವಿಗೆ ಸಂಬಂಧಿಸಿದಂತೆ ವೇಗ-ಕಾಲ ನಕ್ಷೆಯ ಇಳಿಜಾರು ಈ ಕೆಳಗಿನ ಯಾವ ಪ್ರಮಾಣವನ್ನು ಪ್ರತಿನಿಧಿಸುತ್ತದೆ?

A. ಬಲ

B. ಸ್ಥಾನಪಲ್ಲಟ

C. ಜವ

D. ವೇಗೋತ್ಕರ್ಷ ✓

**Q14** Mechanics

ಒಂದು ಆದರ್ಶ ಬಾಗಿದ ಸಮತಲವು 20 m ಉದ್ದವನ್ನು ಹೊಂದಿದ್ದು, 4 m ಲಂಬ ಎತ್ತರದ ಮೂಲಕ ಒಂದು ಹೊರೆಯನ್ನು ಏರಿಸುತ್ತದೆ. ಹೊರೆಯನ್ನು ನೇರವಾಗಿ ಮೇಲಕ್ಕೆ ಎತ್ತುವುದಕ್ಕೆ ಹೋಲಿಸಿದರೆ, ಹೊರೆಯನ್ನು ಸಮತಲದ ಮೇಲೆ ಸಾಗಿಸಲು ಬೇಕಾಗುವ ಪ್ರಯತ್ನವು _______ ಆಗಿದೆ.

A. ಹೊರೆಯ ನಾಲ್ಕನೇ ಒಂದು ಭಾಗ

B. ಹೊರೆಯ ಐದನೇ ಒಂದು ಭಾಗ ✓

C. ಹೊರೆಗೆ ಸಮ

D. ಹೊರೆಯ ಅರ್ಧದಷ್ಟು

**Q15** Mechanics

ಏಕರೂಪದ ವೃತ್ತೀಯ ಚಲನೆಯಲ್ಲಿ ವೇಗದ ದಿಕ್ಕನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಅದು ಯಾವಾಗಲೂ ವೃತ್ತದ ಸಮತಲಕ್ಕೆ ಲಂಬವಾಗಿರುತ್ತದೆ

B. ಅದು ಯಾವಾಗಲೂ ಕೇಂದ್ರದಿಂದ ದೂರದಲ್ಲಿ ತ್ರಿಜ್ಯದ ಉದ್ದಕ್ಕೂ ಇರುತ್ತದೆ

C. ಅದು ಯಾವಾಗಲೂ ಕೇಂದ್ರದ ಕಡೆಗೆ ನಿರ್ದೇಶಿಸಲ್ಪಡುತ್ತದೆ

D. ಅದು ಯಾವಾಗಲೂ ಯಾವುದೇ ಬಿಂದುವಿನಲ್ಲಿ ವೃತ್ತಕ್ಕೆ ಸ್ಪರ್ಶಕವಾಗಿರುತ್ತದೆ ✓

**Q16** Metals & Non-Metals

ಅನೋಡೈಸಿಂಗ್ ಎಂಬುದು ವಿದ್ಯುದ್ವಿಭಜನೀಯ ಪ್ರಕ್ರಿಯೆಯ ಮೂಲಕ ಈ ಕೆಳಗಿನ ಯಾವ ಲೋಹದ ದಪ್ಪ ಆಕ್ಸೈಡ್ ಪದರವನ್ನು ರೂಪಿಸುವ ಒಂದು ಪ್ರಕ್ರಿಯೆಯಾಗಿದೆ?

A. ಸತು

B. ತಾಮ್ರ

C. ಕಬ್ಬಿಣ

D. ಅಲ್ಯೂಮಿನಿಯಂ ✓

Blackbook Vocabulary — Now in the App! ▶ Download Now on Google Play

generated by rank.qmaths.in

**Q17** Mirrors & Lenses

ಒಬ್ಬ ವಿದ್ಯಾರ್ಥಿಯು ದರ್ಪಣವನ್ನು ಬಳಸುವಾಗ ತಲೆಕೆಳಗಾದ ಮತ್ತು ವಸ್ತುವಿಗಿಂತ ಚಿಕ್ಕದಾದ ಬಿಂಬವನ್ನು ಗಮನಿಸುತ್ತಾನೆ. ಹಾಗಾದರೆ ಯಾವ ರೀತಿಯ ವರ್ಧನೆಯನ್ನು ಗಮನಿಸಲಾಗುತ್ತಿದೆ?

A. ವರ್ಧನೆಯು ಒಂದಕ್ಕಿಂತ ಕಡಿಮೆಯಾಗಿದೆ ಮತ್ತು ಋಣಾತ್ಮಕವಾಗಿದೆ ✓

B. ವರ್ಧನೆಯು ಒಂದಕ್ಕೆ ಸಮಾನವಾಗಿರುತ್ತದೆ ಮತ್ತು ಧನಾತ್ಮಕವಾಗಿದೆ

C. ವರ್ಧನೆಯು ಒಂದಕ್ಕಿಂತ ಹೆಚ್ಚಾಗಿದೆ ಮತ್ತು ಧನಾತ್ಮಕವಾಗಿದೆ

D. ವರ್ಧನೆಯು ಒಂದಕ್ಕಿಂತ ಹೆಚ್ಚಾಗಿದೆ ಮತ್ತು ಋಣಾತ್ಮಕವಾಗಿದೆ

**Q18** Mixtures, Solutions, Colloids

ನಿಲಂಬನವನ್ನು ಕುರಿತ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ನಿಜವಾಗಿದೆ?

A. ಅವು ಬೆಳಕನ್ನು ಚದುರಿಸುವುದಿಲ್ಲ

B. ಅವು ಪಾರದರ್ಶಕವಾಗಿವೆ

C. ದ್ರಾವ್ಯ ಕಣಗಳು ನಿಂತ ಮೇಲೆ ತಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ ✓

D. ದ್ರಾವ್ಯವು ಸಂಪೂರ್ಣವಾಗಿ ಕರಗುತ್ತದೆ

**Q19** Nervous System & Brain

ಮಾನವ ದೇಹದಲ್ಲಿ ಅನುವರ್ತನ ಚಾಪಗಳು (reflex arcs) ಪ್ರಾಥಮಿಕವಾಗಿ ಎಲ್ಲಿ ರೂಪುಗೊಳ್ಳುತ್ತವೆ?

A. ಹೃದಯ

B. ಮೆದುಳು

C. ಶ್ವಾಸಕೋಶಗಳು

D. ಬೆನ್ನುಹುರಿ ✓

**Q20** Plant Hormones

ಗುರುತ್ವಾಕರ್ಷಣೆಗೆ ಪ್ರತಿಕ್ರಿಯೆಯಾಗಿ ಸಸ್ಯದ ಬೇರುಗಳು ಕೆಳಮುಖವಾಗಿ ಬೆಳೆಯುವುದನ್ನು ಏನೆಂದು ಕರೆಯಲಾಗುತ್ತದೆ?

A. ರಾಸಾಯನಿಕಾನುವರ್ತನೆ

B. ದ್ಯುತಿ ಅನುವರ್ತನೆ

C. ಗುರುತ್ವಾನುವರ್ತನೆ ✓

D. ಜಲಾನುವರ್ತನೆ

**Q21** Properties & Tests

ಒಬ್ಬ ವಿದ್ಯಾರ್ಥಿಯು ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್‌ಗೆ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸುತ್ತಾನೆ. ತಟಸ್ಥೀಕರಣವನ್ನು ಖಚಿತಪಡಿಸುವ ಅವಲೋಕನ ಯಾವುದು?

A. ಅವಕ್ಷೇಪನ ರೂಪುಗೊಳ್ಳುವಿಕೆ

B. ಅನಿಲದ ಗುಳ್ಳೆಗಳ ಬಿಡುಗಡೆ ✓

C. ಬಣ್ಣವು ಕೆಂಪು ಬಣ್ಣಕ್ಕೆ ತಿರುಗುತ್ತದೆ

D. ತಾಪಮಾನ ಇಳಿಕೆ

**Q22** Reflection & Refraction

ಸೂರ್ಯೋದಯ ಅಥವಾ ಸೂರ್ಯಾಸ್ತದ ಸಮಯದಲ್ಲಿ, ಭೂಮಿಯಿಂದ ಗಮನಿಸಿದಾಗ ಸೂರ್ಯನ ಬಿಂಬವು ಚಪ್ಪಟೆಯಾಗಿ ಏಕೆ ಕಾಣುತ್ತದೆ?

A. ವಾತಾವರಣದ ವಕ್ರೀಭವನದಿಂದಾಗಿ ಬೆಳಕನ್ನು ಸೂರ್ಯನ ಬಿಂಬದಾದ್ಯಂತ ಅಸಮಾನವಾಗಿ ಬಾಗುತ್ತದೆ ✓

B. ವಾತಾವರಣದಲ್ಲಿ ಸೂರ್ಯನ ಬೆಳಕು ಚದುರುವ ಕಾರಣದಿಂದ

C. ಗಾಳಿಯು ಸೂರ್ಯನ ಬೆಳಕನ್ನು ಹೀರಿಕೊಳ್ಳುವುದರಿಂದ

D. ಭೂಮಿಯ ಗುರುತ್ವಾಕರ್ಷಣಾ ಮಸೂರ ಕಾರಣದಿಂದ

**Q23** SI Units & Dimensions

ಈ ಕೆಳಗಿನವುಗಳಲ್ಲಿ ಯಾವುದು ನಡೆದ ಕೆಲಸದ ಸರಿಯಾದ ಏಕಮಾನ ಅಲ್ಲ?

A. ಜೂಲ್

B. ಪಾಸ್ಕಲ್ ✓

C. ವ್ಯಾಟ್-ಸೆಕೆಂಡ್

D. ನ್ಯೂಟನ್-ಮೀಟರ್

**Q24** Separation Techniques

ಒಂದು ಕೈಗಾರಿಕಾ ಪ್ರಕ್ರಿಯೆಯಲ್ಲಿ, ಹೈಡ್ರೋಕಾರ್ಬನ್ ಹ್ಯಾಲೋಜೆನೀಕರಣಕ್ಕೆ ಒಳಗಾದಾಗ ಉತ್ಪನ್ನಗಳ ಮಿಶ್ರಣವನ್ನು ಪಡೆಯಲಾಗುತ್ತದೆ. ಏಕ-ಪರ್ಯಾಯ ಉತ್ಪನ್ನವನ್ನು ಬೇರ್ಪಡಿಸಲು ಯಾವ ವಿಧಾನವನ್ನು ಬಳಸಬಹುದು?

A. ಬಟ್ಟಿ ಇಳಿಸುವಿಕೆ ✓

B. ದಹನ

C. ಪ್ರಕ್ಷೇಪಣ

D. ಸೋಸುವಿಕೆ

Blackbook Vocabulary — Now in the App! ► Download Now on Google Play

generated by rank.qmaths.in

**Q25** Wave Properties (Frequency, Wavelength)

15 Hz ಆವರ್ತನ ಹೊಂದಿರುವ ಧ್ವನಿ ತರಂಗವನ್ನು ಯಾವ ಪ್ರಕಾರಕ್ಕೆ ಉತ್ತಮವಾಗಿ ವರ್ಗೀಕರಿಸಬಹುದು?

A. ಶ್ರಾವ್ಯ (ಕೇಳಿಸುವ) ಶಬ್ದ

B. ಇನ್ಫ್ರಾಸಾನಿಕ್ ಶಬ್ದ ✓

C. ಹೈಪರ್‌ಸಾನಿಕ್ ಶಬ್ದ

D. ಅಲ್ಟ್ರಾಸಾನಿಕ್ ಶಬ್ದ

Blackbook Vocabulary — Now in the App! ► Download Now on Google Play

generated by rank.qmaths.in

## General Science

25 Questions • Answer Key

**Q1** Atomic Structure & Models

ಒಂದೇ ಧಾತುವಿನ ಎರಡು ಪರಮಾಣುಗಳು ಬೇರೆ ಬೇರೆ ದ್ರವ್ಯರಾಶಿ ಸಂಖ್ಯೆಗಳನ್ನು ಹೊಂದಿದ್ದು, ಆದರೆ ಒಂದೇ ಸಂಖ್ಯೆಯ ಪ್ರೋಟಾನ್‌ಗಳನ್ನು ಹೊಂದಿದ್ದರೆ, ಯಾವ ಉಪಪರಮಾಣು ಕಣವು ಈ ವ್ಯತ್ಯಾಸಕ್ಕೆ ಕಾರಣವಾಗಿದೆ?

A. ಎಲೆಕ್ಟ್ರಾನ್

B. ಪಾಸಿಟ್ರಾನ್

C. ಪ್ರೋಟಾನ್

D. ನ್ಯೂಟ್ರಾನ್ ✓

**Q2** Atomic Structure & Models

ಸೋಡಿಯಂ ಧಾತುವಿನ (ಪರಮಾಣು ಸಂಖ್ಯೆ 11) ಕಕ್ಷೆಗಳಲ್ಲಿ ಎಲೆಕ್ಟ್ರಾನ್‌ಗಳ ವಿತರಣೆಯನ್ನು ಯಾವ ಜೋಡಣೆಯು ಸರಿಯಾಗಿ ತೋರಿಸುತ್ತದೆ?

A. 2,9

B. 3,9

C. 1,8,2

D. 2,8,1 ✓

**Q3** Basic Organic Chemistry

ಇಂಗಾಲದ ಬಹುರೂಪತೆಯನ್ನು ಪರಿಗಣಿಸಿ, ಈ ಕೆಳಗಿನ ಯಾವ ಸನ್ನಿವೇಶವು ಪರಿಸರ ವಿಜ್ಞಾನದಲ್ಲಿ ಅದರ ಪಾತ್ರವನ್ನು ಅತ್ಯಂತ ನಿಖರವಾಗಿ ಪ್ರತಿನಿಧಿಸುತ್ತದೆ?

A. ಬಂಡೆಗಳಲ್ಲಿ ಮೆಗ್ನೀಸಿಯಮ್ ಆಕ್ಸೈಡ್‌ನ ರೂಪುಗೊಳ್ಳುವಿಕೆ

B. ಉಸಿರಾಟ ಕ್ರಿಯೆಯಲ್ಲಿ ಇಂಗಾಲದ ಡೈಆಕ್ಸೈಡ್‌ನ ರೂಪುಗೊಳ್ಳುವಿಕೆ ✓

C. ನೀರಿನಲ್ಲಿ ಸೋಡಿಯಂ ಕಾರ್ಬೋನೇಟ್‌ನ ರೂಪುಗೊಳ್ಳುವಿಕೆ

D. ಮೂಳೆಗಳಲ್ಲಿ ಕ್ಯಾಲ್ಸಿಯಂ ಕಾರ್ಬೋನೇಟ್‌ನ ಉಪಯುಕ್ತತೆ

**Q4** Cell Biology

ಭ್ರೂಣದ ಬೆಳವಣಿಗೆಯ ಸಮಯದಲ್ಲಿ ಪ್ರತ್ಯೇಕ ಬೆರಳುಗಳ ರಚನೆಗೆ ಸಹಾಯ ಮಾಡುವ ಆಯ್ದ ಕೋಶ ನಾಶದ ಪ್ರಕ್ರಿಯೆಯನ್ನು ( selective cell destruction) ಹೆಸರಿಸಿ.

A. ಪ್ರೋಗ್ರಾಮ್ಡ್ ಸೆಲ್ ಡೆತ್ ✓

B. ಸಂಖ್ಯಾಕ್ಷೀಣ ವಿಭಜನೆ

C. ಜೀವದ್ರವ್ಯ ಲಯಕ

D. ಸಮಸೂತ್ರ ವಿಭಜನೆ

**Q5** Chemical Bonding (Ionic, Covalent)

ಸೋಡಿಯಂ ಕ್ಲೋರೈಡ್ ನಂತಹ ಅಯಾನಿಕ್ ಸಂಯುಕ್ತಗಳಲ್ಲಿ ಸಾಮಾನ್ಯವಾಗಿ ಯಾವ ಗುಣವು ಕಂಡುಬರುತ್ತದೆ?

A. ಹೆಚ್ಚು ಕರಗುವ ಮತ್ತು ಕುದಿಯುವ ಬಿಂದುಗಳು ✓

B. ಕಡಿಮೆ ಕರಗುವ ಮತ್ತು ಕುದಿಯುವ ಬಿಂದುಗಳು

C. ಕರಗಿದ ಸ್ಥಿತಿಯಲ್ಲಿ ಕಳಪೆ ವಿದ್ಯುತ್ ವಾಹಕತೆ

D. ಘನ ಸ್ಥಿತಿಯಲ್ಲಿ ಹೆಚ್ಚಿನ ವಿದ್ಯುತ್ ವಾಹಕತೆ

**Q6** Circulatory System (Heart, Blood)

ಪ್ರೌಢ ಆರ್.ಬಿ.ಸಿ ಗಳಲ್ಲಿ ನ್ಯೂಕ್ಲಿಯಸ್ ನ ಅನುಪಸ್ಥಿತಿಯು, ದೇಹಕ್ಕೆ ಆಮ್ಲಜನಕವನ್ನು ಸಾಗಿಸುವ ________ ಹೆಚ್ಚಿನ ಅವಕಾಶವನ್ನು ಒದಗಿಸುತ್ತದೆ.

A. ಡಿ.ಎನ್.ಎ ಗೆ

B. ಹಿಮೋಗ್ಲೋಬಿನ್ ಗೆ ✓

C. ಲೈಸೋಸೋಮ್ ಗಳಿಗೆ

D. ಪತ್ರಹರಿತ್ತಿಗೆ

**Q7** Echo, Resonance, Doppler Effect

ಶಬ್ದದ ಪ್ರತಿಫಲನ ತತ್ವವನ್ನು ಸ್ಟೆತೊಸ್ಕೋಪ್ ಹೇಗೆ ಬಳಸುತ್ತದೆ?

A. ಶಬ್ದ ತರಂಗಗಳನ್ನು ಹೀರಿಕೊಳ್ಳುವ ಮೂಲಕ

B. ಹೃದಯ ಬಡಿತದ ಶಬ್ದಗಳನ್ನು ರವಾನಿಸಲು ಅದರ ಕೊಳವೆಯೊಳಗಿನ ಬಹು ಪ್ರತಿಫಲನಗಳ ಮೂಲಕ ✓

C. ಆವರ್ತನದ ಮೂಲಕ ಧ್ವನಿಯನ್ನು ಶೋಧಿಸುವ ಮೂಲಕ

D. ಶಬ್ದವನ್ನು ಹೊರಕ್ಕೆ ನಿರ್ದೇಶಿಸ್ಪಡುವ ಮೂಲಕ

**Q8** Ecosystem & Food Chain

ಒಂದು ಆಹಾರ ಸರಪಳಿಯಲ್ಲಿರುವ ಎಲ್ಲಾ ಹಾವುಗಳು ಕಣ್ಮರೆಯಾದರೆ, ಆಹಾರ ಸರಪಳಿಯ ಮೇಲೆ ಉಂಟಾಗುವ ತಕ್ಷಣದ ಪರಿಣಾಮವೇನು?

A. ಹುಲ್ಲಿನ ಪ್ರಮಾಣ ಕಡಿಮೆಯಾಗುತ್ತದೆ

B. ಮರಗಳ ಸಂಖ್ಯೆ ಕಡಿಮೆಯಾಗುತ್ತದೆ

C. ಕಪ್ಪೆಗಳ ಸಂಖ್ಯೆ ಹೆಚ್ಚಾಗುತ್ತದೆ ✓

D. ಹುಲಿಗಳ ಸಂಖ್ಯೆ ಹೆಚ್ಚಾಗುತ್ತದೆ

Blackbook Vocabulary — Now in the App! ► Download Now on Google Play

generated by rank.qmaths.in

**Q9** Excretory System (Kidney)

A ಕಾಲಂನಲ್ಲಿರುವ ವಿಸರ್ಜನಾ ಉತ್ಪನ್ನವನ್ನು B ಕಾಲಂನಲ್ಲಿರುವ ಅದನ್ನು ತೆಗೆದುಹಾಕುವ ಅಂಗದೊಂದಿಗೆ ಹೊಂದಿಸಿ.

| ಕಂಬಸಾಲು A (ವಿಸರ್ಜನ ವಸ್ತು) | ಕಂಬಸಾಲು B (ಅಂಗ) |
|---|---|
| (a) ಯೂರಿಯಾ | (i) ಯಕೃತ್ |
| (b) ಇಂಗಾಲದ ಡೈ ಆಕ್ಸೈಡ್ | (ii) ಶ್ವಾಸಕೋಶಗಳು |
| (c) ಹೆಚ್ಚುವರಿ ಲವಣಗಳು | (iii) ಚರ್ಮ |
| (d) ಪಿತ್ತರಸ ಲವಣಗಳು | (iv) ಮೂತ್ರಪಿಂಡ |

A. a–iv, b–iii, c–i, d–ii

B. a–iv, b–ii, c–iii, d–i ✓

C. a–iii, b–iv, c–ii, d–i

D. a–ii, b–i, c–iv, d–iii

**Q10** Five Kingdom Classification

ವೈದ್ಯಕೀಯ ತನಿಖೆಯು, ಆಹಾರಕ್ಕಾಗಿ ಬ್ಯಾಕ್ಟೀರಿಯಾವನ್ನು ಸೇವಿಸುವ ಏಕಕೋಶೀಯ, ಚಲನಶೀಲ, ಯುಕ್ಯಾರಿಯೋಟಿಕ್ ಜೀವಿಯನ್ನು ಗುರುತಿಸುತ್ತದೆ. ಐದು ಸಾಮ್ರಾಜ್ಯ ವರ್ಗೀಕರಣ ವ್ಯವಸ್ಥೆಯಲ್ಲಿ ಈ ಜೀವಿಯು ಯಾವ ಸ್ಥಾನಕ್ಕೆ ಅತ್ಯುತ್ತಮವಾಗಿ ಸೇರಲ್ಪಡುತ್ತದೆ?

A. ಪ್ರೋಟಿಸ್ಟಾ ✓

B. ಮೊನೆರಾ

C. ಅನಿಮೇಲಿಯಾ

D. ಶಿಲೀಂಧ್ರಗಳು

**Q11** Important Salts & Their Uses

ಈ ಕೆಳಗಿನವುಗಳಲ್ಲಿ ಯಾವುದು ಬ್ಲೀಚಿಂಗ್ ಪೌಡರ್‌ನ ಒಂದು ಉಪಯುಕ್ತತೆಯಲ್ಲ?

A. ಹತ್ತಿ ಮತ್ತು ಲಿನಿನ್ ಬಟ್ಟೆಗಳನ್ನು ಬ್ಲೀಚ್ ಮಾಡುವುದು

B. ಕುಡಿಯುವ ನೀರನ್ನು ಸೋಂಕುರಹಿತಗೊಳಿಸುವುದು

C. ನೀರಿನ ಗಡಸುತನವನ್ನು ತೆಗೆದು ಹಾಕುವುದು ✓

D. ಕ್ಲೋರೋಫಾರ್ಮ್ ಉತ್ಪಾದಿಸುವುದು

**Q12** Magnetic Effects of Current

ವಿದ್ಯುತ್-ಪ್ರವಾಹವಿರುವ ವೃತ್ತಾಕಾರದ ವಾಹಕ ಸುರುಳಿಯ ಕೇಂದ್ರಭಾಗದಲ್ಲಿನ ಕಾಂತಕ್ಷೇತ್ರದ ದಿಕ್ಕನ್ನು ನಿರ್ಧರಿಸಲು ಈ ಕೆಳಗಿನ ಯಾವ ನಿಯಮವನ್ನು ಬಳಸಲಾಗುತ್ತದೆ?

A. ಜೌಲನ ಉಷ್ಣೋತ್ಪಾದನಾ ನಿಯಮ

B. ಬಲಗೈನ ಹೆಬ್ಬೆರಳ ನಿಯಮ ✓

C. ಫ್ಲೆಮಿಂಗ್‌ನ ಎಡಗೈ ನಿಯಮ

D. ಓಮ್‌ನ ನಿಯಮ

**Q13** Magnetic Effects of Current

ಒಬ್ಬ ತಂತ್ರಜ್ಞನು ತಂತಿಯ ವಸ್ತು ಅಥವಾ ಪರಿಸರವನ್ನು ಬದಲಾಯಿಸದೆ ವಿದ್ಯುತ್ ಪ್ರವಾಹವನ್ನು ಸಾಗಿಸುವ ತಂತಿಯ ಸುತ್ತ ಉಂಟಾಗುವ ಕಾಂತೀಯ ಪರಿಣಾಮವನ್ನು ಕಡಿಮೆ ಮಾಡಲು ಬಯಸುತ್ತಾನೆ. ಇದಕ್ಕಾಗಿ ಅವನು ಯಾವ ವಿಧಾನವನ್ನು ಬಳಸಬೇಕು?

A. ವಿದ್ಯುತ್ ಪ್ರವಾಹವನ್ನು ಬದಲಿಸದೆ ತಂತಿಯನ್ನು ತೆಳುವಾಗಿಸುವುದು

B. ಬಳಸುವ ತಂತಿಯ ಉದ್ದವನ್ನು ಹೆಚ್ಚಿಸುವುದು

C. ತಂತಿಯ ಮೂಲಕ ಹರಿಯುವ ವಿದ್ಯುತ್ ಪ್ರವಾಹದ ಪ್ರಮಾಣವನ್ನು ಕಡಿಮೆ ಮಾಡುವುದು ✓

D. ತಂತಿಯ ಪಥವನ್ನು ಸರಳ ರೇಖೆಗೆ ಬದಲಿಸುವುದು

**Q14** Mechanics

ಒಬ್ಬ ಸೈಕಲ್ ಸವಾರನು 20 ಸೆಕೆಂಡುಗಳಲ್ಲಿ ಉತ್ತರಕ್ಕೆ 60 ಮೀಟರ್ ಮತ್ತು ನಂತರ ದಕ್ಷಿಣಕ್ಕೆ 80 ಮೀಟರ್ ಪ್ರಯಾಣಿಸುತ್ತಾನೆ. ಹಾಗಾದರೆ ಅವನ ಸರಾಸರಿ ವೇಗದ ಪರಿಮಾಣ ಎಷ್ಟು?

A. ಪ್ರತಿ ಸೆಕೆಂಡಿಗೆ ಒಂದು ಮೀಟರ್ ✓

B. ಪ್ರತಿ ಸೆಕೆಂಡಿಗೆ ಐದು ಮೀಟರ್‌ಗಳು

C. ಪ್ರತಿ ಸೆಕೆಂಡಿಗೆ ಏಳು ಮೀಟರ್‌ಗಳು

D. ಪ್ರತಿ ಸೆಕೆಂಡಿಗೆ ಸೊನ್ನೆ ಮೀಟರ್‌ಗಳು

**Q15** Mirrors & Lenses

ಒಂದು ನಿಮ್ನ ದರ್ಪಣದ ಮುಂದೆ 60 cm ದೂರದಲ್ಲಿ ವಸ್ತುವನ್ನು ಇಟ್ಟಾಗ, ದರ್ಪಣದ ಮುಂಭಾಗದಲ್ಲಿ 30 cm ದೂರದಲ್ಲಿ ನೈಜ ಮತ್ತು ತಲೆಕೆಳಗಾದ ಬಿಂಬವು ಮೂಡುತ್ತದೆ. ಹಾಗಾದರೆ, ಆ ದರ್ಪಣದ ಸಂಗಮ ದೂರವನ್ನು (focal length) ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ದರ್ಪಣದ ಸಂಗಮದೂರವು -30 ಆಗಿದೆ

B. ದರ್ಪಣದ ಸಂಗಮದೂರವು -20 ಆಗಿದೆ ✓

C. ದರ್ಪಣದ ಸಂಗಮದೂರವು +15 ಆಗಿದೆ

D. ದರ್ಪಣದ ಸಂಗಮದೂರವು +10 ಆಗಿದೆ

**Q16** Mirrors & Lenses

ಒಂದು ಮಸೂರವು ವಸ್ತುವಿನ ಎರಡು ಪಟ್ಟು ಎತ್ತರದ ಚಿತ್ರವನ್ನು ಸೃಷ್ಟಿಸಿದರೆ, ಮಸೂರವು ಉತ್ಪಾದಿಸುವ ವರ್ಧನೆ ಎಷ್ಟು?

A. 1

B. -2

C. 0.5

D. 2 ✓

Blackbook Vocabulary — Now in the App! ► Download Now on Google Play

generated by rank.qmaths.in

**Q17** Mixtures, Solutions, Colloids

ಈ ಕೆಳಗಿನವುಗಳಲ್ಲಿ ನಿಲಂಬನದ ಲಕ್ಷಣ ಯಾವುದು?

A. ಕಣಗಳು ತಳದಲ್ಲಿ ನೆಲೆಗೊಳ್ಳುವುದಿಲ್ಲ

B. ಕಣಗಳು 1 nm ಗಿಂತ ಚಿಕ್ಕದಾಗಿರುತ್ತವೆ

C. ಸೋಸುವಿಕೆಯಿಂದ ಬೇರ್ಪಡಿಸಬಹುದು ✓

D. ಸಮರೂಪದ ಮಿಶ್ರಣ

**Q18** Newton's Laws of Motion

_________ ಕಾರಣದಿಂದಾಗಿ, ಹಠಾತ್ ಬ್ರೇಕ್ ಹಾಕುವಾಗ ಅಥವಾ ಡಿಕ್ಕಿಯ ಸಮಯದಲ್ಲಿ ಪ್ರಯಾಣಿಕರನ್ನು ರಕ್ಷಿಸಲು ಕಾರುಗಳಲ್ಲಿ ಸೀಟ್ ಬೆಲ್ಟ್‌ಗಳನ್ನು ಒದಗಿಸಲಾಗುತ್ತದೆ.

A. ದಿಕ್ಕಿನ ಜಡತ್ವ

B. ಘರ್ಷಣೆ

C. ಚಲನೆಯ ಜಡತ್ವ ✓

D. ವಿಶ್ರಾಂತ ಸ್ಥಿತಿಯ ಜಡತ್ವ

**Q19** Properties & Tests

ಸಂಪೂರ್ಣ ತಟಸ್ಥೀಕರಣ ರಾಸಾಯನಿಕ ಕ್ರಿಯೆಯ ಸಮಯದಲ್ಲಿ ಈ ಕೆಳಗಿನ ಯಾವ ಉತ್ಪನ್ನಗಳು ಯಾವಾಗಲೂ ರೂಪುಗೊಳ್ಳುತ್ತವೆ?

A. ಆಮ್ಲ ಮತ್ತು ಪ್ರತ್ಯಾಮ್ಲ

B. ಲೋಹ ಮತ್ತು ಅನಿಲ

C. ಅನಿಲ ಮತ್ತು ಲವಣ

D. ಲವಣ ಮತ್ತು ನೀರು ✓

**Q20** Respiratory System

ಯೀಸ್ಟ್ ಜೀವಕೋಶಗಳಲ್ಲಿ ಆಮ್ಲಜನಕರಹಿತ ಉಸಿರಾಟದ ಸಮಯದಲ್ಲಿ ರೂಪುಗೊಳ್ಳುವ ಅಂತಿಮ ಉತ್ಪನ್ನಗಳು ಯಾವುವು?

A. ಲ್ಯಾಕ್ಟಿಕ್ ಆಮ್ಲ ಮತ್ತು ನೀರು

B. ನೀರು ಮತ್ತು ಆಮ್ಲಜನಕ

C. ಎಥೆನಾಲ್ ಮತ್ತು ಇಂಗಾಲದ ಡೈಆಕ್ಸೈಡ್ ✓

D. ಗ್ಲುಕೋಸ್ ಮತ್ತು ಆಮ್ಲಜನಕ

**Q21** Respiratory System

ಒಬ್ಬ ಕ್ಷೇತ್ರ ಪರಿಸರಶಾಸ್ತ್ರಜ್ಞರು ಕಡಿಮೆ ಆಮ್ಲಜನಕ ಹೊಂದಿರುವ ಎತ್ತರದ ಸರೋವರದಲ್ಲಿರುವ ಮೀನುಗಳ ಬಗ್ಗೆ ಅಧ್ಯಯನ ಮಾಡುತ್ತಾರೆ. ಹಾಗಾದರೆ ಈ ಮೀನುಗಳ ಕಿವಿರುಗಳಲ್ಲಿನ ಯಾವ ರಚನಾತ್ಮಕ ರೂಪಾಂತರವನ್ನು ಹೆಚ್ಚಾಗಿ ಗಮನಿಸಬಹುದು?

A. ಗಿಲ್ ಅಂಗಾಂಶದಲ್ಲಿ ಕಡಿಮೆ ಕ್ಯಾಪಿಲ್ಲರಿಗಳು

B. ದಪ್ಪವಾದ ಕಿವಿರುಗಳ ಪೊರೆಗಳು

C. ಅನಿಲ ವಿನಿಮಯಕ್ಕಾಗಿ ಹೆಚ್ಚಿನ ಮೇಲ್ಮೈ ವಿಸ್ತೀರ್ಣ ✓

D. ಕಿವಿರುಗಳಲ್ಲಿ ರಕ್ತದ ಹರಿವು ಕಡಿಮೆಯಾಗುತ್ತದೆ

**Q22** Soaps & Detergents

ಬಟ್ಟೆಗಳಿಂದ ಎಣ್ಣೆಯುಕ್ತ ಕಲೆಗಳನ್ನು ಸ್ವಚ್ಛಗೊಳಿಸುವಲ್ಲಿ ಸಾಬೂನುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕಲಿಲ ಕಣಗಳು ಹೇಗೆ ಸಹಾಯ ಮಾಡುತ್ತವೆ?

A. ಅವು ಧ್ರುವೀಯವಲ್ಲದ ವಸ್ತುಗಳನ್ನು ಸುತ್ತುವರೆಯುತ್ತವೆ ಮತ್ತು ಸೇರಿಕೊಳ್ಳುತ್ತವೆ, ಇದರಿಂದಾಗಿ ನೀರಿನಲ್ಲಿ ಕರಗುವಂತೆ ಮಾಡುತ್ತವೆ ✓

B. ಅವು ನೀರಿನ pH ಮೌಲ್ಯವನ್ನು ಹೆಚ್ಚಿಸುತ್ತವೆ, ಇದರಿಂದಾಗಿ ಎಣ್ಣೆಗಳು ತೊಳೆದುಹೋಗಬಹುದಾದ ಘನ ಪ್ರಕ್ಷೇಪನಗಳನ್ನು ರೂಪಿಸುತ್ತವೆ

C. ಅವು ಬಟ್ಟೆಯ ಮೇಲ್ಮೈಯನ್ನು ನೀರನ್ನು ಅಂಟಿಕೊಳ್ಳುವುದರಿಂದ ತಡೆಯುವ ಜಲವಿಕರ್ಷಕ ಪದರದಿಂದ ಲೇಪಿಸುತ್ತವೆ

D. ಅವು ರಾಸಾಯನಿಕವಾಗಿ ಎಣ್ಣೆಯುಕ್ತ ಅಣುಗಳನ್ನು ಸುಲಭವಾಗಿ ಆವಿಯಾಗಬಲ್ಲ ಧ್ರುವೀಯ ತುಣುಕುಗಳಾಗಿ ವಿಭಜಿಸುತ್ತವೆ

**Q23** Work, Energy & Power

0.5 kg ದ್ರವ್ಯರಾಶಿಯಿರುವ ಒಂದು ಆಟಿಕೆ ಕಾರು 2 m/s ವೇಗದಲ್ಲಿ ಚಲಿಸುತ್ತದೆ, ಅದರ ಚಲನ ಶಕ್ತಿಯು ______ಆಗಿರುತ್ತದೆ.

A. 0.5 J

B. 1 J ✓

C. 2 J

D. 2.5 J

Blackbook Vocabulary — Now in the App! ▶ Download Now on Google Play

**Q24** Work, Energy & Power

ಒಂದು ಸ್ಥಿರವಾದ ವಸ್ತುವಿಗೆ ದ್ರವ್ಯರಾಶಿ ಇರುವುದರಿಂದ ಅದು ಚಲನ ಶಕ್ತಿ ಹೊಂದಿರುತ್ತದೆ ಎಂದು ಒಬ್ಬ ವಿದ್ಯಾರ್ಥಿಯು ಹೇಳುತ್ತಾನೆ. ಈ ಹೇಳಿಕೆಯನ್ನು ಮೌಲ್ಯಮಾಪನ ಮಾಡಿ.

A. ಈ ಹೇಳಿಕೆಯು ಭೂಮಿಯ ಮೇಲಿನ ವಸ್ತುಗಳಿಗೆ ಮಾತ್ರ ಸರಿ ಆಗುತ್ತದೆ

B. ಈ ಹೇಳಿಕೆಯು ಸರಿಯಾಗಿದೆ ಏಕೆಂದರೆ ದ್ರವ್ಯರಾಶಿಯನ್ನು ಹೊಂದಿರುವ ಎಲ್ಲಾ ವಸ್ತುಗಳು ಚಲನಶಕ್ತಿಯನ್ನು ಹೊಂದಿರುತ್ತವೆ

C. ಈ ಹೇಳಿಕೆಯು ತಪ್ಪಾಗಿದೆ ಏಕೆಂದರೆ ಚಲನ ಶಕ್ತಿಗೆ ಚಲನೆಯ ಅಗತ್ಯವಿರುತ್ತದೆ ✓

D. ಈ ಹೇಳಿಕೆಯು ತಪ್ಪಾಗಿದೆ ಚಲನೆಯಲ್ಲಿ ಇರುವ ಶಕ್ತಿಯು ಮಾತ್ರ ವಿಭವ ಶಕ್ತಿ ಎಂದು ಪರಿಗಣಿಸಲ್ಪಡುತ್ತದೆ

**Q25** Respiratory System

A ಕಾಲಮ್ ಅನ್ನು B ಕಾಲಮ್‌ನೊಂದಿಗೆ ಹೊಂದಿಸಿ.

| | ಕಾಲಮ್ A | | ಕಾಲಮ್ B |
|---|---|---|---|
| (a) | ಶ್ವಾಸಕೋಶದ ಸಣ್ಣ ಗಾಳಿಗೂಡುಗಳು | (i) | ಆಹಾರವು ಶ್ವಾಸನಾಳದೊಳಗೆ ಪ್ರವೇಶಿಸುವುದನ್ನು ತಡೆಯುತ್ತದೆ |
| (b) | ಹಿಮೋಗ್ಲೋಬಿನ್ | (ii) | ಅನಿಲಗಳ ವಿನಿಮಯ |
| (c) | ವಪೆ | (iii) | ಆಮ್ಲಜನಕದ ಸಾಗಾಣಿಕೆ |
| (d) | ಕಿರುನಾಲಗೆ | (iv) | ಉಸಿರೆಳೆದುಕೊಳ್ಳುವಿಕೆಗೆ ಸಹಾಯಕವಾಗಿದೆ |

A. a–iv, b–iii, c–ii, d–i

B. a–ii, b–iv, c–iii, d–i

C. a–ii, b–iii, c–iv, d–i ✓

D. a–iii, b–ii, c–iv, d–i

Blackbook Vocabulary — Now in the App! ► Download Now on Google Play

generated by rank.qmaths.in

## General Science

25 Questions • Answer Key

**Q1** Atomic Structure & Models

ವಿವಿಧ ಮೂಲಧಾತುಗಳ ಪರಮಾಣುಗಳ ಕುರಿತಂತೆ ಡಾಲ್ಟನ್‌ನ ಪರಮಾಣು ಸಿದ್ಧಾಂತವು ಏನನ್ನು ಸೂಚಿಸುತ್ತದೆ?

A. ಅವು ವಿಭಿನ್ನ ಗಾತ್ರಗಳನ್ನು ಹೊಂದಿವೆ ಆದರೆ ಏಕಪ್ರಕಾರದ ದ್ರವ್ಯರಾಶಿಗಳನ್ನು ಹೊಂದಿವೆ.

B. ಅವು ಏಕಪ್ರಕಾರದ ದ್ರವ್ಯರಾಶಿಗಳನ್ನು ಹೊಂದಿರುತ್ತವೆ ಆದರೆ ವಿಭಿನ್ನ ಆಕಾರಗಳನ್ನು ಹೊಂದಿರುತ್ತವೆ.

C. ಅವುಗಳು ಪ್ರತಿಯೊಂದು ಅಂಶದಲ್ಲೂ ಒಂದೇ ಆಗಿರುತ್ತವೆ

D. ಅವು ವಿಭಿನ್ನ ದ್ರವ್ಯರಾಶಿಗಳು ಮತ್ತು ಗುಣಲಕ್ಷಣಗಳನ್ನು ಹೊಂದಿವೆ. ✓

**Q2** Atoms & Molecules

ಈ ಕೆಳಗಿನ ಯಾವ ಧಾತುವು ಅತ್ಯಂತ ಹೆಚ್ಚು ಪರಮಾಣುಗಳನ್ನು ಹೊಂದಿರುವ ಅಣುಗಳನ್ನು ಹೊಂದಿದೆ?

A. ಗಂಧಕ (Sulphur) ✓

B. ಆಮ್ಲಜನಕ (Oxygen)

C. ಸಾರಜನಕ (Nitrogen)

D. ಕ್ಲೋರಿನ್ (Chlorine)

**Q3** Basic Organic Chemistry

ಗ್ರ್ಯಾಫೈಟ್ ವಿದ್ಯುತ್ ವಾಹಕವಾಗಿದ್ದರೂ ವಜ್ರ ಏಕೆ ವಿದ್ಯುತ್ ವಾಹಕ ಅಲ್ಲ?

A. ವಜ್ರವು ಜಾರುವ ಮತ್ತು ವಹನಿಸುವ ಪದರಗಳನ್ನು ಹೊಂದಿರುತ್ತದೆ

B. ವಜ್ರದಲ್ಲಿರುವ ಎಲ್ಲಾ ಎಲೆಕ್ಟ್ರಾನ್‌ಗಳು ಬಂಧದಲ್ಲಿ ತೊಡಗಿಕೊಂಡಿವೆ ✓

C. ಸ್ಫಟಿಕರಹಿತ ಇಂಗಾಲವು ಸ್ಥಳೀಕರಿಸಿದ ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತದೆ

D. ಫುಲ್ಲೆರಿನ್ ಗಳು ತನ್ನ ಪಂಜರದಂಥ ರಚನೆಯಲ್ಲಿ ಚಲಿಸುವ ಎಲೆಕ್ಟ್ರಾನ್‌ಗಳನ್ನು ಹೊಂದಿರುತ್ತವೆ

**Q4** Carbon & Its Compounds

ಸತ್ತ ಸಮುದ್ರ ಜೀವಿಗಳಿಂದ ಪೆಟ್ರೋಲಿಯಂ ರೂಪುಗೊಳ್ಳಲು ಯಾವ ಸ್ಥಿತಿ ಅತ್ಯಂತ ಅವಶ್ಯಕವಾಗಿದೆ?

A. ಸೂರ್ಯನ ಬೆಳಕು ಮತ್ತು ತಾಜಾ ಆಮ್ಲಜನಕಕ್ಕೆ ಒಡ್ಡಿಕೊಳ್ಳುವುದು

B. ಮೇಲ್ಮೈ ನೀರು ಮತ್ತು ಗಾಳಿಗೆ ನೇರ ಸಂಪರ್ಕ

C. ಹೆಚ್ಚಿನ ಒತ್ತಡ ಮತ್ತು ದೀರ್ಘಕಾಲದವರೆಗೆ ಗಾಳಿ ಇಲ್ಲದಿರುವುದು ✓

D. ಕಡಿಮೆ ತಾಪಮಾನ ಮತ್ತು ಮುಕ್ತ ಗಾಳಿಯ ಉಪಸ್ಥಿತಿ

**Q5** Conduction, Convection, Radiation

ಒಬ್ಬ ಪರಿಸರಶಾಸ್ತ್ರಜ್ಞನು ಗಾಳಿಯ ಮಾದರಿಗಳನ್ನು ವಿಶ್ಲೇಷಿಸುತ್ತಾನೆ ಮತ್ತು ಅವು ಸಮಭಾಜಕ ವೃತ್ತದಿಂದ ಧ್ರುವಗಳ ಕಡೆಗೆ ಉಗಮಿಸುತ್ತವೆ ಎಂದು ತೀರ್ಮಾನಿಸುತ್ತಾನೆ. ಈ ಅವಲೋಕನಕ್ಕೆ ಆಧಾರವಾಗಿರುವ ತತ್ವವು ಇದಾಗಿದೆ:

A. ಸಾಗರದ ಲವಣಾಂಶದ ವ್ಯತ್ಯಾಸಗಳು ವಾಯು ದ್ರವ್ಯರಾಶಿಗಳನ್ನು ಉತ್ತರ ಮತ್ತು ದಕ್ಷಿಣಕ್ಕೆ ತಳ್ಳುತ್ತವೆ

B. ಭೂಮಿಯ ಕಾಂತೀಯ ಕ್ಷೇತ್ರವು ಸಮಭಾಜಕ ವೃತ್ತದಿಂದ ಧ್ರುವಗಳಿಗೆ ಗಾಳಿಗಳನ್ನು ನಿರ್ದೇಶಿಸುತ್ತದೆ

C. ಉಬ್ಬರವಿಳಿತದ ಬಲಗಳು ಜಾಗತಿಕವಾಗಿ ವಾತಾವರಣದ ಪ್ರವಾಹಗಳನ್ನು ಚಲಿಸುವಂತೆ ಮಾಡುತ್ತವೆ

D. ಅಸಮ ಸೌರ ತಾಪನದಿಂದ ಉಂಟಾಗುವ ತಾಪಮಾನದ ಇಳಿಜಾರುಗಳು ಗಾಳಿಯನ್ನು ಓಡಿಸುತ್ತವೆ ✓

**Q6** Conduction, Convection, Radiation

ಭೌತಿಕ ಭೂಗೋಳಶಾಸ್ತ್ರಜ್ಞರು (physical geographer) ಕರಾವಳಿಯ ಎರಡು ನಗರಗಳನ್ನು ಹೋಲಿಸುತ್ತಾರೆ: ಒಂದು ಸಮಭಾಜಕ ವೃತ್ತದಲ್ಲಿದೆ ಮತ್ತು ಇನ್ನೊಂದು ಧ್ರುವಗಳ ಹತ್ತಿರದಲ್ಲಿದೆ. ಎರಡೂ ನಗರಗಳು ದಿನದಲ್ಲಿ ಒಂದೇ ಅವಧಿಯ ಸೂರ್ಯನ ಬೆಳಕನ್ನು ಪಡೆಯುತ್ತವೆ. ಆದರೆ ಸಮಭಾಜಕ ವೃತ್ತದಲ್ಲಿರುವ ನಗರವು ಹೆಚ್ಚು ಬೆಚ್ಚಗಿರುತ್ತದೆ. ಇದಕ್ಕೆ ಕಾರಣವೇನು?

A. ಎರಡೂ ನಗರಗಳು ಸಮಾನ ಸೂರ್ಯನ ಬೆಳಕನ್ನು ಹೊಂದಿರುವುದರಿಂದ ಒಂದೇ ರೀತಿಯ ತಾಪಮಾನ ಇರುತ್ತದೆ

B. ಸಮಭಾಜಕ ವೃತ್ತದ ಬಳಿಯ ಸೂರ್ಯನ ಬೆಳಕು ಹೆಚ್ಚು ನೇರವಾಗಿ ಬೀಳುತ್ತದೆ, ಇದರಿಂದ ಶಾಖಶಕ್ತಿ ಕೇಂದ್ರೀಕರಿಸುತ್ತದೆ ✓

C. ನೀರಿನ ಸಮೀಪದಲ್ಲಿ ಇರುವುದರಿಂದ ಧ್ರುವ ರೇಖೆಯ ಬಳಿ ಇರುವ ನಗರವು ಸೂರ್ಯನ ಬೆಳಕನ್ನು ಕಡಿಮೆ ಹೀರಿಕೊಳ್ಳುತ್ತದೆ

D. ಸಮಭಾಜಕ ವೃತ್ತದ ಬಳಿ ಮೇಲ್ಮೈ ಪ್ರತಿಫಲನವು ಅಧಿಕವಾಗಿದ್ದು ಅದನ್ನು ಹೆಚ್ಚು ಬಿಸಿಯಾಗಿ ಇರಿಸುತ್ತದೆ

**Q7** Current Electricity (Ohm's Law, Circuits)

ಒಂದು ವಿದ್ಯುತ್ ಮಂಡಲದಲ್ಲಿನ ಕೋಶ (cell) ದಲ್ಲಿ ರಾಸಾಯನಿಕ ಶಕ್ತಿಯು ಯಾವ ಪಾತ್ರವನ್ನು ವಹಿಸುತ್ತದೆ?

A. ಅದು ವಿಭವಾಂತರವನ್ನು ಸೃಷ್ಟಿಸುತ್ತದೆ ಮತ್ತು ನಿರ್ವಹಿಸುತ್ತದೆ ✓

B. ಅದು ತಂತಿಯ ಉದ್ದಕ್ಕೂ ಎಲೆಕ್ಟ್ರಾನ್ ಗಳನ್ನು ನೇರವಾಗಿ ಜರುಗಿಸುತ್ತದೆ

C. ಅದು ಮಂಡಲದ ರೋಧವನ್ನು ಬದಲಾಯಿಸುತ್ತದೆ

D. ಅದು ವಿದ್ಯುತ್ ಪ್ರವಾಹವನ್ನು ಅಳೆಯುತ್ತದೆ

Blackbook Vocabulary — Now in the App! ► Download Now on Google Play

**Q8** Light & Optics

ಹಗಲಿನಲ್ಲಿ ಆಕಾಶವು ನೀಲಿಯಾಗಿ ಮತ್ತು ಸೂರ್ಯಾಸ್ತದ ಸಮಯದಲ್ಲಿ ಕೆಂಪಾಗಿ ಏಕೆ ಕಾಣಿಸುತ್ತದೆ ಎಂಬುದನ್ನು ವಿವರಿಸಲು ವಿಜ್ಞಾನಿಯೊಬ್ಬರು ನೀರಿರುವ ಗಾಜಿನ ತೊಟ್ಟಿ, ಫ್ಲ್ಯಾಶ್‌ಲೈಟ್ ಮತ್ತು ಸ್ವಲ್ಪ ಪ್ರಮಾಣದ ಹಾಲನ್ನು ಬಳಸಿ ತೋರಿಸಲು ಬಯಸುತ್ತಾರೆ. ಯಾವ ವ್ಯವಸ್ಥೆಯು ವಾತಾವರಣದಲ್ಲಿ ಕಂಡುಬರುವ ಬೆಳಕಿನ ಚದುರುವಿಕೆಯನ್ನು ಅತ್ಯುತ್ತಮವಾಗಿ ತೋರಿಸುತ್ತದೆ?

A. ಸ್ವಚ್ಛ ನೀರಿನ ಮೂಲಕ ಫ್ಲ್ಯಾಶ್‌ಲೈಟ್ ಹರಿಸುವುದು ಮತ್ತು ವಿರುದ್ಧ ಕಡೆಯಿಂದ ಹರಡುವ ಬೆಳಕನ್ನು ಗಮನಿಸುವುದು

B. ನೀರಿಗೆ ಹೆಚ್ಚಿನ ಪ್ರಮಾಣದ ಹಾಲನ್ನು ಸೇರಿಸುವುದು ಮತ್ತು ಮೇಲಿನಿಂದ ಮಿಶ್ರಣದ ಮೂಲಕ ಫ್ಲ್ಯಾಶ್‌ಲೈಟ್ ಬೆಳಗಿಸುವುದು

C. ಮೇಲಿನಿಂದ ಸ್ವಚ್ಛ ನೀರಿನ ಮೇಲೆ ಫ್ಲ್ಯಾಶ್‌ಲೈಟ್ ಹರಿಸುವುದು ಮತ್ತು ಪ್ರಕಾಶಮಾನವಾದ ಪ್ರದೇಶವನ್ನು ಗಮನಿಸುವುದು.

D. ನೀರಿಗೆ ಸ್ವಲ್ಪ ಪ್ರಮಾಣದ ಹಾಲನ್ನು ಬೆರೆಸುವುದು ಹಾಗೂ ಚದುರಿದ ಬೆಳಕನ್ನು ವೀಕ್ಷಿಸಲು ಪಕ್ಕದಿಂದ ಟ್ಯಾಂಕ್ ಮೂಲಕ ಫ್ಲ್ಯಾಶ್‌ಲೈಟ್ ಹರಿಸುವುದು ✓

**Q9** Magnetic Effects of Current

ಒಂದು ಆಯತಾಕಾರದ ಸುರುಳಿಯನ್ನು ಏಕರೂಪದ ಕಾಂತೀಯ ಕ್ಷೇತ್ರದಲ್ಲಿ ಇರಿಸಲಾಗಿದೆ. ಒಂದುವೇಳೆ ವಿದ್ಯುತ್ ಪ್ರವಾಹದ ದಿಕ್ಕು ಹಿಮ್ಮುಖವಾಗಿದ್ದರೆ, ಸುರುಳಿಯ ಪ್ರತಿಯೊಂದು ಭಾಗದ ಮೇಲೆ ವರ್ತಿಸುವ ಬಲದ ಮೇಲೆ ಏನು ಪರಿಣಾಮ ಬೀರುತ್ತದೆ?

A. ಬಲದ ಪರಿಮಾಣವು ಶೂನ್ಯವಾಗುತ್ತದೆ

B. ಬಲವು ಸುರುಳಿಯ ಸಮತಲಕ್ಕೆ ಲಂಬವಾಗಿ ವರ್ತಿಸುತ್ತದೆ

C. ಪ್ರತಿಯೊಂದು ಭಾಗದ ಮೇಲಿನ ಬಲದ ದಿಕ್ಕು ಹಿಮ್ಮುಖವಾಗುತ್ತದೆ ✓

D. ಬಲದ ಪರಿಮಾಣವು ದ್ವಿಗುಣಗೊಳ್ಳುತ್ತದೆ

**Q10** Mixtures, Solutions, Colloids

ಈ ಕೆಳಗಿನವುಗಳಲ್ಲಿ ಯಾವುದು ನೈಜ ದ್ರಾವಣದ ಗುಣಲಕ್ಷಣವಾಗಿದೆ?

A. ದ್ರಾವ್ಯ ಕಣಗಳನ್ನು ಬರಿಗಣ್ಣಿನಿಂದ ನೋಡಬಹುದು.

B. ದ್ರಾವ್ಯ ಕಣಗಳನ್ನು ಶೋಧನೆಯಿಂದ ಸುಲಭವಾಗಿ ಬೇರ್ಪಡಿಸಲಾಗುತ್ತದೆ.

C. ದ್ರಾವ್ಯ ಕಣಗಳು ದ್ರಾವಣದಲ್ಲಿ ಸಮವಾಗಿ ಹಂಚಿಕೆಯಾಗುತ್ತವೆ. ✓

D. ದ್ರಾವ್ಯ ಕಣಗಳು ಕೆಳಭಾಗದಲ್ಲಿ ವೇಗವಾಗಿ ನೆಲೆಗೊಳ್ಳುತ್ತವೆ.

**Q11** Nervous System & Brain

ನರ ಅಂಗಾಂಶದ ಬಗ್ಗೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿ?
(i) ನರ ಅಂಗಾಂಶಗಳು ನರಕೋಶಗಳಿಂದ ಮಾಡಲ್ಪಟ್ಟಿವೆ.
(ii) ನರಕೋಶಗಳು ಒಂದು ಆಕ್ಸಾನ್ ಮತ್ತು ಅನೇಕ ಡೆಂಡ್ರೈಟ್‌ಗಳನ್ನು ಹೊಂದಿರುತ್ತವೆ.
(iii) ನರ ಆವೇಗಗಳು ನರ ತಂತುವಿನ ಮೂಲಕ ಹಾದುಹೋಗುವ ಸಂಕೇತಗಳಾಗಿವೆ.

A. (i) ಮತ್ತು (iii) ಮಾತ್ರ

B. (i) ಮತ್ತು (ii) ಮಾತ್ರ

C. (ii) ಮತ್ತು (iii) ಮಾತ್ರ

D. (i), (ii) & (iii) ✓

**Q12** Newton's Laws of Motion

ಗನ್ ನಿಂದ ಗುಂಡನ್ನು ಹಾರಿಸಿದಾಗ ಗನ್ ಏಕೆ ಹಿಂಪುಟಿಯುತ್ತದೆ?

A. ಬುಲೆಟ್ ಮುಂದಕ್ಕೆ ತಳ್ಳಲ್ಪಡುತ್ತದೆ, ಮತ್ತು ಗನ್ ಸಮಾನವಾದ ಮತ್ತು ವಿರುದ್ಧವಾದ ಹಿಮ್ಮುಖ ಬಲವನ್ನು ಅನುಭವಿಸುತ್ತದೆ ✓

B. ಗನ್ ಭಾರವಾಗಿರುವುದರಿಂದ ಸ್ವಾಭಾವಿಕವಾಗಿಯೇ ಹಿಂದಕ್ಕೆ ಚಲಿಸುತ್ತದೆ

C. ಗಾಳಿಯ ಪ್ರತಿರೋಧವು ಗನ್ ಅನ್ನು ಹಿಂದಕ್ಕೆ ತಳ್ಳುತ್ತದೆ

D. ಗನ್ ನ ಟ್ರಿಗ್ಗರ್ ಗನ್ ಅನ್ನು ಹಿಂದಕ್ಕೆ ಚಲಿಸುವಂತೆ ಮಾಡುತ್ತದೆ

**Q13** Newton's Laws of Motion

ಒಂದು ಕುದುರೆಯು 500 N ಬಲದಿಂದ ಒಂದು ಬಂಡಿಯನ್ನು ಎಳೆಯುತ್ತದೆ. ಬಂಡಿಯಿಂದಾಗಿ ಕುದುರೆ ಅನುಭವಿಸುವ ಬಲ ಎಷ್ಟು?

A. 0 N

B. 250 N

C. 1000 N

D. 500 N ಚಲನೆಗೆ ಸಮಾನವಾಗಿ ಮತ್ತು ವಿರುದ್ಧವಾಗಿ ✓

**Q14** Photosynthesis

ಈ ಕೆಳಗಿನ ಯಾವ ಪ್ರಕ್ರಿಯೆಯು ಶಕ್ತಿ ಮತ್ತು ಇಂಗಾಲದ ಅವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿಯನ್ನು ಹೊಂದಿದೆ?

A. ಸ್ಥಾನಾಂತರಣ

B. ದ್ಯುತಿಸಂಶ್ಲೇಷಣೆ ✓

C. ಉಸಿರಾಟ

D. ಬಾಷ್ಪ ವಿಸರ್ಜನೆ

Blackbook Vocabulary — Now in the App! ▶ Download Now on Google Play

**Q15** Physical & Chemical Properties

ಅಲೋಹಗಳ ಕುರಿತಾದ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ ಮತ್ತು ಸರಿಯಾದ ಆಯ್ಕೆಯನ್ನು ಆರಿಸಿ.

**ಹೇಳಿಕೆ I:** ಮಂಕಾದ, ಬಿದುರಾಗಿರುವ ಮತ್ತು ಘನ ಸ್ಥಿತಿಯಲ್ಲಿ ವಿದ್ಯುತ್ ವಾಹಕವಾಗಿರದ ಘನ ವಸ್ತುವು ಬಹುತೇಕ ಆಲೋಹವಾಗಿರುತ್ತದೆ
**ಹೇಳಿಕೆ II:** ಎಲ್ಲಾ ಅಲೋಹಗಳು ಮಂಕಾದ, ಬಿದುರಾಗಿರುವ ಘನವಸ್ತುಗಳಾಗಿದ್ದು, ಘನ ಸ್ಥಿತಿಯಲ್ಲಿ ವಿದ್ಯುತ್ ವಾಹಕವಾಗಿರುವುದಿಲ್ಲ.

A. ಎರಡೂ ಹೇಳಿಕೆಗಳು ತಪ್ಪಾಗಿವೆ
B. ಎರಡೂ ಹೇಳಿಕೆಗಳು ಸರಿಯಾಗಿವೆ
C. ಹೇಳಿಕೆ I ಸರಿಯಾಗಿದೆ, ಆದರೆ ಹೇಳಿಕೆ II ತಪ್ಪಾಗಿದೆ ✓
D. ಹೇಳಿಕೆ I ತಪ್ಪಾಗಿದೆ, ಆದರೆ ಹೇಳಿಕೆ II ಸರಿಯಾಗಿದೆ

**Q16** Plant Tissues & Transport

ಸಸ್ಯಗಳಲ್ಲಿ ನೀರಿನ ಸಾಗಣೆಯು __________ ಮೂಲಕ ಸಂಭವಿಸುತ್ತದೆ.

A. ಸೂಕ್ಷ್ಮ ಕುಹರ
B. ಕ್ಯಾಂಬಿಯಂ
C. ಫ್ಲೋಯೆಂ
D. ಕ್ಸೈಲಂ ✓

**Q17** Plant Tissues & Transport

ಈ ಕೆಳಗಿನವುಗಳಲ್ಲಿ ಯಾವುದು ಸಸ್ಯಗಳು ಮತ್ತು ಪ್ರಾಣಿ ಕೋಶಗಳಲ್ಲಿನ ಬೆಳವಣಿಗೆಯ ಮಾದರಿಯ ಬಗ್ಗೆ ಸರಿಯಾಗಿದೆ?

A. ಪ್ರಾಣಿಗಳ ಜೀವಕೋಶಗಳಿಗೆ ಹೋಲಿಸಿದರೆ ಸಸ್ಯ ಜೀವಕೋಶಗಳ ಬೆಳವಣಿಗೆಯು ಹೆಚ್ಚು ಏಕರೂಪವಾಗಿರುತ್ತದೆ
B. ಸಸ್ಯಗಳು ವಿಭಜಕ ಅಂಗಾಂಶಗಳನ್ನು ಹೊಂದಿರುವ ನಿರ್ದಿಷ್ಟ ಬೆಳವಣಿಗೆಯ ಪ್ರದೇಶವನ್ನು ಹೊಂದಿರುತ್ತವೆ ✓
C. ಪ್ರಾಣಿಗಳ ಜೀವಕೋಶಗಳ ಬೆಳವಣಿಗೆಯು ಮೆರಿಸ್ಟೆಮ್ಯಾಟಿಕ್ ಅಂಗಾಂಶಗಳಿಂದಾಗಿರುತ್ತದೆ
D. ಇವೆರಡೂ ಒಂದೇ ಬೆಳವಣಿಗೆಯ ಮಾದರಿಯನ್ನು ಅನುಸರಿಸುತ್ತವೆ

**Q18** Pollution (Air, Water, Soil, Noise)

ಈ ಕೆಳಗಿನ ಯಾವ ಅಭ್ಯಾಸವು ಜೈವಿಕ ವಿಘಟನೀಯವಲ್ಲದ ತ್ಯಾಜ್ಯದ ಪ್ರಮಾಣವನ್ನು ಕಡಿಮೆ ಮಾಡಬಲ್ಲದು?

A. ಮರುಬಳಕೆ ಮತ್ತು ಮರುಚಕ್ರೀಕರಣ ಮಾಡಬಹುದಾದ ಉತ್ಪನ್ನಗಳನ್ನು ಬಳಸುವುದು ✓
B. ಬಳಸಿ ಬಿಸಾಡಬಹುದಾದ ತಟ್ಟೆಗಳು ಮತ್ತು ಲೋಟಗಳನ್ನು ಬಳಸುವುದು
C. ಜೈವಿಕ ವಿಘಟನೀಯವಲ್ಲದ ತ್ಯಾಜ್ಯವನ್ನು ಮಣ್ಣಿನೊಂದಿಗೆ ಮಿಶ್ರಣ ಮಾಡುವುದು
D. ಎಲ್ಲಾ ತ್ಯಾಜ್ಯವನ್ನು ಜಲಮೂಲಗಳಲ್ಲಿ ಎಸೆಯುವುದು

**Q19** Properties & Tests

ಮೆಥನೋಯಿಕ್ ಆಮ್ಲವನ್ನು ಹೊಂದಿರುವ ಜೇನುನೊಣದ ಕುಟುಕಿನಿಂದ ಉಂಟಾಗುವ ಉರಿಯುವ ಸಂವೇದನೆಯನ್ನು ತಟಸ್ಥಗೊಳಿಸಲು ಯಾವ ವಸ್ತುವು ಅತ್ಯುತ್ತಮವಾಗಿ ಸಹಾಯ ಮಾಡುತ್ತದೆ?

A. ಹುಣಸೆಹಣ್ಣಿನ ದ್ರಾವಣ
B. ಸೌಮ್ಯ (Mild) ವಿನೆಗರ್ ದ್ರಾವಣ
C. ನಿಂಬೆಹಣ್ಣಿನ ರಸ
D. ಸೌಮ್ಯ (Mild) ಅಡುಗೆ ಸೋಡಾದ ದ್ರಾವಣ ✓

**Q20** Respiratory System

ದೀರ್ಘಕಾಲೀನ ಧೂಮಪಾನಿಗಳಲ್ಲಿ ದೀರ್ಘಕಾಲದ ಕೆಮ್ಮು ಮತ್ತು ಆಗಾಗ್ಗೆ ಉಸಿರಾಟದ ಸೋಂಕುಗಳು ಕಾಣಿಸಿಕೊಳ್ಳುತ್ತವೆ. ಉಸಿರಾಟದ ವ್ಯೂಹದಲ್ಲಿನ ಯಾವ ಶಾರೀರಿಕ ಬದಲಾವಣೆಯು ಪ್ರಮುಖವಾಗಿ ಈ ರೋಗ ತುತ್ತಾಗುವಿಕೆಯ ಹೆಚ್ಚಳಕ್ಕೆ ಕಾರಣವಾಗಿದೆ?

A. ಮೇಲ್ಭಾಗದ ಉಸಿರಾಟ ವ್ಯೂಹದಲ್ಲಿನ ಲೋಮಾಂಗದ ನಾಶ ✓
B. ಲೋಳೆಯ ಉತ್ಪಾದನೆಯ ಹೆಚ್ಚಾಗುವಿಕೆ
C. ಪಂಗುಸಿರ್ನಾಳದ ಭಿತ್ತಿಗಳು ದಪ್ಪವಾಗುವುದು
D. ಪಂಗುಸಿರ್ನಾಳದ ಕಿರಿದಾಗುವಿಕೆ

**Q21** Wave Properties (Frequency, Wavelength)

ಗಾಳಿಯಲ್ಲಿ ಅದರ ಜವವು ಸ್ಥಿರವಾಗಿರುವಾಗ ಶಬ್ದ ತರಂಗದ ಆವರ್ತನವು ಹೆಚ್ಚಾದರೆ, ಅದರ ತರಂಗದೂರಕ್ಕೆ ಏನಾಗುತ್ತದೆ?

A. ಅದರ ತರಂಗದೂರವು ಹೆಚ್ಚಾಗುತ್ತದೆ
B. ಅದರ ತರಂಗದೂರವು ಕಡಿಮೆಯಾಗುತ್ತದೆ ✓
C. ಅದರ ತರಂಗದೂರವು ಬದಲಾಗದೆ ಉಳಿಯುತ್ತದೆ
D. ಅದರ ತರಂಗದೂರವು ಯಾದೃಚ್ಛಿಕವಾಗಿ ಏರಿಳಿತಗೊಳ್ಳುತ್ತದೆ

**Q22** Wave Properties (Frequency, Wavelength)

ದೈನಂದಿನ ಜೀವನದಲ್ಲಿ ಅಧಿಕ ಸ್ಥಾಯಿ ಶಬ್ದವನ್ನು (high pitch) ಈ ಕೆಳಗಿನ ಯಾವ ಉದಾಹರಣೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಮಗು ಶಿಳ್ಳೆ ಊದುತ್ತಿರುವುದು ✓
B. ದೊಡ್ಡ ಗೋಡೆ ಗಡಿಯಾರದ ಟಿಕ್‌ಟಿಕ್ ಶಬ್ದ
C. ರೆಫ್ರಿಜರೇಟರ್‌ನ ಹಮ್ ಶಬ್ದ
D. ದೊಡ್ಡ ಡ್ರಮ್‌ನ ಬಡಿತ

Blackbook Vocabulary — Now in the App! ▶ Download Now on Google Play

**Q23** Work, Energy & Power

ಒಂದು ಬಲವು 20 N ಇದ್ದು, ಅದು 5 m ಸ್ಥಾನಪಲ್ಲಟಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತದೆ. ಹಾಗಾದರೆ ಆ ಬಲದಿಂದ ನಡೆದ ಕೆಲಸ ಎಷ್ಟು?

A. +100 J

B. 0 J

C. +25 J

D. −100 J ✓

**Q24** Work, Energy & Power

ಒಂದು ಗುಂಡು (bullet) ಮತ್ತು ಒಂದು ಚೆಂಡು ಒಂದೇ ರೀತಿಯ ಚಲನಶಕ್ತಿಯನ್ನು ಹೊಂದಿರುತ್ತವೆ. ಆದರೆ ಗುಂಡು ಚೆಂಡಿಗಿಂತ ಕಡಿಮೆ ದ್ರವ್ಯರಾಶಿಯನ್ನು ಹೊಂದಿರುತ್ತದೆ. ಅವುಗಳ ಜವಗಳ ಬಗ್ಗೆ ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ?

A. ಗುಂಡು ಮತ್ತು ಚೆಂಡು ಎರಡೂ ವಿಶ್ರಾಂತಿ ಪಡೆಯುತ್ತವೆ

B. ಎರಡೂ ಒಂದೇ ಜವದಲ್ಲಿ ಚಲಿಸುತ್ತವೆ

C. ಗುಂಡು ಚೆಂಡಿಗಿಂತ ಹೆಚ್ಚು ವೇಗವಾಗಿ ಚಲಿಸುತ್ತದೆ ✓

D. ಚೆಂಡು ಗುಂಡಿಗಿಂತ ಹೆಚ್ಚು ವೇಗವಾಗಿ ಚಲಿಸುತ್ತದೆ

**Q25** pH Scale & Indicators

ಒಂದು ಲವಣದ ದ್ರಾವಣವು 9 pH ಅನ್ನು ಹೊಂದಿದ್ದರೆ, ಅದು ಯಾವ ವಿಧದ ಲವಣವಾಗಿರುವ ಸಾಧ್ಯತೆ ಇದೆ?

A. ದುರ್ಬಲ ಆಮ್ಲ ಮತ್ತು ದುರ್ಬಲ ಪ್ರತ್ಯಾಮ್ಲದಿಂದ ರೂಪುಗೊಂಡಿರುವ

B. ಪ್ರಬಲ ಆಮ್ಲ ಮತ್ತು ಪ್ರಬಲ ಪ್ರತ್ಯಾಮ್ಲದಿಂದ ರೂಪುಗೊಂಡಿರುವ

C. ಪ್ರಬಲ ಆಮ್ಲ ಮತ್ತು ದುರ್ಬಲ ಪ್ರತ್ಯಾಮ್ಲದಿಂದ ರೂಪುಗೊಂಡಿರುವ

D. ಪ್ರಬಲ ಪ್ರತ್ಯಾಮ್ಲ ಮತ್ತು ದುರ್ಬಲ ಆಮ್ಲದಿಂದ ರೂಪುಗೊಂಡಿರುವ ✓

Blackbook Vocabulary — Now in the App! ▶ Download Now on Google Play

generated by rank.qmaths.in

## General Science

25 Questions • Answer Key

**Q1** Atoms & Molecules

ಈ ಕೆಳಗಿನವುಗಳಲ್ಲಿ ಯಾವುದು ಅಲ್ಯೂಮಿನಿಯಂ ಧಾತುವಿನ ಸರಿಯಾದ ಚಿಹ್ನೆಯಾಗಿದೆ?

- A. Al ✓
- B. AL
- C. Alm
- D. alm

**Q2** Carbon & Its Compounds

ಪ್ರಕೃತಿಯಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳು ರೂಪುಗೊಳ್ಳಲು ಲಕ್ಷಾಂತರ ವರ್ಷಗಳನ್ನು ಏಕೆ ತೆಗೆದುಕೊಳ್ಳುತ್ತವೆ?

- A. ವಸ್ತುಗಳ ತಂಪಾಗಿಸುವಿಕೆಯ ಮೂಲಕ ಅವು ತ್ವರಿತವಾಗಿ ರೂಪುಗೊಳ್ಳುತ್ತವೆ
- B. ಅವುಗಳ ರಚನೆಯು ನಿಧಾನವಾಗಿರುವ ರಾಸಾಯನಿಕ ಮತ್ತು ಭೌತಿಕ ಬದಲಾವಣೆಗಳನ್ನು ಒಳಗೊಂಡಿರುತ್ತದೆ ✓
- C. ಅವು ಮರುಕಳಿಸುವ ಪ್ರವಾಹದ ಘಟನೆಗಳಿಂದ ಉತ್ಪತ್ತಿಯಾಗುತ್ತವೆ
- D. ಅವು ತ್ವರಿತ ರಾಸಾಯನಿಕ ಕ್ರಿಯೆಗಳಿಂದ ಉಂಟಾಗುತ್ತವೆ

**Q3** Cell Structure & Organelles

ಒಂದು ಜೀವಿಯು ಯುಕ್ಯಾರಿಯೋಟ್ ಅಥವಾ ಪ್ರೊಕ್ಯಾರಿಯೋಟ್ ಆಗಿದೆಯೇ ಎಂದು ನಿರ್ಧರಿಸಲು ವಿಜ್ಞಾನಿಗಳು ಏನನ್ನು ಪರಿಶೀಲಿಸುತ್ತಾರೆ?

- A. ಸಂತಾನೋತ್ಪತ್ತಿಯ ವಿಧಾನ ಮತ್ತು ಸಂತತಿ
- B. ಸಾಮಾನ್ಯ ಆಹಾರ ಸೇವನೆಯ ವರ್ತನೆ ಮತ್ತು ಆಹಾರ ಕ್ರಮ
- C. ಕೋಶ ರಚನೆ ಮತ್ತು ನ್ಯೂಕ್ಲಿಯಸ್ ಇರುವಿಕೆ ✓
- D. ಪರಿಸರದೊಳಗೆ ಪರಿಸರಾತ್ಮಕ ಪಾತ್ರ

**Q4** Chemical Bonding (Ionic, Covalent)

ಈ ಕೆಳಗಿನ ಯಾವ ಹೇಳಿಕೆ/ಗಳು ಸರಿ ಆಗಿದೆ/ವೆ?

**ಹೇಳಿಕೆ I :** ಸೋಡಿಯಂ ಪರಮಾಣು ಒಂದು ಎಲೆಕ್ಟ್ರಾನ್ ಅನ್ನು ಕಳೆದುಕೊಂಡು ಸೋಡಿಯಂ ಅಯಾನನ್ನು ರೂಪಿಸುತ್ತದೆ.
**ಹೇಳಿಕೆ II :** ಸೋಡಿಯಂ ಅಯಾನು ಋಣ ಆವೇಶವನ್ನು ಹೊಂದಿರುತ್ತದೆ.

- A. ಹೇಳಿಕೆ I ಮತ್ತು II ಎರಡೂ ಸರಿಯಾಗಿವೆ
- B. ಹೇಳಿಕೆ I ಮತ್ತು II ಎರಡೂ ತಪ್ಪಾಗಿವೆ.
- C. ಹೇಳಿಕೆ II ಮಾತ್ರ ಸರಿಯಾಗಿದೆ.
- D. ಹೇಳಿಕೆ I ಮಾತ್ರ ಸರಿಯಾಗಿದೆ. ✓

**Q5** Circulatory System (Heart, Blood)

ಈ ಕೆಳಗಿನವುಗಳಲ್ಲಿ ಯಾವುದು ಸಂಕೋಚನದ (systolic) ಒತ್ತಡವನ್ನು ಅತ್ಯುತ್ತಮವಾಗಿ ವಿವರಿಸುತ್ತದೆ?

- A. ಹೃತ್ಕುಕ್ಷಿಯ ವ್ಯಾಕೋಚನದ ಸಮಯದಲ್ಲಿ ಅಪಧಮನಿಯಲ್ಲಿ ರಕ್ತದೊತ್ತಡ
- B. ವ್ಯಾಕೋಚನದ ಸಮಯದಲ್ಲಿ ಅಭಿಧಮನಿಗಳಲ್ಲಿ ರಕ್ತದೊತ್ತಡ
- C. ಸಂಕೋಚನದ ಸಮಯದಲ್ಲಿ ಅಭಿಧಮನಿಗಳಲ್ಲಿ ರಕ್ತದೊತ್ತಡ
- D. ಹೃತ್ಕುಕ್ಷಿಯ ಸಂಕೋಚನದ ಸಮಯದಲ್ಲಿ ಅಪಧಮನಿಯಲ್ಲಿ ರಕ್ತದೊತ್ತಡ ✓

**Q6** Circulatory System (Heart, Blood)

ದುಗ್ಧರಸ ಮತ್ತು ರಕ್ತ ಪ್ಲಾಸ್ಮಾದ ಪ್ರೋಟೀನ್ ಅಂಶವನ್ನು **ಸರಿಯಾಗಿ** ಹೋಲಿಸುವ ಹೇಳಿಕೆ ಯಾವುದು?

- A. ದುಗ್ಧಸಾರವು ಯಾವುದೇ ಪ್ರೊಟೀನ್ ಹೊಂದಿರುವುದಿಲ್ಲ
- B. ದುಗ್ಧರಸವು ಪ್ಲಾಸ್ಮಾಕ್ಕಿಂತ ಹೆಚ್ಚು ಪ್ರೋಟೀನ್ ಹೊಂದಿರುತ್ತದೆ
- C. ದುಗ್ಧರಸವು ಪ್ಲಾಸ್ಮಾಗಿಂತ ಕಡಿಮೆ ಪ್ರೋಟೀನ್ ಹೊಂದಿರುತ್ತದೆ ✓
- D. ದುಗ್ಧರಸವು ಪ್ಲಾಸ್ಮಾದಷ್ಟೇ ಪ್ರೋಟೀನ್ ಹೊಂದಿರುತ್ತದೆ

**Q7** Conduction, Convection, Radiation

ಒಂದು ಕ್ಷೇತ್ರ ಅಧ್ಯಯನದ ಸಮಯದಲ್ಲಿ, ಪ್ರತಿ ಮಧ್ಯಾಹ್ನವು ಕಣಿವೆಯ ಮಟ್ಟ ಪ್ರದೇಶದಿಂದ (valley floor) ಇಳಿಜಾರುಗಳಿಗೆ ಗಾಳಿಯ ಮೇಲ್ಮುಖ ಹರಿವನ್ನು ವಿದ್ಯಾರ್ಥಿಗಳು ಗಮನಿಸುತ್ತಾರೆ. ವಾಯುಮಂಡಲದ ಯಾವ ಸ್ಥಿತಿಯು ಈ ಮಾದರಿಗೆ ಕಾರಣವಾಗುತ್ತದೆ?

- A. ಪರ್ವತದ ಇಳಿಜಾರುಗಳ ಅಸಮನಾದ ಬಿಸಿಯಾಗುವಿಕೆ ✓
- B. ಕಣಿವೆಯ ಮಟ್ಟ ಪ್ರದೇಶದ ಏಕರೂಪದ ಬಿಸಿಯಾಗುವಿಕೆ
- C. ಕಣಿವೆಯಲ್ಲಿ ಹಠಾತ್ ಮಳೆಯಾಗುವಿಕೆ
- D. ಭೂಮಿಯ ತಿರುಗುವಿಕೆ

**Q8** Ecosystem & Food Chain

ಈ ಕೆಳಗಿನವುಗಳಲ್ಲಿ ಯಾವುದು ಕೃತಕ ಪರಿಸರ ವ್ಯವಸ್ಥೆಗೆ ಒಂದು ಉದಾಹರಣೆಯಾಗಿದೆ?

- A. ಕೆರೆ
- B. ಬೆಳೆ ಬೆಳೆಸುವ ಹೊಲ ✓
- C. ಸರೋವರ
- D. ಅರಣ್ಯ

Blackbook Vocabulary — Now in the App! ▶ Download Now on Google Play

**Q9** Ecosystem & Food Chain

ಈ ಕೆಳಗಿನವುಗಳಲ್ಲಿ ಯಾವುದು ಒಂದು ಪರಿಸರ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ವ್ಯಾಖ್ಯಾನಿಸುತ್ತದೆ?

- A. ಜೈವಿಕ ಮತ್ತು ಅಜೈವಿಕ ಘಟಕಗಳ ಪರಸ್ಪರ ಕ್ರಿಯೆಯಿಂದ ರೂಪುಗೊಂಡ ಒಂದು ವ್ಯವಸ್ಥೆ ✓
- B. ಸಸ್ಯಗಳ ಗುಂಪು ಮಾತ್ರ
- C. ಭೌತಿಕ ಅಂಶಗಳಿಲ್ಲದ ಒಂದು ಸಮುದಾಯ
- D. ಪ್ರಾಣಿಗಳನ್ನು ಮಾತ್ರ ಹೊಂದಿರುವ ಒಂದು ಆವಾಸಸ್ಥಾನ

**Q10** Extraction & Metallurgy

ಸತುವಿನಂಥ ಲೋಹಗಳನ್ನು ಅವುಗಳ ಆಕ್ಸೈಡ್‌ಗಳಿಂದ ಹೊರತೆಗೆಯಲು ಯಾವ ವಸ್ತುವನ್ನು ಸಾಮಾನ್ಯವಾಗಿ ಅಪಕರ್ಷಣಕಾರಿಯಾಗಿ ಬಳಸಲಾಗುತ್ತದೆ?

- A. ಸಾರಜನಕ
- B. ಗಂಧಕ
- C. ಇಂಗಾಲ ✓
- D. ಆಮ್ಲಜನಕ

**Q11** Human Body & Physiology

ಅನುಲೇಪಕ ಅಂಗಾಂಶ ಕೋಶಗಳು ಬಿಗಿಯಾಗಿ ತುಂಬಿ ಅವುಗಳ ನಡುವೆ ಬಹಳ ಕಡಿಮೆ ಜಾಗ ಇರುವುದನ್ನು ಈ ಕೆಳಗಿನವುಗಳಲ್ಲಿ ಯಾವುದು ವಿವರಿಸುತ್ತದೆ?

- A. ಅಂಗಾಂಶದ ಒಟ್ಟಾರೆ ಬಲವನ್ನು ಹೆಚ್ಚಿಸಲು
- B. ಅಂಗಾಂಶದ ಸ್ರವಿಸುವ ಕಾರ್ಯಗಳನ್ನು ಹೆಚ್ಚಿಸಲು
- C. ಅಂಗಾಂಶದಲ್ಲಿ ತ್ವರಿತ ಜೀವಕೋಶ ವಿಭಜನೆಯನ್ನು ಅನುಮತಿಸಲು
- D. ನಿರಂತರ ತಡೆಗೋಡೆಯನ್ನು ನಿರ್ಮಿಸಲು ಮತ್ತು ಪ್ರವೇಶಸಾಧ್ಯತೆಯನ್ನು ನಿಯಂತ್ರಿಸಲು ✓

**Q12** Hydrocarbons (Methane, Ethane, etc.)

ಗೃಹಬಳಕೆಯ ಅನಿಲ ಬರ್ನರ್‌ನಲ್ಲಿ ಮೀಥೇನ್‌ನ ಸಂಪೂರ್ಣ ದಹನವನ್ನು ಯಾವ ಸನ್ನಿವೇಶವು ಉತ್ತಮವಾಗಿ ವಿವರಿಸುತ್ತದೆ?

- A. ಬಿಳಿ ಬೂದಿಯಲ್ಲಿ ಇರುವ ಒಂದು ದುರ್ಬಲ ಮಿನುಗುವ ಜ್ವಾಲೆ
- B. ಅಡುಗೆಮನೆಯಲ್ಲಿ ಒಂದು ಬಲವಾದ ಅನಿಲದ ವಾಸನೆಯನ್ನು ಉಂಟುಮಾಡುವ ಕಿತ್ತಳೆ ಬಣ್ಣದ ಜ್ವಾಲೆ
- C. ಯಾವುದೇ ಅವಶೇಷ ಉಳಿಯದ ನೀಲಿ ಬಣ್ಣದ, ಪ್ರಕಾಶರಹಿತ ಜ್ವಾಲೆ ಕಂಡುಬರುವುದು ✓
- D. ಪಾತ್ರೆಯ ಮೇಲೆ ಹಳದಿ ಜ್ವಾಲೆಯೊಂದಿಗೆ ಕಪ್ಪು ಅವಶೇಷ ರೂಪುಗೊಳ್ಳುತ್ತದೆ

**Q13** Magnetic Effects of Current

ಕ್ಲಾಸಿಕಲ್ ವಿದ್ಯುತ್ಕಾಂತೀಯತೆಯಲ್ಲಿ ಕಾಂತ ಏಕಧ್ರುವಗಳ ಅನುಪಸ್ಥಿತಿಯನ್ನು ಕಾಂತೀಯ ಕ್ಷೇತ್ರ ರೇಖೆಗಳ ಯಾವ ಗುಣವು ವಿವರಿಸುತ್ತದೆ?

- A. ಅವು ನಿರಂತರ ಮುಚ್ಚಿದ ವಕ್ರರೇಖೆಗಳನ್ನು ರೂಪಿಸುತ್ತವೆ ✓
- B. ಅವು ಯಾವಾಗಲೂ ವೃತ್ತಾಕಾರವಾಗಿರುತ್ತವೆ
- C. ಅವು ಧ್ರುವಗಳ ಬಳಿ ಸಾಂದ್ರವಾಗಿರುತ್ತವೆ
- D. ಅವು ಎಂದಿಗೂ ಛೇದಿಸುವುದಿಲ್ಲ

**Q14** Magnetic Effects of Current

ವಿದ್ಯುತ್ ಪ್ರವಹಿಸುತ್ತಿರುವ ಒಂದು ತಂತಿಯಿಂದ ಉತ್ಪತ್ತಿಯಾಗುವ ಕಾಂತ ಕ್ಷೇತ್ರವು, ತಂತಿಯಿಂದ ದೂರದೊಂದಿಗೆ ಹೇಗೆ ಬದಲಾಗುತ್ತದೆ?

- A. ದೂರವು ಹೆಚ್ಚಾದಂತೆ ಅದು ಹೆಚ್ಚಾಗುತ್ತದೆ
- B. ಅದು ಎಲ್ಲಾ ದೂರಗಳಲ್ಲೂ ಸ್ಥಿರವಾಗಿರುತ್ತದೆ
- C. ದೂರವು ಹೆಚ್ಚಾದಂತೆ ಅದು ಕಡಿಮೆಯಾಗುತ್ತದೆ ✓
- D. ಅದು ದೂರದೊಂದಿಗೆ ಯಾದೃಚ್ಛಿಕವಾಗಿ ಏರಿಳಿತಗೊಳ್ಳುತ್ತದೆ

**Q15** Mechanics

ಚಲನೆಯನ್ನು ವಿವರಿಸುವ ಸಂದರ್ಭದಲ್ಲಿ ವೇಗ ಮತ್ತು ಜವ ಹೇಗೆ ಭಿನ್ನವಾಗಿರುತ್ತವೆ?

- A. ವೇಗವನ್ನುಸರಾಸರಿ ಜವವನ್ನು ಬಳಸಿ ಲೆಕ್ಕಹಾಕಲಾಗುತ್ತದೆ, ಆದರೆ ಜವವು ತತ್‌ಕ್ಷಣದ ಜವವನ್ನು ಬಳಸುತ್ತದೆ.
- B. ವೇಗವು ಪರಿಮಾಣ (ಜವ) ಮತ್ತು ಚಲನೆಯ ಖಚಿತ ದಿಕ್ಕು ಎರಡನ್ನೂ ಸೂಚಿಸುತ್ತದೆ ✓
- C. ವೇಗವು ಕ್ರಮಿಸಿದ ದೂರವನ್ನು ಸೂಚಿಸುತ್ತದೆ, ಜವವು ಸ್ಥಾನಪಲ್ಲಟವನ್ನು ಸೂಚಿಸುತ್ತದೆ.
- D. ವೇಗವು ಏಕರೂಪವಲ್ಲದ ಚಲನೆಗೆ ಮಾತ್ರ ಅನ್ವಯಿಸುತ್ತದೆ, ಆದರೆ ಜವವು ಏಕರೂಪದ ಚಲನೆಗೆ ಮಾತ್ರ ಅನ್ವಯಿಸುತ್ತದೆ.

**Q16** Mirrors & Lenses

6 cm ಸಂಗಮದೂರ ಇರುವ ನಿಮ್ನ ದರ್ಪಣದಿಂದ 18 cm ದೂರದಲ್ಲಿ ಒಂದು ಸಣ್ಣ ಮೇಣದಬತ್ತಿಯನ್ನು ಇರಿಸಿದಾಗ ರೂಪುಗೊಂಡ ಬಿಂಬದ ಸ್ವರೂಪ ಮತ್ತು ಸ್ಥಾನ ಹೇಗಿರುತ್ತದೆ?

- A. ಮಿಥ್ಯ, ದರ್ಪಣದ ಹಿಂದೆ 12 cm
- B. ನೈಜ, ದರ್ಪಣದ ಮುಂದೆ 9 cm ✓
- C. ನೈಜ, ದರ್ಪಣದ ಮುಂದೆ 6 cm
- D. ಮಿಥ್ಯ, ದರ್ಪಣದ ಹಿಂದೆ 9 cm

Blackbook Vocabulary — Now in the App! ▶ Download Now on Google Play

generated by rank.qmaths.in

**Q17** Mixtures, Solutions, Colloids

ಈ ಕೆಳಗಿನ ಯಾವುದು ಕಲಿಲಕ್ಕೆ (colloid) ಒಂದು ಉದಾಹರಣೆ **ಅಲ್ಲ**?

A. ಐಸ್ ಕ್ರೀಮ್

B. ಸಕ್ಕರೆ ದ್ರಾವಣ ✓

C. ಹಾಲು

D. ರಕ್ತ

**Q18** Newton's Laws of Motion

5 kg ಇರುವ ಒಂದು ವಸ್ತುವಿನ ಮೇಲೆ 4 ಸೆಕೆಂಡುಗಳವರೆಗೆ ಸ್ಥಿರ ಬಲವನ್ನು ಪ್ರಯೋಗಿಸಿದಾಗ ಅದರ ವೇಗವು 2 m/s ನಿಂದ 10 m/s ಗೆ ಹೆಚ್ಚಾಗುತ್ತದೆ. ಹಾಗಾದರೆ ಈ ಬಲದ ಪರಿಮಾಣ ಎಷ್ಟು?

A. 10 N ✓

B. 20 N

C. 2 N

D. 5 N

**Q19** Physical & Chemical Properties

ಈ ಕೆಳಗಿನ ಯಾವ ಹೇಳಿಕೆಯು ಅಲೋಹ ಆಕ್ಸೈಡ್‌ಗಳು ಪ್ರತ್ಯಾಮ್ಲಗಳೊಂದಿಗೆ ಏಕೆ ವರ್ತಿಸುಸುತ್ತವೆ ಎಂಬುದನ್ನು ಉತ್ತಮವಾಗಿ ವಿವರಿಸುತ್ತವೆ?

A. ಅವು ಪ್ರತ್ಯಾಮ್ಲ ಆಕ್ಸೈಡ್‌ಗಳಾಗಿ ವರ್ತಿಸುತ್ತವೆ ಮತ್ತು ಆಮ್ಲಗಳನ್ನು ತಟಸ್ಥಗೊಳಿಸುತ್ತವೆ

B. ಅವು ಯಾವಾಗಲೂ ಪ್ರತ್ಯಾಮ್ಲಗಳಾಗಿವೆ ಮತ್ತು ಪ್ರತ್ಯಾಮ್ಲಗಳೊಂದಿಗೆ ವರ್ತಿಸುವುದಿಲ್ಲ

C. ಅವು ಆಮ್ಲಗಳು ಮತ್ತು ಪ್ರತ್ಯಾಮ್ಲಗಳನ್ನು ಒಟ್ಟಿಗೆ ರೂಪಿಸುತ್ತವೆ

D. ಅವು ಆಮ್ಲೀಯ ಆಕ್ಸೈಡ್‌ಗಳಂತೆ ವರ್ತಿಸುತ್ತವೆ ಮತ್ತು ಪ್ರತ್ಯಾಮ್ಲಗಳನ್ನು ತಟಸ್ಥಗೊಳಿಸುತ್ತವೆ ✓

**Q20** Physical & Chemical Properties

ಬೆಳ್ಳಿಯ ವಸ್ತುಗಳು ದೀರ್ಘಕಾಲದವರೆಗೆ ಗಾಳಿಗೆ ಒಡ್ಡಿಕೊಂಡಾಗ ಕಪ್ಪು ಬಣ್ಣಕ್ಕೆ ತಿರುಗಲು ಮುಖ್ಯ ಕಾರಣವೇನು?

A. ಮೇಲ್ಮೈಯಲ್ಲಿ ಧೂಳಿನ ಕಣಗಳು ಸಂಗ್ರಹವಾಗುವುದರಿಂದ

B. ಗಾಳಿಯಲ್ಲಿ ಕ್ಲೋರಿನ್ ಜೊತೆಗೆ ವರ್ತಿಸಿ ಸಿಲ್ವರ್ ಕ್ಲೋರೈಡ್ ರಚನೆ ಆಗುವುದರಿಂದ

C. ಆಮ್ಲಜನಕದೊಂದಿಗೆ ವರ್ತಿಸಿ ಸಿಲ್ವರ್ ಆಕ್ಸೈಡ್ ರಚನೆಯಾಗುವುದರಿಂದ

D. ಸಿಲ್ವರ್ ಸಲ್ಫೈಡ್ ಲೇಪನ ರೂಪುಗೊಳ್ಳುವುದರಿಂದ ✓

**Q21** Plant Tissues & Transport

ಒಬ್ಬ ತೋಟಗಾರಿಕಾ ತಜ್ಞರು ಉತ್ತಮ ತೇಲುವ ಸಾಮರ್ಥ್ಯದ ಜಲಸಸ್ಯಗಳ ತಳಿಸಂವರ್ಧನೆ ಮಾಡಲು ಬಯಸುತ್ತಾರೆ. ಅವರು ಯಾವ ಅಂಗಾಂಶ ಮಾರ್ಪಾಡುಗಳನ್ನು ಉತ್ತಮಪಡಿಸುವತ್ತ ಗಮನಹರಿಸಬೇಕು?

A. ಕೊಲೆಂಕೈಮಾವು ಅನಿಯಮಿತವಾಗಿ ದಪ್ಪವಾಗುವುದು

B. ಪ್ಯಾರೆಂಕೈಮಾದಲ್ಲಿನ ಅಂತರಕೋಶೀಯ ಅಂತರಗಳನ್ನು ಕಡಿಮೆ ಮಾಡುವುದು

C. ಗಾಳಿ ಊತಕವು (Aerenchyma) ರೂಪುಗೊಳ್ಳುವುದು ✓

D. ಕೊಲೆಂಕೈಮದಲ್ಲಿನ ಪತ್ರಹರಿತ್ತನ್ನು ಹೆಚ್ಚಿಸುವುದು

**Q22** Reflection & Refraction

ಒಬ್ಬ ಕಾರು ಚಾಲಕನು ಬಿಸಿಲಿನ ದಿನದಲ್ಲಿ ಮುಂದಿನ ರಸ್ತೆಯು ಒದ್ದೆಯಾದಂತಿರುವುದನ್ನು ಗಮನಿಸುತ್ತಾನೆ, ಆದರೆ ಆ ಸ್ಥಳವನ್ನು ತಲುಪಿದಾಗ ರಸ್ತೆ ಒಣಗಿರುತ್ತದೆ. ಈ ವೀಕ್ಷಣೆಯನ್ನು ಯಾವ ಭೌತಿಕ ವಿದ್ಯಮಾನವು ಅತ್ಯುತ್ತಮವಾಗಿ ವಿವರಿಸುತ್ತದೆ?

A. ನೀರಿನ ಸಣ್ಣಹನಿಗಳೊಳಗಿನ ಬೆಳಕಿನ ಒಟ್ಟು ಆಂತರಿಕ ಪ್ರತಿಫಲನ

B. ಗಾಳಿಯ ಅಣುಗಳಿಂದ ಸೂರ್ಯನ ಬೆಳಕಿನ ಪ್ರಸರಣ

C. ಧೂಳಿನ ಕಣಗಳಿಂದ ಸೂರ್ಯನ ಬೆಳಕಿನ ಚದುರುವಿಕೆ

D. ರಸ್ತೆಯ ಮೇಲೆ ಗಾಳಿಯ ತಾಪಮಾನದಲ್ಲಿನ ಬದಲಾವಣೆಗಳಿಂದಾಗಿ ಬೆಳಕಿನ ವಕ್ರೀಭವನ ✓

**Q23** Sound

ಶಬ್ದದ ಉತ್ಪಾದನೆಗೆ ಕಂಪಿಸುವ ವಸ್ತು ಅಗತ್ಯ ಎನ್ನುವುದನ್ನು ಈ ಕೆಳಗಿನ ಯಾವ ಸನ್ನಿವೇಶವು ಅತ್ಯುತ್ತಮವಾಗಿ ತೋರ್ಪಡಿಸುತ್ತದೆ?

A. ಲೋಹದ ಸಲಾಕೆಯನ್ನು ಸ್ಥಿರವಾಗಿ ಹಿಡಿದುಕೊಂಡು ಗುಂಯ್‌ಗುಡುವಿಕೆ (hum) ಆಲಿಸುವುದು

B. ಮೇಜಿನ ಮೇಲೆ ಇಟ್ಟಿರುವ ಗಾಜಿನ ಬಾಟಲಿಯನ್ನು ಅಡಚಣೆ ಉಂಟುಮಾಡದೆ ನೋಡುವುದು

C. ಹಿಗ್ಗಿದ ಗಿಟಾರ್ ತಂತಿಯನ್ನು ಮೀಟುತ್ತಾ ನಾದವನ್ನು ಕೇಳುವುದು ✓

D. ಕತ್ತಲೆಯ ಕೋಣೆಯಲ್ಲಿ ಗೋಡೆಯ ಮೇಲೆ ಫ್ಲಾಶ್‌ಲೈಟ್ ಅನ್ನು ಬೆಳಗಿಸುವುದು

**Q24** Work, Energy & Power

ಒಂದುವೇಳೆ ಸಮಯವನ್ನು ಸ್ಥಿರವಾಗಿರಿಸಿಕೊಂಡು ಎಂಜಿನ್‌ನ ಶಕ್ತಿಯನ್ನು ದ್ವಿಗುಣಗೊಳಿಸಿದರೆ, ನಡೆದ ಕೆಲಸವು ______ಆಗುತ್ತದೆ.

A. ದುಪ್ಪಟ್ಟು ✓

B. ಹಾಗೆಯೇ ಇರುತ್ತದೆ

C. ನಾಲ್ಕು ಪಟ್ಟು

D. ಅರ್ಧದಷ್ಟು

Blackbook Vocabulary — Now in the App! ▶ Download Now on Google Play

**Q25** Work, Energy & Power

ಒಂದು ಮೋಟರ್ 1875 J ಕೆಲಸವನ್ನು 3 ಸೆಕೆಂಡ್‌ಗಳಲ್ಲಿ ನಿರ್ವಹಿಸುತ್ತದೆ. ಹಾಗಾದರೆ ಅದರ ಪವರ್ ಔಟ್‌ಪುಟ್ ಎಷ್ಟು?

A. 625 W ✓

B. 2810 W

C. 210 W

D. 5625 W

Blackbook Vocabulary — Now in the App! ► Download Now on Google Play

## General Science

25 Questions • Answer Key

**Q1** Atoms & Molecules

ಈ ಕೆಳಗಿನ ಯಾವ ಹೇಳಿಕೆಯು **ಸರಿ** ಆಗಿದೆ/ವೆ?

**ಹೇಳಿಕೆ I :** ವಿಭಿನ್ನ ಧಾತುಗಳ ಪರಮಾಣುಗಳು ನಿಶ್ಚಿತ ಪ್ರಮಾಣದಲ್ಲಿ ಒಟ್ಟುಗೂಡಿ ಸಂಯುಕ್ತಗಳನ್ನು ರೂಪಿಸುತ್ತವೆ.
**ಹೇಳಿಕೆ II :** ಶುದ್ಧ ರಾಸಾಯನಿಕ ಸಂಯುಕ್ತದಲ್ಲಿ, ಧಾತುಗಳು ಯಾವಾಗಲೂ ದ್ರವ್ಯರಾಶಿಯ ನಿರ್ದಿಷ್ಟ ಸಮಾನುಪಾತದಲ್ಲಿ ಇರುತ್ತವೆ.

A. ಹೇಳಿಕೆ I ಮತ್ತು II ಎರಡೂ ಸರಿಯಾಗಿವೆ ✓
B. ಹೇಳಿಕೆ I ಮಾತ್ರ ಸರಿಯಾಗಿದೆ
C. ಹೇಳಿಕೆ I ಮತ್ತು II ಎರಡೂ ತಪ್ಪಾಗಿವೆ
D. ಹೇಳಿಕೆ II ಮಾತ್ರ ಸರಿಯಾಗಿದೆ

**Q2** Atoms & Molecules

ಈ ಕೆಳಗಿನವುಗಳಲ್ಲಿ ಯಾವ ಅವಲೋಕನವು ಸ್ಥಿರ ಸಮಾನುಪಾತಗಳ ನಿಯಮವನ್ನು ಉಲ್ಲಂಘಿಸುತ್ತದೆ?

A. ನೈಟ್ರೋಜನ್ ಮತ್ತು ಹೈಡ್ರೋಜನ್ ಅನ್ನು ಹೊಂದಿರುವ ಅಮೋನಿಯ ಮಾದರಿಯು 14:3 ದ್ರವ್ಯರಾಶಿ ಅನುಪಾತದಲ್ಲಿ ಇರುತ್ತದೆ
B. ಮೆಗ್ನೀಸಿಯಮ್ ಮತ್ತು ಸಲ್ಫರ್ ಅನ್ನು ಹೊಂದಿರುವ ಮೆಗ್ನೀಸಿಯಮ್ ಸಲ್ಫೈಡ್ ಮಾದರಿಯು 4:3 ದ್ರವ್ಯರಾಶಿ ಅನುಪಾತದಲ್ಲಿ ಇರುತ್ತದೆ ✓
C. ಜಲಜನಕ ಮತ್ತು ಆಮ್ಲಜನಕವನ್ನು ಹೊಂದಿರುವ ನೀರಿನ ಮಾದರಿಯು 1:8 ದ್ರವ್ಯರಾಶಿ ಅನುಪಾತದಲ್ಲಿ ಇರುತ್ತದೆ
D. ಸೋಡಿಯಂ ಮತ್ತು ಕ್ಲೋರಿನ್ ನೊಂದಿಗೆ ಸೋಡಿಯಂ ಕ್ಲೋರೈಡ್ ಮಾದರಿಯು 23:35.5 ದ್ರವ್ಯರಾಶಿ ಅನುಪಾತದಲ್ಲಿ ಇರುತ್ತದೆ

**Q3** Biology

ಒಂದೇ ಪೋಷಕ ಜೀವಿ ಇದ್ದರೂ ಸಹ ಅಮೀಬಾ, ಯೀಸ್ಟ್ ಮತ್ತು ಹೈಡ್ರಾಗಳು ಸಂತಾನೋತ್ಪತ್ತಿ ಮಾಡಬಲ್ಲವು. ಇದು ಅಲೈಂಗಿಕ ಸಂತಾನೋತ್ಪತ್ತಿಯ ಕುರಿತಂತೆ ಯಾವ ತೀರ್ಮಾನವನ್ನು ಸೂಚಿಸುತ್ತದೆ?

A. ಇದು ಬಹುಕೋಶೀಯ ಜೀವಿಗಳನ್ನು ಮಾತ್ರ ಉತ್ಪಾದಿಸುತ್ತದೆ
B. ಯಾವಾಗಲೂ ಎರಡು ಪೋಷಕ ಜೀವಿಗಳು ಅಗತ್ಯವಾಗಿರುತ್ತವೆ
C. ಇದಕ್ಕೆ ಸಂತಾನೋತ್ಪತ್ತಿಗೆ ಬೀಜಗಳು ಅಗತ್ಯವಾಗಿರುತ್ತವೆ
D. ಇದು ಯುಗ್ಮಕಗಳ ಸಮ್ಮಿಲನವಿಲ್ಲದೆ ಸಂಭವಿಸುತ್ತದೆ ✓

**Q4** Carbon & Its Compounds

ಮೂಲ ಸಸ್ಯ ವಸ್ತುಗಳಿಗೆ ಹೋಲಿಸಿದರೆ ಕಲ್ಲಿದ್ದಲು ಏಕೆ ಹೆಚ್ಚಿನ ಇಂಗಾಲದ ಅಂಶವನ್ನು ಹೊಂದಿರುತ್ತದೆ?

A. ಮಣ್ಣಿನಲ್ಲಿರುವ ಸಸ್ಯದ ಅವಶೇಷಗಳಿಗೆ ಖನಿಜಗಳನ್ನು ಸೇರಿಸಲಾಗುತ್ತದೆ.
B. ಹೂತಿರುವ ಸಸ್ಯಗಳಲ್ಲಿ ಸೂರ್ಯನ ಬೆಳಕು ಇಂಗಾಲವನ್ನು ಹೆಚ್ಚಿಸುತ್ತದೆ
C. ಕಲ್ಲಿದ್ದಲು ರಚನೆಯ ಸಮಯದಲ್ಲಿ ನೀರು ಮತ್ತು ಬಾಷ್ಪಶೀಲ ವಸ್ತುಗಳು ಕಳೆದುಹೋಗುತ್ತವೆ ✓
D. ಸಸ್ಯಗಳು ವಾತಾವರಣದಿಂದ ಅನಿಲವನ್ನು ಹೀರಿಕೊಳ್ಳುತ್ತವೆ

**Q5** Conduction, Convection, Radiation

ಹವಾಮಾನ ವಿಜ್ಞಾನಿಯೊಬ್ಬರು ಕಣಿವೆಯ ನೆಲದಲ್ಲಿ ಮತ್ತು ಇಳಿಜಾರುಗಳಲ್ಲಿ ಸಂವೇದಕಗಳನ್ನು ಹಾಕುತ್ತಾರೆ. ಹಗಲಿನ ಸಮಯದಲ್ಲಿ, ಇಳಿಜಾರುಗಳಲ್ಲಿನ ಸಂವೇದಕಗಳು ಅಧಿಕ ತಾಪಮಾನವನ್ನು ಮತ್ತು ಕಣಿವೆಯಿಂದ ಹೆಚ್ಚು ಗಾಳಿ ಬೀಸುವುದನ್ನು ತೋರಿಸುತ್ತವೆ. ಇದು ಯಾವ ವಿದ್ಯಮಾನವನ್ನು ಸೂಚಿಸುತ್ತದೆ?

A. ತಂಪಾದ ನಂತರ ರಾತ್ರಿಯ ಸಮಯದಲ್ಲಿ ಬೀಸುವ ಪರ್ವತದ ಮಂದ ಮಾರುತ
B. ಇಳಿಜಾರಿನ ಬಿಸಿಯಾಗುವಿಕೆಯಿಂದ ಹಗಲಿನ ಸಮಯದಲ್ಲಿ ಬೀಸುವ ಕಣಿವೆಯ ಮಂದ ಮಾರುತ ✓
C. ದೂರದ ಜಲಮೂಲಗಳಿಂದ ಬೀಸುವ ಸಮುದ್ರದ ಮಂದ ಮಾರುತ
D. ಹತ್ತಿರದ ಬಯಲು ಪ್ರದೇಶಗಳಿಂದ ಬೀಸುವ ನೆಲದ ಮಂದ ಮಾರುತ

**Q6** Electromagnetic Induction

ಕಾಂತಕ್ಷೇತ್ರದ ದಿಕ್ಕು ಉತ್ತರದಿಂದ ದಕ್ಷಿಣಕ್ಕೆ ಇದ್ದರೆ ಮತ್ತು ವಾಹಕವು ಮೇಲ್ಮುಖವಾಗಿ ಚಲಿಸಿದರೆ, ಫ್ಲೆಮಿಂಗ್‌ನ ಬಲಗೈ ನಿಯಮವನ್ನು ಬಳಸಿಕೊಂಡಾಗ ಪ್ರೇರಿತ ವಿದ್ಯುತ್ ಪ್ರವಾಹದ ದಿಕ್ಕು ಯಾವುದು?

A. ವೀಕ್ಷಕನ ಕಡೆಗೆ
B. ಪಶ್ಚಿಮದ ಕಡೆಗೆ
C. ಪೂರ್ವದ ಕಡೆಗೆ ✓
D. ವೀಕ್ಷಕನಿಂದ ದೂರಕ್ಕೆ

Blackbook Vocabulary — Now in the App! ► Download Now on Google Play

**Q7** Excretory System (Kidney)

ಮೂತ್ರ ಉತ್ಪಾದನೆಯ ಸಮಯದಲ್ಲಿ ಎಷ್ಟು ಪ್ರಮಾಣದ ನೀರು ಮರುಹೀರಿಕೊಳ್ಳಬೇಕು ಎಂಬುದನ್ನು ಯಾವುದು ನಿರ್ಧರಿಸುತ್ತದೆ?

- A. ಹೆಚ್ಚುವರಿ ನೀರು ✓
- B. ಗ್ಲುಕೋಸ್
- C. ಆಮ್ಲಜನಕ
- D. ಪ್ರೋಟೀನ್

**Q8** Extraction & Metallurgy

ಸೋಡಿಯಂ ಅನ್ನು ಅದರ ಸಂಯುಕ್ತದಿಂದ ಹೊರತೆಗೆಯಲು ಸಾಮಾನ್ಯವಾಗಿ ಬಳಸುವ ವಿಧಾನ ಯಾವುದು?

- A. ವಿದ್ಯುದ್ವಿಭಜನ ಅಪಕರ್ಷಣ ✓
- B. ಇಂಗಾಲವನ್ನು ಬಿಸಿಮಾಡುವುದು
- C. ಭಟ್ಟಿ ಇಳಿಸುವಿಕೆ
- D. ಉಷ್ಣ ವಿಭಜನ ಕ್ರಿಯೆ

**Q9** Five Kingdom Classification

ಬ್ಯಾಕ್ಟೀರಿಯಾ ಮತ್ತು ಸಯನೋಬ್ಯಾಕ್ಟೀರಿಯಾ ಎರಡರಲ್ಲೂ ಯಾವ ಗುಣಲಕ್ಷಣವು ಸಾಮಾನ್ಯವಾಗಿರುತ್ತದೆ?

- A. ಎರಡೂ ಸಹ ಏಕಕೋಶೀಯ ಪ್ರೊಕ್ಯಾರಿಯೋಟ್‌ಗಳು ✓
- B. ಎರಡೂ ಸಹ ಬೀಜಗಳನ್ನು ರೂಪಿಸುವ ಮೂಲಕ ಸಂತಾನೋತ್ಪತ್ತಿ ಮಾಡುತ್ತವೆ
- C. ಎರಡೂ ಸಹ ಮೆಲುಕುಹಾಕುವ ಪ್ರಾಣಿಗಳ ಕರುಳಿನಲ್ಲಿ ವಾಸಿಸುತ್ತವೆ
- D. ಎರಡೂ ಸಹ ಸ್ಪಷ್ಟವಾದ ನ್ಯೂಕ್ಲಿಯಸ್ ಅನ್ನು ಹೊಂದಿವೆ

**Q10** Human Eye & Defects

ಒಬ್ಬ ವಿದ್ಯಾರ್ಥಿಯು ದೂರದಲ್ಲಿರುವ ಮತ್ತು ಹತ್ತಿರದಲ್ಲಿರುವ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಕಷ್ಟಪಡುತ್ತಿದ್ದಾನೆ. ಪರೀಕ್ಷೆಯ ನಂತರ, ಕಣ್ಣಿನ ಸ್ನಾಯುಗಳು ಮಸೂರದ ಸಂಗಮದೂರವನ್ನು ಸರಿಯಾಗಿ ಸರಿಹೊಂದಿಸಲು ಸಾಧ್ಯವಾಗುತ್ತಿಲ್ಲ ಎಂದು ಕಂಡುಬಂದಿದೆ. ಈ ಸಮಸ್ಯೆಗೆ ಹೆಚ್ಚಾಗಿ ಮಾನವನ ಕಣ್ಣಿನ ಯಾವ ಭಾಗವು ಕಾರಣವಾಗಿರುತ್ತದೆ?

- A. ಕಾರ್ನಿಯ
- B. ರೆಟಿನಾ
- C. ಸಿಲಿಯರಿ ಸ್ನಾಯುಗಳು ✓
- D. ಐರಿಸ್

**Q11** Magnetic Effects of Current

ಒಂದು ವಾಹಕದ ಮೇಲೆ ಬಲದ ದಿಕ್ಕನ್ನು ನಿರ್ಧರಿಸಲು ಒಬ್ಬ ವಿದ್ಯಾರ್ಥಿಯು ಫ್ಲೆಮಿಂಗ್‌ನ ಎಡಗೈ ನಿಯಮವನ್ನು ಬಳಸುತ್ತಾನೆ. ಒಂದು ವೇಳೆ ತೋರುಬೆರಳು ಉತ್ತರ ದಿಕ್ಕಿಗೆ ಮತ್ತು ಮಧ್ಯದ ಬೆರಳು ಪೂರ್ವಕ್ಕೆ ತೋರಿಸಿದರೆ, ಬಲವು ಯಾವ ದಿಕ್ಕಿನಲ್ಲಿ ವರ್ತಿಸುತ್ತದೆ?

- A. ಪಶ್ಚಿಮದೆಡೆಗೆ
- B. ಮೇಲ್ಮುಖವಾಗಿ ✓
- C. ಕೆಳಮುಖವಾಗಿ
- D. ದಕ್ಷಿಣದೆಡೆಗೆ

**Q12** Mechanics

ಒಂದು ಕಾರು 10 ಸೆಕೆಂಡುಗಳ ಕಾಲ ಸ್ಥಿರವಾದ ಜವದಲ್ಲಿ ಚಲಿಸುತ್ತದೆ ಮತ್ತು ನಂತರ 5 ಸೆಕೆಂಡುಗಳ ಕಾಲ ತನ್ನ ಜವವನ್ನು ಹೆಚ್ಚಿಸಿಕೊಳ್ಳುತ್ತದೆ. ಒಬ್ಬ ವಿದ್ಯಾರ್ಥಿಯು ಈ ಕಾರಿನ ಜವ-ಕಾಲ ನಕ್ಷೆಯನ್ನು ಗಮನಿಸುತ್ತಾನೆ. ಈ 15 ಸೆಕೆಂಡುಗಳಲ್ಲಿ ಕಾರು ಪ್ರಯಾಣಿಸಿದ ಒಟ್ಟು ದೂರವನ್ನು ಲೆಕ್ಕಹಾಕಲು ವಿದ್ಯಾರ್ಥಿಯು ನಕ್ಷೆಯನ್ನು ಹೇಗೆ ಬಳಸಬಹುದು?

- A. ನಕ್ಷೆಯಲ್ಲಿ ತೋರಿಸಿರುವ ಸರಾಸರಿ ಜವದಿಂದ ಒಟ್ಟು ಸಮಯವನ್ನು ಗುಣಿಸುವ ಮೂಲಕ
- B. ವೇಗೋತ್ಕರ್ಷ ವಿಭಾಗದ ಅಡಿಯಲ್ಲಿನ ಪ್ರದೇಶವನ್ನು ಮಾತ್ರ ಬಳಸುವ ಮೂಲಕ
- C. ಅಂತಿಮ ಜವವನ್ನು15 ಸೆಕೆಂಡುಗಳೆಂದು ತೆಗೆದುಕೊಂಡು ಅದನ್ನು 15 ರಿಂದ ಗುಣಿಸುವ ಮೂಲಕ
- D. ಜವ-ಕಾಲ ನಕ್ಷೆಯ ಅಡಿಯಲ್ಲಿನ ಪ್ರತಿಯೊಂದು ವಿಭಾಗದ ಪ್ರದೇಶವನ್ನು ಲೆಕ್ಕಹಾಕಿ ನಂತರ ಅವುಗಳನ್ನು ಕೂಡಿಸುವ ಮೂಲಕ ✓

**Q13** Mirrors & Lenses

ಒಂದು ಕೇಂದ್ರೀಕರಿಸುವ ದರ್ಪಣದ ವಕ್ರತಾ ತ್ರಿಜ್ಯವು 30 cm ಆಗಿದೆ. ಒಂದು ವಸ್ತುವನ್ನು ಪ್ರಧಾನ ಅಕ್ಷದ ಮೇಲೆ ಧ್ರುವದಿಂದ 60 cm ದೂರದಲ್ಲಿ ಇರಿಸಿದರೆ, ರೂಪುಗೊಂಡ ಬಿಂಬದ ಸ್ವರೂಪವೇನು?

- A. ಬಿಂಬವು ವಸ್ತುವಿನ ಅದೇ ಬದಿಯಲ್ಲಿ ಮಿಥ್ಯ ಮತ್ತು ನೇರವಾಗಿರುತ್ತದೆ
- B. ಬಿಂಬವು ವಸ್ತುವಿನ ಅದೇ ಸ್ಥಾನದಲ್ಲಿರುತ್ತದೆ
- C. ಬಿಂಬವು ವಸ್ತುವಿನ ಅದೇ ಬದಿಯಲ್ಲಿ ನೈಜ ಮತ್ತು ತಲೆಕೆಳಗಾಗಿರುತ್ತದೆ ✓
- D. ಬಿಂಬವು ವಿರುದ್ಧ ದಿಕ್ಕಿನಲ್ಲಿ ನೈಜ ಮತ್ತು ನೇರವಾಗಿರುತ್ತದೆ

Blackbook Vocabulary — Now in the App! ▶ Download Now on Google Play

generated by rank.qmaths.in

**Q14** Mixtures, Solutions, Colloids

ದ್ರವಗಳಲ್ಲಿನ ಘನಗಳು ಮತ್ತು ಅನಿಲಗಳ ಕರಗುವಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಯು ಸಾಮಾನ್ಯವಾಗಿ **ಸರಿಯಾಗಿದೆ**?

A. ದ್ರವಗಳಲ್ಲಿ ಘನಗಳ ಕರಗುವಿಕೆಯು ಕಡಿಮೆಯಾಗುತ್ತದೆ, ಆದರೆ ದ್ರವಗಳಲ್ಲಿನ ಅನಿಲಗಳ ಕರಗುವಿಕೆಯು ಉಷ್ಣತೆಯ ಹೆಚ್ಚಳದ ಜೊತೆಗೆ ಹೆಚ್ಚಾಗುತ್ತದೆ

B. ದ್ರವಗಳಲ್ಲಿ ಘನಗಳ ಕರಗುವಿಕೆ ಹೆಚ್ಚಾಗುತ್ತದೆ, ಆದರೆ ಉಷ್ಣತೆಯು ಹೆಚ್ಚಾದಂತೆ ದ್ರವಗಳಲ್ಲಿನ ಅನಿಲಗಳ ಕರಗುವಿಕೆ ಕಡಿಮೆಯಾಗುತ್ತದೆ ✓

C. ದ್ರವಗಳಲ್ಲಿನ ಘನಗಳು ಮತ್ತು ಅನಿಲಗಳ ಕರಗುವಿಕೆಯು ಉಷ್ಣತೆಯ ಹೆಚ್ಚಳದ ಜೊತೆಗೆ ಕಡಿಮೆಯಾಗುತ್ತದೆ

D. ದ್ರವಗಳಲ್ಲಿನ ಘನಗಳು ಮತ್ತು ಅನಿಲಗಳೆರಡರ ಕರಗುವಿಕೆಯು ಉಷ್ಣತೆಯ ಹೆಚ್ಚಳದೊಂದಿಗೆ ಹೆಚ್ಚಾಗುತ್ತದೆ

**Q15** Newton's Laws of Motion

ನ್ಯೂಟನ್‌ನ ಮೂರನೇ ನಿಯಮ ಜೋಡಿಗಳಲ್ಲಿ ಕ್ರಿಯಾ ಮತ್ತು ಪ್ರತಿಕ್ರಿಯಾ ಬಲಗಳ ಪರಿಮಾಣಕ್ಕೆ ಏನಾಗುತ್ತದೆ?

A. ಅವು ಬಲವಾದ ಶಕ್ತಿಯನ್ನು ರಚಿಸಲು ಒಗ್ಗೂಡುತ್ತವೆ

B. ಅವು ಯಾವಾಗಲೂ ಪರಿಮಾಣದಲ್ಲಿ ಸಮಾನವಾಗಿರುತ್ತವೆ ಮತ್ತು ದಿಕ್ಕಿನಲ್ಲಿ ವಿರುದ್ಧವಾಗಿರುತ್ತವೆ ✓

C. ಅವು ಪರಸ್ಪರ ಸಂಪೂರ್ಣವಾಗಿ ರದ್ದುಗೊಳ್ಳುತ್ತವೆ

D. ಅವು ಯಾವ ವಸ್ತು ಭಾರವಾಗಿರುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ

**Q16** Non-communicable (Diabetes, Cancer, etc.)

ಧೂಮಪಾನವು ರಕ್ತನಾಳಗಳಿಗೆ ಸಂಬಂಧಿಸಿದ ಈ ಕೆಳಗಿನ ಯಾವ ಕಾಯಿಲೆಯ ಅಪಾಯ ಸಂಭವತೆಯನ್ನು ಹೆಚ್ಚಿಸುತ್ತದೆ?

A. ಹೃದಯರಕ್ತನಾಳದ ಕಾಯಿಲೆ ✓

B. ಗಳಗಂಡ

C. ಮಧುಮೇಹ

D. ರಕ್ತಹೀನತೆ

**Q17** Photosynthesis

ಒಂದು ಮರುಭೂಮಿ ಸಸ್ಯದಲ್ಲಿ, ಇಂಗಾಲದ ಡೈಆಕ್ಸೈಡ್ ಅನ್ನು ರಾತ್ರಿಯಲ್ಲಿ ತೆಗೆದುಕೊಳ್ಳಲಾಗುತ್ತದೆ ಮತ್ತು ಅದನ್ನು ಮಧ್ಯಂತರವಾಗಿ ಶೇಖರಿಸಿಡಲಾಗುತ್ತದೆ, ಇದನ್ನು ನಂತರ ಕಾರ್ಬೋಹೈಡ್ರೇಟ್ ಸಂಶ್ಲೇಷಣೆಗೆ ಹಗಲಿನಲ್ಲಿ ಬಳಸಲಾಗುತ್ತದೆ. ಈ ಹೊಂದಾಣಿಕೆಯು ಸಸ್ಯಕ್ಕೆ ಅದರ ಪರಿಸರದಲ್ಲಿ ಯಾವ ಪ್ರಯೋಜನವನ್ನು ನೀಡುತ್ತದೆ?

A. ಇದು ತಂಪಾದ ರಾತ್ರಿಯ ವೇಳೆಯಲ್ಲಿ ಪತ್ರರಂಧ್ರಗಳು ತೆರೆಯುವುದರಿಂದ ನೀರಿನ ನಷ್ಟವನ್ನು ಕಡಿಮೆ ಮಾಡುತ್ತದೆ ✓

B. ಇದು ಪತ್ರಹರಿತ್ತುವಿನ ಅಗತ್ಯವನ್ನು ನಿವಾರಿಸುತ್ತದೆ

C. ಇದು ಹಗಲಿನಲ್ಲಿ ದ್ಯುತಿಸಂಶ್ಲೇಷಣೆಯ ದರವನ್ನು ಹೆಚ್ಚಿಸುತ್ತದೆ

D. ಇದು ರಾತ್ರಿಯಲ್ಲಿ ಮಾತ್ರ ಕಾರ್ಬೋಹೈಡ್ರೇಟ್ ಸಂಶ್ಲೇಷಣೆಗೆ ಅವಕಾಶ ನೀಡುತ್ತದೆ

**Q18** Plant vs Animal Cell

ಒಬ್ಬ ಸಸ್ಯಶಾಸ್ತ್ರಜ್ಞರು ಸೂಕ್ಷ್ಮದರ್ಶಕದ ಅಡಿಯಲ್ಲಿ ಎರಡು ರೀತಿಯ ಕೋಶಗಳನ್ನು ಗಮನಿಸುತ್ತಾರೆ. ಮೊದಲ ವಿಧವು ದಪ್ಪ ಕೋಶಭಿತ್ತಿಗಳು ಮತ್ತು ದೊಡ್ಡ ಸೂಕ್ಷ್ಮಕುಹರಗಳನ್ನು ಹೊಂದಿದ್ದರೆ, ಎರಡನೇ ವಿಧವು ಕೋಶಭಿತ್ತಿಗಳನ್ನು ಹೊಂದಿರುವುದಿಲ್ಲ ಮತ್ತು ಸಣ್ಣ ಸೂಕ್ಷ್ಮಕುಹರಗಳನ್ನು ಹೊಂದಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಏನು ನಿರ್ಣಯಿಸಬಹುದು?

A. ಎರಡೂ ಮಾದರಿಗಳು ಸಸ್ಯ ಅಂಗಾಂಶಗಳಾಗಿವೆ

B. ಮೊದಲನೆಯ ಮಾದರಿಯು ಪ್ರಾಣಿ ಅಂಗಾಂಶ, ಮತ್ತು ಎರಡನೆಯ ಮಾದರಿಯು ಸಸ್ಯ ಅಂಗಾಂಶ

C. ಮೊದಲನೆಯ ಮಾದರಿಯು ಸಸ್ಯ ಅಂಗಾಂಶ, ಮತ್ತು ಎರಡನೆಯದು ಪ್ರಾಣಿ ಅಂಗಾಂಶ ✓

D. ಎರಡೂ ಮಾದರಿಗಳು ಪ್ರಾಣಿ ಅಂಗಾಂಶಗಳಾಗಿವೆ

**Q19** Pollution (Air, Water, Soil, Noise)

ಈ ಕೆಳಗಿನವುಗಳಲ್ಲಿ ಯಾವುದನ್ನು ಜೈವಿಕವಾಗಿ ವಿಘಟನೀಯವಲ್ಲದ ಪದಾರ್ಥವೆಂದು ಪರಿಗಣಿಸಲಾಗಿದೆ?

A. ಪ್ಲಾಸ್ಟಿಕ್ ಚೀಲಗಳು ✓

B. ಮರದ ಹಲಗೆಗಳು

C. ಬಾಳೆ ಎಲೆಗಳು

D. ಹತ್ತಿ ಬಟ್ಟೆಗಳು

**Q20** Properties & Tests

ಆಮ್ಲಗಳು ಮತ್ತು ಪ್ರತ್ಯಾಮ್ಲಗಳು ಚರ್ಮದ ಮೇಲೆ ಬೀರುವ ಪರಿಣಾಮದಲ್ಲಿ ಹೇಗೆ ಹೋಲಿಕೆ ಆಗುತ್ತವೆ?

A. ಅವೆರಡೂ ಯಾವುದೇ ಹಾನಿಯಾಗದಂತೆ ಚರ್ಮವನ್ನು ಸ್ವಚ್ಛಗೊಳಿಸುತ್ತವೆ

B. ಅವೆರಡೂ ಕಿರಿಕಿರಿ ಅಥವಾ ಸುಟ್ಟು ಗಾಯಗಳನ್ನು ಉಂಟುಮಾಡುತ್ತವೆ ✓

C. ಅವೆರಡೂ ಮಾಯಿಶ್ಚರೈಸರ್‌ಗಳಾಗಿ ಕಾರ್ಯನಿರ್ವಹಿಸುತ್ತವೆ

D. ಅವೆರಡೂ ಚರ್ಮವನ್ನು ಶಮನಗೊಳಿಸುತ್ತವೆ

**Q21** Soaps & Detergents

ಸೋಪಿನ ಅಣುಗಳನ್ನು ನೀರಿಗೆ ಸೇರಿಸಿದಾಗ ಏನಾಗುತ್ತದೆ?

A. ಸೋಪಿನ ಅಣುಗಳು ಯಾವುದೇ ಒಪ್ಪಗೊಳಿಸಿಕೆಗೆ ಒಳಗಾಗದೆ ಯಾದೃಚ್ಛಿಕವಾಗಿ ಕರಗುತ್ತವೆ

B. ಹೈಡ್ರೋಕಾರ್ಬನ್ ಬಾಲಗಳು ನೀರಿನಲ್ಲಿ ಉಳಿಯುತ್ತವೆ, ಅದೇ ವೇಳೆ ಅಯಾನಿಕ್ ತಲೆಗಳು ಹೊರಹೊಮ್ಮುತ್ತವೆ

C. ಅಯಾನಿಕ್ ತಲೆಗಳು ನೀರಿನಲ್ಲಿ ಉಳಿಯುತ್ತವೆ, ಅದೇ ವೇಳೆ ಹೈಡ್ರೋಕಾರ್ಬನ್ ಬಾಲಗಳು ಹೊರಹೊಮ್ಮುತ್ತವೆ ✓

D. ಅಯಾನಿಕ್ ತಲೆಗಳು ಮತ್ತು ಬಾಲಗಳು ಎರಡೂ ಸಂಪೂರ್ಣವಾಗಿ ನೀರಿನೊಳಗೆ ಉಳಿಯುತ್ತವೆ

Blackbook Vocabulary — Now in the App! ▶ Download Now on Google Play

**Q22** Types (Combination, Decomposition, etc.)

ಒಬ್ಬ ರಸಾಯನಶಾಸ್ತ್ರಜ್ಞನು ಕ್ಯಾಲ್ಸಿಯಂ ಕಾರ್ಬೋನೇಟ್, ಸಿಲ್ವರ್ ಕ್ಲೋರೈಡ್ ಮತ್ತು ಲೆಡ್ ನೈಟ್ರೇಟ್ ಅನ್ನು ಸೂರ್ಯನ ಬೆಳಕಿಗೆ ಒಡ್ಡುತ್ತಾನೆ. ಯಾವ ಸಂಯುಕ್ತ/ಗಳು ಸ್ಪಷ್ಟವಾಗಿ ಕಾಣಿಸುವ ಬದಲಾವಣೆಯನ್ನು ತೋರಿಸುತ್ತವೆ?

A. ಸಿಲ್ವರ್ ಕ್ಲೋರೈಡ್ ಮಾತ್ರ ✓

B. ಲೆಡ್ ನೈಟ್ರೇಟ್ ಮಾತ್ರ

C. ಎಲ್ಲಾ ಮೂರು ಸಂಯುಕ್ತಗಳು

D. ಕ್ಯಾಲ್ಸಿಯಂ ಕಾರ್ಬೋನೇಟ್ ಮಾತ್ರ

**Q23** Ultrasound & Applications

ವೈದ್ಯಕೀಯ ಚಿತ್ರಣ (medical imaging) ದಲ್ಲಿ ಅಲ್ಟ್ರಾಸೌಂಡ್ ಅನ್ನು ಬಳಸುವುದು ಹೇಗೆ ಎನ್ನುವುದನ್ನು ಈ ಕೆಳಗಿನ ಯಾವ ಹೇಳಿಕೆಯು ಅತ್ಯುತ್ತಮವಾಗಿ ವಿವರಿಸುತ್ತದೆ?

A. ಅಲ್ಟ್ರಾಸೌಂಡ್ ತರಂಗಗಳು ಯಾವುದೇ ಅಂತರಕ್ರಿಯೆಯಿಲ್ಲದೆ ರಕ್ತದ ಮೂಲಕ ಹಾದುಹೋಗಿ ಚಿತ್ರಗಳನ್ನು ಮೂಡಿಸುತ್ತವೆ

B. ಮೂಳೆಗಳು ಅಲ್ಟ್ರಾಸೌಂಡ್ ತರಂಗಗಳನ್ನು ಹೀರಿಕೊಂಡು ಮೃದು ಅಂಗಾಂಶ ದೃಶ್ಯಗಳನ್ನು ಮೂಡಿಸುತ್ತವೆ

C. ಅಲ್ಟ್ರಾಸೌಂಡ್ ತರಂಗಗಳು ದೃಗ್ಗೋಚರ ಚಿತ್ರಗಳನ್ನು ಮೂಡಿಸಲು ಅಂಗಾಂಶಗಳನ್ನು ಅಯಾನೀಕರಿಸುತ್ತವೆ

D. ಅಲ್ಟ್ರಾಸೌಂಡ್ ತರಂಗಗಳು ಅಂಗಾಂಶಗಳಿಗೆ ಪ್ರತಿಫಲಿಸಿ ದೇಹದ ಆಂತರಿಕ ಚಿತ್ರಗಳನ್ನು ಮೂಡಿಸುತ್ತವೆ ✓

**Q24** Work, Energy & Power

800 J ಚಲನ ಶಕ್ತಿಯೊಂದಿಗೆ ಚಲಿಸುವ ಒಂದು ವಸ್ತುವು −600 J ನ ನಿವ್ವಳ ಕೆಲಸವನ್ನು ಅನುಭವಿಸುತ್ತದೆ. ಹಾಗಾದರೆ ವಸ್ತುವಿಗೆ ಏನಾಗುತ್ತದೆ?

A. ಅದು ಚಲನೆಯನ್ನು ನಿಲ್ಲಿಸುತ್ತದೆ

B. ಅದು ತನ್ನ ಜವವನ್ನು ದ್ವಿಗುಣಗೊಳಿಸುತ್ತದೆ

C. ಅದು ಅರ್ಧದಷ್ಟು ವೇಗದಲ್ಲಿ ಚಲಿಸುತ್ತದೆ ✓

D. ಅದು ಅದೇ ಜವದಲ್ಲಿ ಮುಂದುವರಿಯುತ್ತದೆ

**Q25** Work, Energy & Power

ಒಂದು ಸ್ಥಿರ ಬಲವು ಒಂದು ವಸ್ತುವಿನ ಮೇಲೆ ವರ್ತಿಸುತ್ತದೆ ಮತ್ತು ಬಲದ ದಿಕ್ಕಿನಲ್ಲಿ 25 m ದೂರ ಚಲಿಸುವಾಗ 250 J ಕೆಲಸ ಮಾಡುತ್ತದೆ. ಹಾಗಾದರೆ ಬಲದ ಪರಿಮಾಣ ಎಷ್ಟು?

A. 25 N

B. 15 N

C. 10 N ✓

D. 20 N

Blackbook Vocabulary — Now in the App! ► Download Now on Google Play